ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 29 ಶನಿವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 104 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಾಳೆ ಪ್ರತಿಭಾ ಪುರಸ್ಕಾರ, ಅಭಿನಂದನಾ ಕಾರ್ಯಕ್ರಮ



ಮೈಸೂರು, ಜು.28(ಜಿಎ)–ಡಾ. ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತಿ ಅಂಗವಾಗಿ ಜು.30ರಂದು ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ, ಬೌದ್ಧ ಬಿಕ್ಕುಗಳು ಹಾಗೂ ವಿಶೇಷ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿದ ಎಂದು ಸಂಘದ ಜಿಲ್ಲಾಧ್ಯಕ್ಷ ಡಾ.ಎಂ.ಡಿ.ಶಿವರಾಮಕೃಷ್ಣ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10.30ಕ್ಕೆ ನಗರದ ಕಲಾ ಮಂದಿರದಲ್ಲಿ ಕಾರ್ಯಕ್ರಮ ಏರ್ಪಡಿಸಿದ್ದು, ಕೊಳ್ಳೆಗಾಲದ ಜೇತವನ ಬುದ್ಧ ವಿಹಾರದ ಮನೋರಖ್ಖಿತ ಬಂತೇಜಿ, ಚಾಮರಾಜನಗರದ ನಳಂದ ಬೌದ್ಧ ವಿವಿಯ ಬೋದಿದತ್ತ ಥೇರಾ ಬಂತೇಜಿ, ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಮತ್ತು ದಾವಣಗೆರೆಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರು ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಆದ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವರಾದ ಕೆ.ಹೆಚ್.ಮುನಿಯಪ್ಪ ಮಹರ್ಷಿ ವಾಲ್ಮೀಕಿ ಭಾವಚಿತ್ರ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಭಗವಾನ್ ಬುದ್ಧರ ಭಾವಚಿತ್ರಕ್ಕೆ ಮತ್ತು ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಸಂವಿಧಾನದ ಪೀಠಿಕೆ ಬೋಧನೆ ಮಾಡುತ್ತಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಆರ್.ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್ ಮತ್ತು ಡಾ. ಡಿ. ತಿಮ್ಮಯ್ಯ ಆಗಮಿಸಲಿದ್ದಾರೆ. ಮಾಜಿ ಮೇಯರ್ ಪುರುಷೋತ್ತಮ್ ಮತ್ತು ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ವಿಶೇಷವಾಗಿ ಆಹ್ವಾನಿಸಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಡಿ.ಚಂದ್ರಶೇಖರಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸನ್ಮಾನ, ಪುರಸ್ಕಾರ: ಕಾರ್ಯಕ್ರಮದಲ್ಲಿ ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ರಷ್ಟು ಅಂಕ ಪಡೆದಿರುವ 200 ವಿದ್ಯಾರ್ಥಿಗಳಿಗೆ ಪುರಸ್ಕರಿಸಲಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಯುವರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ.ನಂಜುಂಡಯ್ಯ, ಧಮ್ಮ ಕ್ಷೇತ್ರದಿಂದ ಐಪಿಎಸ್ ಅಧಿಕಾರಿ ಪುಟ್ಟಮಾದಯ್ಯ ಮತ್ತು ಆರ್.ಮಹದೇವಪ್ಪ, ಮಾಧ್ಯಮ ಕ್ಷೇತ್ರದಿಂದ ಲಿಖಿತ. ಕೆ.ವಿ. ಮತ್ತು ನಂದಿನಿ.ಕೆ ಅವರ ಸೇವೆಯನ್ನು ಪರಿಗಣಿಸಿ ಅಭಿನಂದಿಸಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷರಾದ ಜೆ.ಗಂಗಾಧರ್, ಎಂ.ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿ ಪಿ. ರಾಘವೇಂದ್ರ ಖಜಾಂಚಿ ಹೆಚ್.ಪಿ.ಮಹದೇವ, ಸಂಘಟನಾ ಕಾರ್ಯದರ್ಶಿ ಡಾ.ಪಿ.ನಂದ ಪ್ರಕಾಶ್ ಮತ್ತು ಗೌರವ ಸಲಹೆಗಾರ ದ್ಯಾವಪ್ಪ ನಾಯಕ ಉಪಸ್ಥಿತರಿದ್ದರು.

ನಾಳೆ 'ಆಲ್ ರೈಟ್ ಮಂತ್ರ ಮಾಂಗಲ್ಯ' ನಾಟಕ

ಮೈಸೂರು, ಜು. 28– ರಂಗಕರ್ಮಿ ಮೈಮ್ ರಮೇಶ್ ಅವರ ಜಿಪಿಐಇಆರ್ ತಂಡವು ಜುಲೈ 30ರಂದು ಸಂಜೆ 7 ಗಂಟೆಗೆ ನಗರದ ಕಲಾಮಂದಿರ ಪಕ್ಕದ ಕಿರು ರಂಗಮಂದಿರದಲ್ಲಿ 'ಆಲ್ ರೈಟ್ ಮಂತ್ರ ಮಾಂಗಲ್ಯ' ನಾಟಕ ಪ್ರಸ್ತುತಪಡಿಸಲಿದೆ. ಪತ್ರಕರ್ತ, ಲೇಖಕ ಗಣೇಶ ಅಮೀನಗಡ ಅವರ ಹೊಸ ನಾಟಕ ಇದಾಗಿದ್ದು, ಕುವೆಂಪು ಅವರ ಮಂತ್ರ ಮಾಂಗಲ್ಯ ಆಧರಿಸಿದೆ. ಈ ನಾಟಕದ ವಿನ್ಯಾಸ ಹಾಗೂ ನಿರ್ದೇಶನ ರಂಗಾಯಣದ ಕಲಾವಿದರಾಗಿದ್ದ ಮೈಮ್ ರಮೇಶ್ ಅವರದು. ಎನ್‌ಎಸ್‌ಡಿ ಪದವೀಧರ ಜಗದೀಶ್ ಆರ್.ಜಾಣಿ ಸಂಗೀತ ನೀಡಲಿದ್ದಾರೆ.

ನಾಟಕಕ್ಕೆ ಮುನ್ನ ನಾಟಕದ ಕೃತಿಯು ಪ್ರೇಕ್ಷಕರಿಂದ ಬಿಡುಗಡೆಗೊಳ್ಳಲಿದೆ ಎಂದು ಜಿಪಿಐಇಆರ್ ತಂಡದ ಸಂಚಾಲಕ ಎಂ.ಪಿ.ಹರಿದತ್ತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನ್ನಭಾಗ್ಯ ಜೊತೆಗೆ ಸಿರಿಧಾನ್ಯ ಕೂಡ ನೀಡಿದರೆ ಅನುಕೂಲ



ಮೈಸೂರು, ಜು.28(ಜಿಎ)–ಸರ್ಕಾರ ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಕೊರತೆ ಹಿನ್ನೆಲೆಯಲ್ಲಿ ಹಣ ನೀಡುವ ಬದಲು ಸಿರಿಧಾನ್ಯವನ್ನು ನೀಡಿದರೆ, ಸಿರಿಧಾನ್ಯ ಬೆಳೆಯುವ ರೈತರಿಗೂ ಮಾರುಕಟ್ಟೆ ದೊರೆಯುತ್ತದೆ ಎಂದು ಪೀಪಲ್ ಟ್ರೀ ಸಂಸ್ಥೆಯ ಕೃಷಿ ತಾಂತ್ರಿಕ ಸಂಯೋಜಕ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನೇದಿನೆ ಹವಮಾನ ವೈಪರೀತ್ಯದಿಂದ ಬೆಳೆಯುತ್ತಿರುವ ಭತ್ತ, ಗೋಧಿಯಂತಹ ಏಕ ಬೆಳೆ ವ್ಯವಸಾಯ ಪದ್ಧತಿ ಕ್ಷೀಣಿಯಾಗುತ್ತಿರುವ ಹಿನ್ನೆಲೆಯಲ್ಲಿ ಪೀಪಲ್ ಟ್ರೀ ಸಂಸ್ಥೆಯೂ ಸಹಭಾಗಿತ್ವದಿಂದ ಸಿರಿಧಾನ್ಯ ಬೆಳೆಗಳನ್ನು ಹಳ್ಳಿ ಮತ್ತು ಹಾಡಿಗಳಲ್ಲಿ ಅನಿಷ್ಠಾನಗೊಳಿಸಿದೆ ಎಂದರು.

ಅಕ್ಕಿ ಕೊರತೆಯಿಂದ ರಾಜ್ಯ ಸರ್ಕಾರವು ಅನ್ನಭಾಗ್ಯದ ಯೋಜನೆಯಡಿ 5 ಕೆ.ಜಿ ಅಕ್ಕಿಯ ಬದಲು 170 ರೂ. ನೀಡುತ್ತಿದೆ. ಅದರ ಬದಲು ಪಡಿತರ ವ್ಯವಸ್ಥೆಯಲ್ಲಿ ನವಣೆ ಮತ್ತು ಸಾಮೆ ಅಕ್ಕಿಗಳನ್ನು ಅಳವಡಿಸಿಕೊಂಡರೆ, ರೈತರಿಗೂ ಒಳಿತಾಗಲಿದೆ. ಜೊತೆಗೆ ಸಿರಿಧಾನ್ಯ ಬೆಳೆಯುವ ರೈತರಿಗೂ ಮಾರುಕಟ್ಟೆ ದೊರೆಯುತ್ತದೆ. ಶಾಲಾ ಮಕ್ಕಳಿಗೆ ನೀಡುತ್ತಿರುವ ಬಿಸಿಯೂಟದಲ್ಲಿ ಸಿರಿಧಾನ್ಯವನ್ನು ಬಳಸಿಕೊಂಡರೆ ಮಕ್ಕಳಿಗೆ ಪೌಷ್ಟಿಕಾಂಶ ನೀಡಿದಂತಾಗುತ್ತದೆ ಎಂದು ಒತ್ತಾಯಿಸಿದರು.

ಎಲ್ಲಾ ರೀತಿಯ ವಾತಾವರಣದಲ್ಲಿಯೂ ತಾಳಿಕೆ ಗುಣ ಹೊಂದಿರುವ ಸಿರಿಧಾನ್ಯಕ್ಕೆ ಉತ್ತೇಜನವೇ ಭವಿಷ್ಯದ ಸಮಸ್ಯೆಗಳಿಗೆ ಪರಿಹಾರವಾಗಿದ್ದು, ಆಹಾರ ಭದ್ರತೆಗೂ ಮುಖ್ಯ ಮಾರ್ಗವಾಗಿದೆ. ಆದರಿಂದ ಸರ್ಕಾರ ನೀಡುತ್ತಿರುವ ಕಿಸಾನ್ ಸಮ್ಮಾನ್ ಯೋಜನೆಯನ್ನು ಹೆಚ್ಚಿಸಿ ಸಿರಿಧಾನ್ಯಕ್ಕೂ ಅನ್ವಯಿಸಬೇಕಿದೆ. ಸಿರಿಧಾನ್ಯ ಬೆಳೆದು ಪ್ರಕೃತಿಯ ವೈವಿಧ್ಯತೆಯನ್ನು ಕಾಪಾಡುತ್ತಿರುವ ರೈತರಿಗೆ 10 ಸಾವಿರ ರೂ. ನೀಡಬೇಕಿದ್ದು, ಇದರಿಂದ ಪೌಷ್ಟಿಕ, ಆಹಾರ ಮತ್ತು ವಾತಾವರಣದ ಭದ್ರತೆಗೂ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಈಗಾಗಲೇ ನವಣೆ, ಸಾಮೆ, ಕೊರಲೆ, ಊದಲು ಮತ್ತು ಬರಗು ಬೆಳೆಯ ಒಂದು ಹೆಕ್ಟೇರ್‌ಗೆ 10 ಸಾವಿರ ರೂ. ಪ್ರೋತ್ಸಾಹ ಧನ ನೀಡುತ್ತಿದೆ. ಅದನ್ನು ಒಂದು ಎಕರೆಗೆ ಮಾಡಬೇಕಿದೆ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಯಲಕ್ಷ್ಮಿ, ವಸಂತ, ಮಂಜುಳ, ಲಕ್ಷ್ಮಿ ಮತ್ತು ವಿಜಯ ಉಪಸ್ಥಿತರಿದ್ದರು.

ಬಿ.ಎಂ.ರಾಮುಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಲು ಒತ್ತಾಯ



ಮೈಸೂರು, ಜು.28(ಜಿಎ)–ಕಾಂಗ್ರೆಸ್ ಪಕ್ಷಕ್ಕೆ ನಿಷ್ಠಾವಂತ ಕಾರ್ಯಕರ್ತರಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿರುವ ಮುಖಂಡ ಬಿ.ಎಂ.ರಾಮು ಅವರಿಗೆ ಯಾವುದಾದರೂ ನಿಗಮ ಮಂಡಳಿ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ಮೈಸೂರು ನಗರ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮು ಅವರು ಮೇಕೆದಾಟು ಪಾದಯಾತ್ರೆ, ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವ ಹಾಗೂ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರ ಪರವಾಗಿ ವರುಣಾ ಕ್ಷೇತ್ರದ ಪ್ರತಿಯೊಂದು ಹಳ್ಳಿಗೂ ತೆರಳಿ ಪ್ರಚಾರ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ. ಎಂದರು. ಜಿಲ್ಲಾ ಪಂಚಾಯತ್ ಸದಸ್ಯ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷ, ಕೆಪಿಸಿಸಿ ಸದಸ್ಯರಾಗಿ ಪಕ್ಷ ನೀಡಿದ ಎಲ್ಲಾ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿಭಾಯಿಸಿಕೊಂಡು ಬಂದಿರುವ ರಾಮು ಅವರ ಸೇವೆ ಪರಿಗಣಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಯಾವುದಾದರೂ ನಿಗಮ ಮಂಡಳಿಗೆ ಅಧ್ಯಕ್ಷರಾಗಿ ನೇಮಕ ಮಾಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಎಸ್.ಎ. ರಹೀಂ, ವಿವಿ ಸಂಶೋಧಕರ ರಾಜ್ಯಾಧ್ಯಕ್ಷ ಮರಿದೇವಯ್ಯ, ಮುಖಂಡರಾದ ರಾಕೇಶ್ ಕುಮಾರ್, ಚಂದ್ರಶೇಖರ್ ಮತ್ತು ನಾಗೇಂದ್ರ ಉಪಸ್ಥಿತರಿದ್ದರು.

ವಿಕ್ರಂ ಚದುರಂಗ ಅವರ 'ಸ್ಮೃತಿ' ಸಾಂಸ್ಕೃತಿಕ ಸಂಕಥನ ಲೋಕಾರ್ಪಣೆ



ಮೈಸೂರು, ಜು.28 (ಬಿಎಲ್‌ಯು)– ಖ್ಯಾತ ಸಾಹಿತಿ ದಿವಂಗತ ಚದುರಂಗ ಅವರ ಪುತ್ರ ವಿಕ್ರಂ ಚದುರಂಗ ಅವರು ಬರೆದಿರುವ "ಸ್ಮೃತಿ" ಸಾಂಸ್ಕೃತಿಕ ಸಂಕಥನ ಇಂದು ಲೋಕಾರ್ಪಣೆಗೊಂಡಿತು.

ಮೈಸೂರಿನ ಕುವೆಂಪುನಗರದ ವೀಣೆ ಶೇಷಣ್ಣ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಪ್ರೊ.ಹಂಪನಾ ಪುಸ್ತಕವನ್ನು ಬಿಡುಗಡೆ ಮಾಡಿದರು.

ವಿಕ್ರಂ ಚದುರಂಗ ಅವರು ನಿಷ್ಪಕ್ಷಪಾತವಾದ ಹಲವು ವಿಚಾರಗಳನ್ನು ಈ ಪುಸ್ತಕದಲ್ಲಿ ಬರೆದಿದ್ದಾರೆ. ವಾಸ್ತವತೆಯನ್ನು ಮರೆ ಮಾಚದೆ ಬರೆದಿರುವ ಈ ಪುಸ್ತಕ ಸಂಶೋಧನೆಗೆ ಅರ್ಹವಾಗಿದೆ ಎಂದರು.

ವಿಕ್ರಂ ಚದುರಂಗ ಅವರು ತಮ್ಮ ತಂದೆ ಚದುರಂಗ ಅವರ ಸಾಹಿತ್ಯ ಕೃಷಿ, ಸಿನಿಮಾ ಮಾಡಲು ಚದುರಂಗ ಅವರು ವಹಿಸಿದ ಶ್ರಮವನ್ನು ಪುಸ್ತಕದಲ್ಲಿ ದಾಖಲಿಸಿದ್ದಾರೆ. ಚದುರಂಗ ಅವರು ರಾಜ ಮನೆತನಕ್ಕೆ ಸೇರಿರುವ ಕಾರಣ ಮೈಸೂರು ರಾಜವಂಶಸ್ಥರು ಹಾಗೂ ಅರಮನೆಯ ಹಲವು ವಿಚಾರಗಳನ್ನು ಪುಸ್ತಕದಲ್ಲಿ ವಿವರವಾಗಿ ದಾಖಲಿಸಿದ್ದಾರೆ ಎಂದು ಪ್ರೊ. ಹಂಪನಾ ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ವಿಕ್ರಂ ಚದುರಂಗ ಅವರು ಹಲವು ಸಂಗತಿಗಳನ್ನು ಯಾವುದೇ ಉತ್ಪ್ರೇಕ್ಷೆ ಇಲ್ಲದೆ ನೇರ ಹಾಗೂ ಸ್ಪಷ್ಟವಾಗಿ ಬರೆದಿದ್ದಾರೆ. ಅನಾರೋಗ್ಯ ಕ್ಕೀಡಾದರೂ ಮರು ಜೀವ ಪಡೆದು ರಚಿಸಿರುವ ಈ ಪುಸ್ತಕದಲ್ಲಿ ಬಹಳಷ್ಟು ವಿಚಾರಗಳು ಕುತೂಹಲಕ್ಕೆಡೆ ಮಾಡುತ್ತದೆ. ಇಂಗ್ಲಿಷ್ ಹಾಗೂ ಕನ್ನಡ ಭಾಷೆಯ ಮಿಡಿತವಾಗಿರುವ ಈ ಪುಸ್ತಕ ಬಹಳಷ್ಟು ವಿಚಾರಗಳನ್ನು ತೆರೆದಿಡುತ್ತದೆ ಎಂದರು.

ದಿವಂಗತ ಚದುರಂಗ ಅವರು ಜೀವನದಲ್ಲಿ ಬಂದ ಸವಾಲುಗಳನ್ನು ಪ್ರೀತಿಯಿಂದ ಸ್ವೀಕರಿಸಿ ಬದುಕು ಸಾಗಿಸಿದ್ದರು. ವಿಭಿನ್ನ ವ್ಯಕ್ತಿತ್ವದ ಚದುರಂಗ ಅವರು ಕಷ್ಟ ಕಾರ್ಪಣ್ಯಗಳನ್ನು ದಾಟಿ ಸಿನಿಮಾ ಮಾಡಿ ಯಶಸ್ವಿಯಾದರು ಎಂದು ಶ್ರೀಗಳು ಹೇಳಿದರು. ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ದಿವಂಗತ ಡಿ. ದೇವರಾಜ ಅರಸ್ ಅವರ ಮೊಮ್ಮಗ ಸೂರಜ್ ಹೆಗ್ಡೆ, ಪುಸ್ತಕದ ಪ್ರಕಾಶಕ ಡಿ.ಎನ್.ಲೋಕಪ್ಪ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಿನ ಮಹಾರಾಣಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ವೃತ್ತಿ ಕೌಶಲ್ಯ ತರಬೇತಿ

- ಗಳಿಕೆಯೊಂದಿಗೆ ಕಲಿಕೆಗೆ ಹಾದಿ ಮಾಡಿಕೊಡುವ ಉದ್ದೇಶ
- ವರ್ಷಕ್ಕೆ 2.20 ಲಕ್ಷ ರೂಪಾಯಿ ಪ್ಯಾಕೇಜ್ ಆಫರ್

ಮೈಸೂರು, ಜು.28(ಬಿಎಲ್‌ಯು)– ಮೈಸೂರಿನ ಮಹಾರಾಣಿ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮ ಆರಂಭಿಸಲಾಗಿದೆ. ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ ನಂತರ ಪದವಿ ವ್ಯಾಸಂಗ ಮಾಡುತ್ತಲೇ ಉದ್ಯೋಗ ಮಾಡಲು ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ವಿದ್ಯಾರ್ಥಿಗಳಿಗೆ ವೃತ್ತಿ ಕೌಶಲ್ಯ ತರಬೇತಿ ನೀಡಲಾಗುತ್ತದೆ.

ಮೈಸೂರಿನ ಮಹಾರಾಣಿ ಪದವಿ ಪೂರ್ವ ಕಾಲೇಜಿನಲ್ಲಿ ಹೆಚ್‌ಸಿಎಲ್ ಟೆಕ್ನಾಲಜೀಸ್ ನಡೆಸುತ್ತಿರುವ ತರಬೇತಿಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ದ್ವಿತೀಯ ಪಿಯುಸಿಯ ಸೈನ್ಸ್, ಕಾಮರ್ಸ್ ಹಾಗೂ ಆರ್ಟ್ಸ್ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತರಬೇತಿ ನೀಡಲಾಗುತ್ತದೆ. ದ್ವಿತೀಯ ಪಿಯುಸಿ ಪಾಸಾದ ನಂತರ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಅಂತಿಮ ಪರೀಕ್ಷೆ ನಡೆಸಲಾಗುತ್ತದೆ. ಆಯ್ಕೆ ಆದ ವಿದ್ಯಾರ್ಥಿಗಳಿಗೆ ಹೆಚ್‌ಸಿಎಲ್ ಟೆಕ್ನಾಲಜೀಸ್ ಕ್ಯಾಂಪಸ್‌ನಲ್ಲಿ ಹೆಚ್ಚಿನ ತರಬೇತಿ ನೀಡಲಾಗುತ್ತದೆ. ಆ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳು ಪದವಿ ವ್ಯಾಸಂಗ ಮಾಡುತ್ತಲೇ ಬಿಡುವಿನ ಸಮಯದಲ್ಲಿ ವರ್ಕ್ ಫ್ರಮ್ ಹೋಮ್‌ನಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ಒಬ್ಬ ವಿದ್ಯಾರ್ಥಿಗೆ ವರ್ಷಕ್ಕೆ 2.20 ಲಕ್ಷ ರೂಪಾಯಿಗಳ ಪ್ಯಾಕೇಜ್ ಆಫರ್ ನೀಡಲಾಗಿದೆ. ಪದವಿ ವ್ಯಾಸಂಗ ಮುಗಿದ ನಂತರ ಅದೇ ಕಂಪನಿ ಇನ್ನು ಹೆಚ್ಚಿನ ವೇತನಕ್ಕೆ ಪೂರ್ಣ ಪ್ರಮಾಣದ ಉದ್ಯೋಗಕ್ಕೆ ಆ ವಿದ್ಯಾರ್ಥಿಯನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಹೀಗೆ ಕಾಲೇಜುಗಳ ಮೂಲಕ ಕರ್ನಾಟಕದಿಂದ 500 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಿದ್ದು, ಇಡೀ ಭಾರತದಲ್ಲಿ 5000ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಹೆಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿ ನಿರ್ಧರಿಸಿದೆ.

ಕಳೆದ ವರ್ಷ ಇದೇ ಮಹಾರಾಣಿ ಪದವಿ ಪೂರ್ವ ಕಾಲೇಜಿನಲ್ಲಿ 40 ವಿದ್ಯಾರ್ಥಿಗಳು ತರಬೇತಿ ಪಡೆದಿದ್ದರು. ಅವರಲ್ಲಿ ನಾಲ್ವರು ಆಯ್ಕೆ ಆಗಿದ್ದು, ಪದವಿ ವ್ಯಾಸಂಗ ಮಾಡುತ್ತಲೇ ಈಗ ಸಂಪಾದನೆ ಮಾಡುತ್ತಿದ್ದಾರೆ.

ಗುಣಮಟ್ಟದಿಂದ ನೀಡುವ ಈ ತರಬೇತಿಯಿಂದ ಆಯ್ಕೆ ಆಗುವ ಬುದ್ಧಿವಂತ ವಿದ್ಯಾರ್ಥಿಗಳಿಗೆ ಇದು ಬಹು ಪ್ರಯೋಜನಕಾರಿಯಾಗಿದೆ. ಕಂಪ್ಯೂಟರ್ ಸಾಫ್ಟ್‌ವೇರ್ ಅಂದರೆ ಸೈನ್ಸ್ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತ ಎಂಬ ಮಾತಿದೆ. ಆದರೆ ಬುದ್ಧಿಮತಿಕೆ ಇದ್ದರೆ ಆರ್ಟ್ಸ್ ಮತ್ತು ಕಾಮರ್ಸ್ ವಿದ್ಯಾರ್ಥಿಗಳು ಸಹ ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಬಹುದು. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾತ್ರ ಸಾಫ್ಟ್‌ವೇರ್ ಕಂಪನಿಗಳಿಂದ ಕ್ಯಾಂಪಸ್ ಇಂಟರ್ ವ್ಯೂ ನಡೆಯುತ್ತಿತ್ತು ಆದರೆ ಈಗ ಪಿಯು ಕಾಲೇಜುಗಳಲ್ಲಿ ಕೂಡ ಕ್ಯಾಂಪಸ್ ಇಂಟರ್‌ವ್ಯೂ ನಡೆಸಲಾಗುತ್ತಿದೆ. ಬುದ್ಧಿವಂತ ವಿದ್ಯಾರ್ಥಿಗಳನ್ನು ಕಂಪನಿಗಳು ಪಿಯುಸಿ ಹಂತದಲ್ಲೇ ನೇಮಕ ಮಾಡಿಕೊಳ್ಳುತ್ತಿವೆ. ಪದವಿ ವ್ಯಾಸಂಗ ಮಾಡುತ್ತಲೇ ಉದ್ಯೋಗಾವಕಾಶ ದೊರೆಯುವ ಕಾರಣ, ವಿದ್ಯಾರ್ಥಿಗಳು ಓದಿನಲ್ಲಿ ಪೈಪೋಟಿ ನಡೆಸುತ್ತಾರೆ. ಇದರಿಂದ ಅವರ ಓದಿನ ಪ್ರೌಢಿಮೆ ಕೂಡ ಇಮ್ಮಡಿಗೊಳ್ಳುತ್ತದೆ.

ಮೈಸೂರಲ್ಲಿ ಪ್ಲಾಗಥಾನ್, ಜಾಗೃತಿ ಜಾಥದ ಮೂಲಕ ವಿಶ್ವ ಪರಿಸರ ಸಂರಕ್ಷಣಾ ದಿನ ಆಚರಣೆ

- ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಕಾಲೇಜು ವಿದ್ಯಾರ್ಥಿಗಳಿಂದ ಪ್ಲಾಗಥಾನ್‌ನಲ್ಲಿ 150 ಕೆಜಿ ಪ್ಲಾಸ್ಟಿಕ್ ಸಂಗ್ರಹ
- ಚರ್ಚ್ ಬಳಿ ಶಾಲಾ ಮಕ್ಕಳಿಂದ ಜಾಗೃತಿ ಜಾಥಾ



ಮೈಸೂರು,ಜು.28(ಎಂಟಿವೈ)– ವಿಶ್ವ ಪರಸರ ಸಂರಕ್ಷಣೆ ದಿನದ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪ್ಲಾಗಥಾನ್ ಹಾಗೂ ಚರ್ಚ್ ಬಳಿ ಜಾಗೃತಿ ಜಾಥಾ ಆಯೋಜಿಸುವ ಮೂಲಕ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಬಳಸದಂತೆ ಜಾಗೃತಿ ಮೂಡಿಸಲಾಯಿತು.

ಮೈಸೂರು ಮಹನಗರ ಪಾಲಿಕೆ, ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಸ್ವಚ್ಛ ಸರ್ವೇಕ್ಷಣ್ ಅಭಿಯಾನದ ಅಂಗವಾಗಿ ನಡೆಸಿದ ಪ್ಲಾಗಥಾನ್‌ನಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳು, ಮೈಸೂರು ವಿವಿ ವಿದ್ಯಾರ್ಥಿಗಳು, ಮಹಾರಾಜ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡು ಗಮನ ಸೆಳೆದರು. ಕೆರೆ ಆವರಣದಲ್ಲಿ ಬಿದ್ದಿರುವ ಏಕ ಬಳಕೆಯ ಪ್ಲಾಸ್ಟಿಕ್ ಸಂಗ್ರಹ ಮಾಡಿಕೊಂಡು ಬರುವಂತೆ ಸೂಚನೆ ನೀಡಲಾಗಿತ್ತು. ಸುಮಾರು 35ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಎಲ್ಲ ವಿದ್ಯಾರ್ಥಿಗಳು ಕೆರೆ ಆವರಣದಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ತ್ಯಾಜ್ಯವನ್ನು ನಿಗದಿತ ಸಮಯದೊಳಗೆ ಸಂಗ್ರಹಿಸಿ ತಂದರು. 150 ಕೆಜಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾಯಿತು.

ಅತಿ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ ತಂದ ಮೈಸೂರು ವಿವಿ ಸ್ನಾತಕೋತರ ವಿದ್ಯಾರ್ಥಿ ಮಹೇಂದ್ರ ಪ್ರಥಮ ಬಹುಮಾನವಾಗಿ 5 ಸಾವಿರ ರೂ. ನಗದು ಬಹುಮಾನ, ಮಹಾರಾಜ ಕಾಲೇಜು ವಿದ್ಯಾರ್ಥಿ ಶರತ್ ದ್ವಿತೀಯ ಬಹುಮಾನ 3 ಸಾವಿರ ನಗದು ಬಹುಮಾನ, ನಿರಂಜನ ತೃತೀಯ ಬಹುಮಾನ 2 ಸಾವಿರ ರೂ. ನಗದು ಬಹುಮಾನ ವಿತರಿಸಲಾಯಿತು. ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯೆ ವೇದಾವತಿ, ಪಾಲಿಕೆಯ ಪರಿಸರ ಅಭಿಯಂತರರು, ಎಇಇ, ಮೈಸೂರು ವಿವಿ ಎನ್‌ಎಸ್‌ಎಸ್ ಅಧಿಕಾರಿಗಳು ಪಾಲ್ಗೊಂಡಿದ್ದರು.

ಜಾಗೃತಿ ಜಾಥಾ: ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಪಾಲಿಕೆಯ ವಲಯ ಕಚೇರಿ 7ರ ವತಿಯಿಂದ ಜಾಗೃತಿ ಜಾಥಾ ಆಯೋಜಿಸಲಾಗಿತ್ತು. ವೀರನಗೆರೆಯ ಗುಡ್ ಶೆಫರ್ಡ್ ಇಂಗ್ಲೀಷ್ ಶಾಲೆಯ 80ಕ್ಕೂ ವಿದ್ಯಾರ್ಥಿಗಳು ಪಾಲ್ಗೊಂಡು ಪ್ಲಾಸ್ಟಿಕ್ ಬಳಸದಂತೆ ಜಾಗೃತಿ ಮೂಡಿಸಿದರು. ಚರ್ಚ್ ಸುತ್ತಮುತ್ತಲಿನ ರಸ್ತೆಯಲ್ಲಿ ವಿದ್ಯಾರ್ಥಿಗಳು ವಿಶ್ವ ಪರಿಸರ ಸಂರಕ್ಷಣಾ ದಿನದ ಸಂದೇಶ ಸಾರಿದರು. ಈ ಸಂದರ್ಭದಲ್ಲಿ ವಲಯ ಪರಿಸರ ಅಭಿಯಂತರರಾದ ನವೀನ್ ಹಾಗ ಆರೋಗ್ಯ ಪರಿವೀಕ್ಷಕರು, ಶಾಲೆಯ ಶಿಕ್ಷಕರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.7.2023 ಶನಿವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023 ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಪ್ರಜ್ಞಾಕುಟೀರ ಆಯುರ್ವೇದ ಕೇಂದ್ರ, ಅಭಿಜ್ಞಾ ಇಂಟರ್‌ನ್ಯಾಷನಲ್ ಅಕಾಡೆಮಿ ಆಫ್ ಆಯುರ್ವೇದ ಮತ್ತು ಯೋಗ :** ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ, ಉದ್ಘಾಟನೆ : ಹೆಚ್.ಎಸ್. ವೆಂಕಟೇಶ್, ಸ್ಥಳ: ಪ್ರಜ್ಞಾ ಕುಟೀರ ಆಯುರ್ವೇದ ಕೇಂದ್ರ, ವಿಶ್ವಮಾನವ ಜೋಡಿ ರಸ್ತೆ, ಬೆಳಗ್ಗೆ 9 ರಿಂದ.

■ **ಡಾಗ್ಸ್ ಪ್ರೊಟೆಕ್ಷನ್ ಟ್ರಸ್ಟ್, ಪ್ರಾಣಿ ಕಲ್ಯಾಣ ಸಂಸ್ಥೆ :** ಬೀದಿ ನಾಯಿಗಳು ಮತ್ತು ಸಾಕು ನಾಯಿಗಳಿಗೆ ಉಚಿತ ರೇಬೀಸ್ ರೋಗನಿರೋಧಕ ಲಸಿಕೆ ಶಿಬಿರ, ಸ್ಥಳ: ರೈತ ಸಂತೆ ಮುಡಾ ಕಾಂಪ್ಲೆಕ್ಸ್, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ, ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಸಿಲ್ಕ್ ಇಂಡಿಯಾ :** ಸಿಲ್ಕ್ ಇಂಡಿಯಾ–2023 ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಫ್ಯಾಷನ್ ಸ್ಟೋರೀ ಸಂಸ್ಥೆ :** ಇಂಡಿಯನ್ ಲೈಫ್‌ಸ್ಟೈಲ್ ಮತ್ತು ಆಭರಣಗಳ ವಸ್ತುಪ್ರದರ್ಶನ, ಉದ್ಘಾಟನೆ : ನಟಿ ಯಶಸ್ವಿನಿ ರವೀಂದ್ರ, ಸ್ಥಳ: ರಿಯೋ ಮೆರಿಡಿಯನ್ ಹೋಟೆಲ್, ಬೆಳಗ್ಗೆ 10.30 ರಿಂದ.

■ **ಎಸ್. ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗ :** ಉಚಿತ ಕುರಿ ಮರಿಗಳ ವಿತರಣಾ ಕಾರ್ಯಕ್ರಮ, ಸ್ಥಳ: ಆರಾಧ್ಯ ಮಹಾಸಭಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಸ್ಫೂರ್ತಿ ಮಹಿಳಾ ಬಳಗ :** ಸ್ಫೂರ್ತಿ ಮಹಿಳಾ ರತ್ನ ಪ್ರಶಸ್ತಿ ಪ್ರದಾನ, ಬಹುಮಾನ ವಿತರಣಾ ಕಾರ್ಯಕ್ರಮ, ಉದ್ಘಾಟನೆ : ಡಾ. ದೀಪಿಕಾ ಪಾಂಡುರಂಗಿ, ಮುಖ್ಯ ಅತಿಥಿಗಳು : ಶ್ರೀಮತಿ ಗೀತಾ ಶ್ರೀಹರಿ, ಶ್ರೀಮತಿ ಡಾ. ಜಯಶ್ರೀ, ಬಹುಮಾನ ವಿತರಣೆ : ಶ್ರೀಮತಿ ಇಂದಿರಾ ದೇಸಾಯಿ, ಅಧ್ಯಕ್ಷತೆ : ಸ್ಫೂರ್ತಿ ಮಹಿಳಾ ಬಳಗದ ಅಧ್ಯಕ್ಷೆ ಶ್ರೀಮತಿ ಪ್ರತಿಭಾ ಗುರುರಾಜ್, ಸ್ಥಳ: ಮಹರ್ಷಿ ಪಬ್ಲಿಕ್ ಸ್ಕೂಲ್, ವಿಶ್ವೇಶ್ವರನಗರ, ಸಂಜೆ 4 ರಿಂದ.

■ **ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಅಂಗಳ ಸಾಹಿತ್ಯ ಬಳಗ :** ಅಭಿರುಚಿ ಪ್ರಕಾಶನ ಪ್ರಕಟಿಸಿರುವ ಸುಚೇತ ಕೆ.ಎಸ್. ಅವರ ಬರಿ ಕತೆಯಲ್ಲ ಅಗ್ರಹಾರದ ಕಥನ, ಕೃತಿ ಬಿಡುಗಡೆ : ಪ್ರೊ. ಆರ್. ಇಂದಿರಾ, ಕೃತಿ ಕುರಿತು : ಮಹಿಳಾ ಅಧ್ಯಯನ ತಜ್ಞರಾದ ಪ್ರೊ. ಆರ್. ಸುನಂದಮ್ಮ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಹಿರಿಯ ವಿಮರ್ಶಕ ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ನೀಲಗಿರಿ ತಳವಾರ್, ಉಪಸ್ಥಿತರು : ಅಭಿರುಚಿ ಗಣೇಶ್, ಅಭಿರುಚಿ ಪ್ರಕಾಶನದ ಕೆ.ಎಸ್. ಸುಚೇತ, ಅಧ್ಯಕ್ಷತೆ : ಅಂಕಣಕಾರ ನಾ. ದಿವಾಕರ, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ

■ **ಕನ್ನಡಿಗರ ಭುವನ ಸಂಗಾತಿ :** ವಾರ್ಷಿಕೋತ್ಸವ, ಸಾನ್ನಿಧ್ಯ : ಉರಿಲಿಂಗ ಪೆದ್ದಿ ಮಠದ ಪೀಠಾಧ್ಯಕ್ಷ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಸಮಾಜ ಕಲ್ಯಾಣ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಶಾಸಕ ಎ.ಆರ್. ಕೃಷ್ಣಮೂರ್ತಿ, ಮುಖ್ಯ ಅತಿಥಿಗಳು: ಶಾಸಕ ಕೆ. ಹರೀಶ್‌ಗೌಡ, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಹಿರಿಯ ಪತ್ರಕರ್ತ ರವೀಂದ್ರ ಭಟ್, ಮೈಸೂರು ವಿವಿ ಎಂಬಿಎ ವಿಭಾಗದ ಅಧ್ಯಕ್ಷ ಪ್ರೊ. ಡಿ. ಆನಂದ್, ಸ್ಥಳ: ಹೋಟೆಲ್ ಗೋವರ್ಧನ್ ಸಭಾಂಗಣ, ಶ್ರೀ ಹರ್ಷ ರಸ್ತೆ, ಸಂಜೆ 4.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ :** ಹಿರಿಯ ಸಾಹಿತಿ ಪ್ರೊ. ಕೆ.ಭೈರವಮೂರ್ತಿ–ಒಂದು ಸ್ಮರಣೆ, ಪ್ರಾಸ್ತಾವಿಕ ನುಡಿ : ಪ್ರತಿಷ್ಠಾನ ನಿರ್ದೇಶಕ ಡಾ. ಕೆ. ಲೀಲಾಪ್ರಕಾಶ್, ಭಾವಚಿತ್ರಕ್ಕೆ ಪುಷ್ಪಾರ್ಚನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಕವಿ ಜಯಪ್ಪ ಹೊನ್ನಾಳಿ, ಸ್ಥಳ: ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ, ಶಾರದಾದೇವಿನಗರ, ಸಂಜೆ 5ಕ್ಕೆ.

■ **ಶಾಂತ ಚಾರಿಟೆಬಲ್ ಟ್ರಸ್ಟ್ :** ಗುರುವಂದನಾ ಕಾರ್ಯಕ್ರಮ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ನೃತ್ಯ ಕಲಾವಿದೆ ವಿದುಷಿ ಡಾ. ಕೃಪಾ ಫಡ್ಕೆ, ಸಂಗೀತ ಉಪನ್ಯಾಸಕರಾದ ವಿದುಷಿ ಶ್ರೀಮತಿ ಶಾರದಾ ಭಟ್ ಕಟ್ಟಿಗೆ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ಕುವೆಂಪು ಟ್ರಸ್ಟ್, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಶ್ರೀ ವ್ಯಾಸರಾಜಪುರ ಮಠ, ಸೋಸಲೆ (ಮುನಿತ್ರಮ ಪೀಠ), ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀಕಾಂತಾಚಾರ್ಯ ಕಳಸಾಪುರ ಅವರಿಂದ ಅಯೋಧ್ಯಾ ಕಾಂಡ ಕುರಿತು ಪ್ರವಚನ, ಸ್ಥಳ: ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ 7ರವರೆಗೆ.

■ **ನಟನ ರಂಗಶಾಲೆ :** ರಂಗ ಪಯಣ ಮತ್ತು ನಿರ್ದಿಗಂತ ಸಂಯುಕ್ತವಾಗಿ ಕಥೆ, ಕವನ, ಕಾದಂಬರಿ, ನಾಟಕ ಆಧಾರಿತ ರಂಗರೂಪಕ 'ಗಾಯಗಳು' ನಾಟಕ ಪ್ರದರ್ಶನ, ಪರಿಕಲ್ಪನೆ, ನಿರ್ದೇಶನ : ಡಾ. ಶ್ರೀಪಾದ ಭಟ್, ಸಹ ನಿರ್ದೇಶನ : ಹಾಸನ ಶ್ವೇತಾರಾಣಿ, ಸ್ಥಳ: ನಟನ ರಂಗ ಶಾಲೆ, ರಾಮಕೃಷ್ಣನಗರ, ಸಂಜೆ 6ಕ್ಕೆ

■ **ಲಯನ್ಸ್ ಕ್ಲಬ್ ಆಫ್ ಮೈಸೂರು ನಾರ್ಥ್ :** ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ಉದ್ಘಾಟನೆ : ಮಾಜಿ ರಾಜ್ಯಪಾಲ ಲಯನ್ ಕೆ. ದೇವೇಗೌಡ, ಉಪಸ್ಥಿತರು : ಲಯನ್ ಬಿ.ಎಸ್. ರಾಜಶೇಖರಯ್ಯ, ನೂತನ ಅಧ್ಯಕ್ಷ ಲಯನ್ ಡಾ. ಅಂತೋಣಿ ಪಾಲ್, ಕಾರ್ಯದರ್ಶಿ ಲಯನ್ ರವಿ, ಖಜಾಂಚಿ ಲಯನ್ ಶ್ರೀಮತಿ ಪರಿಮಳ, ಮುಖ್ಯ ಅತಿಥಿಗಳು : ಶಾಸಕ ತನ್ವೀರ್ ಸೇಠ್, ಲಯನ್ ದೇವಿಪ್ರಸಾದ್, ಸ್ಥಳ:ಹೋಟೆಲ್ ಕಲ್ಯಾಣಿ, ಸಂಜೆ 6.30ಕ್ಕೆ.

■ **ಮರ್ಕಜ್–ಎ–ಖಾನ್ಖಾ–ಎ–ಸಿಲ್ಸಿಲ–ಎ–ಆಮಿರಿಯಾ :** ಜಿಕ್ರೆ–ಇ–ಇಮಾಮ್–ಇ–ಹುಸೇನ್ ಆಚರಣೆ, ಉಪಸ್ಥಿತರು: ಅಲಾಮ ಸೈಯದ್ ಮೊಹಮ್ಮದ್ ರಜಾ–ಉಲ್–ಹಕ್ ಪೀರ್ ಅಲೀಮಿ ಷಾ ಆಮಿರಿಯಾ, ಸಜ್ಜದಾ ನಷೀನ್, ಸಿಲ್‌ಸಿಲಾ ಆಮಿರಿಯಾ, ಉಲ್ಮಾಗಳು ಅಹಲೆ ಸುನ್ನತೋ, ಸ್ಥಳ: ಮಸೀದಿ ಅಜಮ್ ಮರ್ಕಾಜ್ ಅಹಲೆ ಸುನ್ನತ್ ಜಮಾತ್, ಅಶೋಕ ರಸ್ತೆ, ರಾತ್ರಿ 8.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಶೋಧ ಅನುಶೋಧ –ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಕನ್ನಡದ ಲೇಖಕ ಹಾಗೂ ಇಂಗ್ಲೆಂಡಿನಲ್ಲಿ ವಿಮಾನ ಶಾಸ್ತ್ರ ತಂತ್ರಜ್ಞರಾಗಿರುವ ಯೋಗೀಂದ್ರ ಮರವಂತೆ ಅವರೊಂದಿಗೆ ಮಾತುಕತೆ. ನಡೆಸಿಕೊಡುತ್ತಾರೆ ಅಬ್ದುಲ್ ರಶೀದ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ. ಕಲಾ ಸುರುಚಿಯ ಕಥಾ ಸರಣಿ –ಕೆ.ನಾಗರಾಜ್ ಕೆ ಹಾಘೂ ಬಿ.ಬಾಲಕೃಷ್ಣಯ್ಯ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ್ದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00ಎಸ್. ರಾಮನಾಥನ್ – ಹಾಡುಗಾರಿಕೆ, 11.00 "ಸ್ವರಾಜ್"– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ತಾಥೆ

ಮಧ್ಯಾಹ್ನ: 12.30ದೇವರನಾಮ–ಬಿ.ಎನ್. ಮಂಜುಳಾ, ಟಿ.ಎಸ್. ಸತ್ಯವತಿ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಪುಟ್ಟನಾಗಮ್ಮ ಮತ್ತು ಸಂಗಡಿಗರು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30ಮಕ್ಕಳ ಮಂಟಪ –ಪ್ರತಿಭಾ ಪಲ್ಲವ, ಬಹುಮುಖ ಪ್ರತಿಭೆ ವರುಣ್ ಸಿಂಹನ್ ಪರಿಚಯ. ಪ್ರಸ್ತುತಿ– ಎಂ.ಎಸ್. ಭಾರತಿ, 4.30 ನೆನಪಿನಂಗಳ –ಹಿರಿಯ ವಯ್ಯಾಕರಣಿಗಳು ಹಾಗೂ ಭಾಷಾಶಾಸ್ತ್ರಜ್ಞರಾದ ಡಾ.ಬಿ.ಬಿ.ರಾಜಪುರೋಹಿತ್ ಅವರೊಂದಿಗೆ ಪ್ರೊ.ಮ. ವರದರಾಜು ಅವರು ನಡೆಸಿದ್ದ ಸಂವಾದ. ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ,ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ –ಬಾನುಲಿ ಸರಣಿ, 9.30 ಶಿಕ್ಷಣದಲ್ಲಿ ಖಾಸಗಿ ಸಂಸ್ಥೆಗಳು, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಖಜಾಂಚಿ ಶ್ರೀಶೈಲ ರಾಮಣ್ಣವರ ಅವರೊಡನೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಗಗನ್ ದೀಪ್–ಸಿತಾರ್ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 29 ಶನಿವಾರ 2023

ಸಂಪುಟ: 44 | ಸಂಚಿಕೆ: 104 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬಿಜೆಪಿ ಆಡಳಿತಾವಧಿಯಲ್ಲಿ ಜಾರಿಯಾದ

ರಾಷ್ಟ್ರೀಯ ಶಿಕ್ಷಣ ನೀತಿ ರದ್ದು; ಕರ್ನಾಟಕ ಶಿಕ್ಷಣ ನೀತಿ ಜಾರಿ

- ರಾಜ್ಯ ಸರ್ಕಾರ ನಿರ್ಧಾರ
- ಬಜೆಟ್‌ನಲ್ಲಿ ಪ್ರಸ್ತಾಪಿಸಿದಂತೆ ಎನ್‌ಇಪಿ ರದ್ದುಪಡಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸ ಪಠ್ಯ ಜಾರಿಗೆ ತೀರ್ಮಾನ
- ಉನ್ನತ ಶಿಕ್ಷಣದಲ್ಲಿ ಮಹತ್ತರ ಬದಲಾವಣೆಗೆ ಸರ್ಕಾರದ ಕ್ರಮ
- ಉನ್ನತ, ಶಾಲಾ, ವೈದ್ಯಕೀಯ– ಮೂವರು ಸಚಿವರು ವಿವಿಧ ಸಂಘಟನೆ ಪದಾಧಿಕಾರಿಗಳೊಂದಿಗೆ ಸಭೆ
- ಮುಂದಿನ ಸಂಪುಟ ಸಭೆಯಲ್ಲಿ ಕೆಇಪಿ ಜಾರಿ ಸಂಬಂಧ ಅಂತಿಮ ನಿರ್ಧಾರ

ಬೆಂಗಳೂರು, ಜು.28 (ಕೆಎಂಶಿ) – ಬಿಜೆಪಿ ಆಡಳಿತದಲ್ಲಿ ಜಾರಿಗೆ ತಂದಿದ್ದ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಯನ್ನು ರದ್ದು ಪಡಿಸಿ, ಕರ್ನಾಟಕ ಶಿಕ್ಷಣ ನೀತಿ (ಕೆಇಪಿ) ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರು ಹಿರಿಯ ಅಧಿಕಾರಿಗಳು ಹಾಗೂ ಕೆಲವು ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ ಬಳಿಕ ಈ ನಿರ್ಧಾರಕ್ಕೆ ಬಂದಿದ್ದಾರೆ.

ಶಿಕ್ಷಣ ಇಲಾಖೆ ತೆಗೆದುಕೊಂಡಿರುವ ನಿರ್ಧಾರವನ್ನು ಮುಂದಿನ ವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಕರ್ನಾಟಕ ಶಿಕ್ಷಣ ನೀತಿ ಜಾರಿಗೆ ತರಲು ಅಂದೇ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಎನ್‌ಇಪಿ ಅನುಷ್ಠಾನಗೊಂಡಿರಲಿಲ್ಲ. ಆದರೆ, ಕೆಲವು ವಿಷಯಗಳ ಪಠ್ಯ ಮತ್ತು ಪದಗಳನ್ನು ಬದಲಿಸಿದ್ದರು. ಹಿಂದಿನ ಬಿಜೆಪಿ ಸರ್ಕಾರ ತೆಗೆದುಕೊಂಡಿದ್ದ ಈ ತೀರ್ಮಾನವನ್ನು ಈಗಾಗಲೇ ರದ್ದುಪಡಿಸಿ ಅದಕ್ಕೂ ಹಿಂದೆ ಇದ್ದ ಪಠ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ಇನ್ನೂ ವೈದ್ಯಕೀಯ ಶಿಕ್ಷಣದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆ ಇಲ್ಲ. ಉನ್ನತ ಶಿಕ್ಷಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಸಲಾಗಿತ್ತು. ಈ ನೀತಿಯನ್ನು ಕಾಂಗ್ರೆಸ್ ಮೊದಲಿನಿಂದಲೂ ವಿರೋಧಿಸಿದ್ದಲ್ಲದೆ, ವಿಧಾನಸಭಾ ಚುನಾವಣೆ ಸಂದರ್ಭದಲ್ಲೂ ಪಕ್ಷ ಅಧಿಕಾರಕ್ಕೆ ಬಂದರೆ ರಾಷ್ಟ್ರೀಯ ಶಿಕ್ಷಣ ನೀತಿ ರದ್ದುಪಡಿಸಿ ಕರ್ನಾಟಕ ಶಿಕ್ಷಣ ನೀತಿ ಜಾರಿಗೆ ತರುವ ಭರವಸೆ ನೀಡಿದ್ದರು. ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ನೂತನ ಸರ್ಕಾರದ ಮೊದಲ ಬಜೆಟ್‌ನಲ್ಲಿ ಎನ್‌ಇಪಿ ರದ್ದುಮಾಡುವ ವಿಚಾರ ಪ್ರಸ್ತಾಪಿಸಿದ್ದರು. ಇದಕ್ಕೆ ಪೂರಕವಾಗಿ ಸಂಬಂಧಪಟ್ಟ ಇಲಾಖೆ ಸಚಿವರು, ಅಧಿಕಾರಿಗಳು ಇಂದು ಸಭೆ ನಡೆಸಿ ಎನ್‌ಇಪಿ ರದ್ದುಪಡಿಸುವ ತೀರ್ಮಾನ ಕೈಗೊಂಡಿರುವುದಲ್ಲದೆ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಕರ್ನಾಟಕ ನೀತಿಯಡಿ ಹೊಸ ಪಠ್ಯ–ಪುಸ್ತಕಗಳನ್ನು ನೀಡಲು ತೀರ್ಮಾನಿಸಿದ್ದಾರೆ.

ಸಂಪುಟದ ಒಪ್ಪಿಗೆ ಪಡೆದು ತಜ್ಞರ ಸಮಿತಿ ನೇಮಕ ಮಾಡಿ ನೀತಿ ಹಾಗೂ ಹೊಸ ಪಠ್ಯದ ಬಗ್ಗೆ ವರದಿ ಪಡೆಯಲಿದ್ದಾರೆ. ತಜ್ಞರ ವರದಿ ಬಂದ ನಂತರ ಪಠ್ಯ ಪರಿಷ್ಕರಣೆ ಮಾಡಲಾಗುತ್ತದೆ. ಎನ್‌ಇಪಿಯು ಶಿಕ್ಷಣದ ಸರ್ವತೋಮುಖ ಕೇಂದ್ರೀಕರಣ, ವ್ಯಾಪಾರೀಕರಣ, ಕೋಮು ವರ್ಗೀಕರಣದ ಗುರಿ ಹೊಂದಿದೆ. ಇದು ಶಿಕ್ಷಣದ ಸ್ವಾಯತ್ತತೆ, ● 9ನೇ ಪುಟಕ್ಕೆ



ವಿವಿಧ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಶೈಕ್ಷಣಿಕ ನೀತಿಗೆ ಸಂಬಂಧಿಸಿದಂತೆ ಶಿಕ್ಷಣ ಸಚಿವರಾದ ಡಾ. ಎಂ.ಸಿ. ಸುಧಾಕರ್, ಮಧು ಬಂಗಾರಪ್ಪ, ಡಾ. ಶರಣಪ್ರಕಾಶ ಪಾಟೀಲ್, ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಇತರರು ಸಭೆ ನಡೆಸಿದರು.

ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು, ಕಾಂಪೌಂಡ್ ಗೋಡೆಗೆ ಅಪ್ಪಳಿಸಿದ ಇನ್ನೋವಾ ಕಾರು

ಸಂತ್ರಸ್ತರ ನೆರವಿಗೆ ಬಂದ ವ್ಯಕ್ತಿ ಸೇರಿ ಇಬ್ಬರು ವಿದ್ಯುತ್ ಸ್ಪರ್ಶದಿಂದ ಸಾವು

ಇತರ ನಾಲ್ವರಿಗೂ ಸುಟ್ಟ ಗಾಯ



ರವಿಕುಮಾರ್



ಕಿರಣ್



ವಿದ್ಯುತ್ ಕಂಬ–ಕಾಂಪೌಂಡ್ ಗೋಡೆ ನಡುವೆ ಸಿಲುಕಿದ್ದ ಇನ್ನೋವಾ ಕಾರು

ಮೈಸೂರು, ಜು. 28(ಆರ್‌ಕೆ)– ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು, ಕಾಂಪೌಂಡ್ ಗೋಡೆಗೆ ಅಪ್ಪಳಿಸಿದ ಇನ್ನೋವಾ ಕಾರಿನ ಚಾಲಕ ಹಾಗೂ ಸಂತ್ರಸ್ತರ ರಕ್ಷಣೆಗೆ ಧಾವಿಸಿದ ವ್ಯಕ್ತಿ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದರೆ, ಇತರ ನಾಲ್ವರಿಗೆ ಸುಟ್ಟ ಗಾಯಗಳಾದ ದುರ್ಘಟನೆ ಮೈಸೂರಿನ ಮಾನಂದವಾಡಿ ರಸ್ತೆಯ ರೈಲ್ವೇ ವರ್ಕ್‌ಶಾಪ್ ಎದುರು ಕಳೆದ ಮಧ್ಯರಾತ್ರಿ ಸಂಭವಿಸಿದೆ. ಮೈಸೂರಿನ ಅಶೋಕಪುರಂ ನಿವಾಸಿಗಳಾದ ರವಿಕುಮಾರ್(34) ಹಾಗೂ ಕಿರಣ್ (36) ದುರಂತ ಸಾವಿಗೀಡಾದವರು. ಸುಟ್ಟ ಗಾಯಗಳಾಗಿರುವ ರವಿ, ಸಂದೇಶ್, ಶಿವಕುಮಾರ್ ಹಾಗೂ ಮಂಜುನಾಥ್ ಅವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಶೋಕಪುರಂ ಠಾಣೆ ಪೊಲೀಸರು ತಿಳಿಸಿದ್ದಾರೆ.

ಗುರುವಾರ ರಾತ್ರಿ ಸುಮಾರು 12.10 ಗಂಟೆಗೆ ನಾಚನಹಳ್ಳಿಪಾಳ್ಯದಿಂದ ಅಶೋಕಪುರಂ ಕಡೆಗೆ ಬರುತ್ತಿದ್ದ ಟೊಯೊಟಾ ಇನ್ನೋವಾ ಕ್ರಿಸ್ಟ್ ಕಾರು, ಮಾನಂದವಾಡಿ ರಸ್ತೆಯಲ್ಲಿ ರೈಲ್ವೆ ವರ್ಕ್‌ಶಾಪ್ ಬಳಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು, ನಂತರ ವರ್ಕ್‌ಶಾಪ್ ಕಾಂಪೌಂಡ್‌ಗೆ ಅಪ್ಪಳಿಸಿದೆ. ರವಿಕುಮಾರ್ ಚಾಲನೆ ಮಾಡುತ್ತಿದ್ದ ಈ ಕಾರಿನಲ್ಲಿ ನಾಲ್ವರಿದ್ದರು. ಅಪಘಾತದಿಂದ ವಾಹನ ಜಖಂ ಆದರೂ ಯಾರಿಗೂ ಗಾಯಗಳಾಗಿರಲಿಲ್ಲ. ಆದರೆ, ವಿದ್ಯುತ್ ಕಂಬ ಮತ್ತು ಕಾಂಪೌಂಡ್ ಗೋಡೆ ನಡುವೆ ಸಿಲುಕಿದ್ದ ಕಾರನ್ನು ಹೊರ ತೆಗೆಯಲು, ಸಮೀಪದ ಆಟೋ ಸ್ಟ್ಯಾಂಡ್‌ನಲ್ಲಿದ್ದ ಕಿರಣ್ ಮತ್ತು ಶಿವಕುಮಾರ್‌ರನ್ನು ಸಹಾಯಕ್ಕೆಂದು ಕರೆಸಿಕೊಂಡಿದ್ದಾರೆ.

ಎಲ್ಲಾ ಆರು ಮಂದಿ ಸೇರಿ ಕಾರನ್ನು ತಳ್ಳಿ ಹೊರ ತೆಗೆಯುತ್ತಿದ್ದಾಗ, ಮೊದಲು ಡಿಕ್ಕಿ ಹೊಡೆದ ರಭಸಕ್ಕೆ ಮುರಿದು ಬಿದ್ದಿದ್ದ ಕಂಬದ ತಂತಿಯಲ್ಲಿ ಪ್ರವಹಿಸುತ್ತಿದ್ದ ವಿದ್ಯುತ್ ಸ್ಪರ್ಶವಾಗಿ ಚಾಲಕ ರವಿಕುಮಾರ್ ಮತ್ತು ಆಟೋ ಚಾಲಕ ಕಿರಣ್ ಸ್ಥಳದಲ್ಲೇ ಸಾವನ್ನಪ್ಪಿದರೆ, ಉಳಿದ ನಾಲ್ವರಿಗೆ ಸುಟ್ಟ ಗಾಯಗಳಾಗಿವೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅಶೋಕಪುರಂ ಠಾಣೆ ಇನ್ಸ್‌ಪೆಕ್ಟರ್ ರಮೇಶ್, ಕೆ.ಆರ್. ಸಂಚಾರ ಠಾಣೆ ಹೆಚ್ಚುವರಿ ಪ್ರಭಾರಿ ದೇವರಾಜ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ ಹಾಗೂ ಸಿಬ್ಬಂದಿ ಗಾಯಗೊಂಡಿದ್ದವರನ್ನು ಕೆ.ಆರ್.ಆಸ್ಪತ್ರೆಗೆ ● 9ನೇ ಪುಟಕ್ಕೆ

ತಹಶೀಲ್ದಾರ್, ಪೊಲೀಸ್ ಅಧಿಕಾರಿಗಳು ಸೇರಿ ಭಾರೀ ವರ್ಗಾವರ್ಗಿಗೆ ಸಿಎಂ ಮತ್ತೆ ಚಾಲನೆ

ಬೆಂಗಳೂರು, ಜು.28 (ಕೆಎಂಶಿ) – ಸ್ವಪಕ್ಷದ ಶಾಸಕರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಸಿದ್ದರಾಮಯ್ಯ ತಹಸೀಲ್ದಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ನೌಕರರನ್ನು ವರ್ಗಾವರ್ಗಿಗೆ ಮತ್ತೆ ಚಾಲನೆ ನೀಡಿದ್ದಾರೆ. ಸಾಮಾನ್ಯ ವರ್ಗಾವಣೆ ಅವಧಿ ಮುಗಿದಿರುವುದರಿಂದ ಸಂಬಂಧಪಟ್ಟ ಇಲಾಖೆ ಸಚಿವರಿಗೆ ವರ್ಗಾವಣೆ ಮಾಡುವ ಅಧಿಕಾರವಿಲ್ಲ. ● 9ನೇ ಪುಟಕ್ಕೆ

ಗುಂಡು ಹಾರಿಸಿಕೊಂಡು ಕಾಫಿ ಬೆಳೆಗಾರ ಆತ್ಮಹತ್ಯೆ

- ಸಾಲದ ಬಾಧೆಯೇ ಆತ್ಮಹತ್ಯೆಗೆ ಕಾರಣ
- ಪೊನ್ನಂಪೇಟೆ ಬಳಿ ದುರಂತ


ಮಡಿಕೇರಿ, ಜು.28– ಸಾಲಬಾಧೆ ತಾಳಲಾರದೆ ಕಾಫಿ ಬೆಳೆಗಾರರೊಬ್ಬರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪೊನ್ನಂಪೇಟೆಯಲ್ಲಿ ನಡೆದಿದೆ. ಪೊನ್ನಂಪೇಟೆ ತಾಲೂಕಿನ ಹುದಿಕೇರಿ ಹೋಬಳಿಯ ಚಿಕ್ಕಮುಂಡೂರು ಗ್ರಾಮದ ಅಜ್ಜಿ ಕುಟ್ಟೀರ ಉಮೇಶ್ ಉತ್ತಪ್ಪ (55) ಆತ್ಮಹತ್ಯೆ ಮಾಡಿಕೊಂಡವರು. ಶುಕ್ರವಾರ ಬೆಳಗ್ಗೆ 8.15ರಲ್ಲಿ ತಮ್ಮ ಮನೆಯಿಂದ ಹೊರ ಬಂದಿದ್ದ ಉಮೇಶ್ ಉತ್ತಪ್ಪ ಬಳಿಕ ಲೈನ್ ಮನೆಯತ್ತ ತೆರಳಿದ್ದರು ಎನ್ನಲಾಗಿದೆ. ಕೆಲ ಹೊತ್ತಿನ ಬಳಿಕ ಅಡುಗೆ ಮನೆಯಲ್ಲಿದ್ದ ಅವರ ಪತ್ನಿಗೆ ಬಂದೂಕಿನಿಂದ ಗುಂಡು ಸಿಡಿದ ಸದ್ದು ಕೇಳಿದೆ. ತಕ್ಷಣ ಮನೆಯಲ್ಲಿ ಬಂದೂಕು ಹುಡುಕಿದರೆ ಅದು ಕಾಣಲಿಲ್ಲ. ಈ ಹಿನ್ನೆಲೆಯಲ್ಲಿ ಲೈನ್ ಮನೆಗೆ ಹೋಗಿ ನೋಡಿದಾಗ ಉಮೇಶ್ ಉತ್ತಪ್ಪ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡು ಬಂದಿದೆ. ಘಟನಾ ಸ್ಥಳಕ್ಕೆ ಕುಟ್ಟ ಸಿಪಿಐ ಸಿ.ಎ.ಮಂಜಪ್ಪ ಹಾಗೂ ಶ್ರೀಮಂಗಲ ಎಸ್‌ಐ ಎ.ಎಸ್.ಶಿವಾನಂದ ರಡ್ರಟ್ಟಿ, ಸಿಬ್ಬಂದಿಗಳಾದ ಬಿ.ಟಿ. ಮಂಜುನಾಥ, ಬಿ.ಎಂ.ಶಿವಣ್ಣ, ಸಿ.ಟಿ. ಧನ್ಯ, ಆರ್.ರಾಮ ಲಿಂಗ ಭೇಟಿ ನೀಡಿ, ಪರಿಶೀಲಿಸಿ ಮಹಜರು ನಡೆಸಿದರು. ಬಂದೂಕಿನ ಟ್ರಿಗರ್ ಅನ್ನು ಕಾಲು ಬೆರಳಿಂದ ಒತ್ತಿ ಎದೆಯ ಭಾಗಕ್ಕೆ ಗುಂಡು ಹಾರಿಸಿಕೊಂಡ ಸ್ಥಿತಿಯಲ್ಲಿ ಮೃತದೇಹ ಕಂಡು ಬಂದಿದೆ. ಸಾಲಬಾಧೆಯೇ ಆತ್ಮಹತ್ಯೆಗೆ ಕಾರಣ ಎಂದು ಕುಟುಂಬ ಸದಸ್ಯರು ತಿಳಿಸಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ. ಘಟನೆ ಕುರಿತು ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಉಮೇಶ್ ಉತ್ತಪ್ಪ, ಪತ್ನಿ, ಮೂವರು ಮಕ್ಕಳನ್ನು ಅಗಲಿದ್ದಾರೆ.

ನಂಜನಗೂಡು ಬಳಿ ಹೆದ್ದಾರಿ ದರೋಡೆ

ಚಲಿಸುತ್ತಿದ್ದ ವಾಹನ ತಡೆದು ಮಹಿಳೆಗೆ ಮಾರಕಾಸ್ತ್ರ ತೋರಿಸಿ

ಸರ, ಮೊಬೈಲ್ ಕಸಿದುಕೊಂಡು ಪರಾರಿಯಾದ ದುಷ್ಕರ್ಮಿಗಳು

- ಇನ್ನೋವಾ, ಐ20 ಕಾರುಗಳಲ್ಲಿ ಬಂದ ಎಂಟು ಜನರಿಂದ ದುಷ್ಕೃತ್ಯ
- ಗ್ರಾಮಸ್ಥರು ಜಮಾಯಿಸುತ್ತಿದ್ದಂತೆ ಪರಾರಿಯಾದ ಖದೀಮರ ತಂಡ




ನಂಜನಗೂಡು, ಜು. 28– ಎರಡು ಕಾರುಗಳಲ್ಲಿ ಬಂದ ದುಷ್ಕರ್ಮಿಗಳು ಮಹಿಳೆಯೂ ಸೇರಿದಂತೆ ಮೂವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ದಾಳಿ ನಡೆಸಿ, ಬೆದರಿಸಿ ಚಿನ್ನದ ಸರ ಮತ್ತು ಮೊಬೈಲ್ ಸುಲಿಗೆ ಮಾಡಿರುವ ಘಟನೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ನಂಜನಗೂಡು ತಾಲೂಕು ಹೊಸಹಳ್ಳಿ ಗೇಟ್ ಬಳಿ ಶುಕ್ರವಾರ ಸಂಜೆ ನಡೆದಿದೆ.

ಮೈಸೂರಿನ ಅಶೋಕ ರಸ್ತೆಯಲ್ಲಿರುವ ಆಯುರ್ವೇದಿಕ್ ವೈದ್ಯ ಡಾ. ರಾಜೇಂದ್ರ ಅವರ ಪತ್ನಿ ಜಯಶ್ರೀ(45) ದರೋಡೆಗೊಳಗಾದವರಾಗಿದ್ದು, ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕಾರಿನ ಗಾಜುಗಳನ್ನು ಒಡೆದು ಹಾಕಿದ್ದಾರೆ. ಆದರೆ, ಜಯಶ್ರೀ ಅವರಿಗಾಗಲೀ ಕಾರಿನಲ್ಲಿದ್ದ ಅವರ ಮಗ ಮತ್ತು ಸಂಬಂಧಿಕನ ಮೇಲೆ ಹಲ್ಲೆ ನಡೆಸಿಲ್ಲ ಎಂದು ಹೇಳಲಾಗಿದೆ.

ವಿವರ: ಜಯಶ್ರೀಯವರು ತಮ್ಮ ಬ್ರೆಜ್ಜಾ ಕಾರಿನಲ್ಲಿ (ಕೆಎ 09–ಎಂಜಿ 4928) ಕೇರಳದ ಕ್ಯಾಲಿಕಟ್‌ನಲ್ಲಿರುವ ತಮ್ಮ ಮಗಳನ್ನು ನೋಡಿಕೊಂಡು ಮೈಸೂರಿಗೆ ವಾಪಸ್ಸಾಗುತ್ತಿದ್ದರು. ಕಾರನ್ನು ಇವರ ಸಂಬಂಧಿಕ ವಿಜಯ್ ಚಾಲನೆ ಮಾಡುತ್ತಿದ್ದರೆ, ಜಯಶ್ರೀ ಜೊತೆ ಪುತ್ರ ವಿಶಾಲ್ ಇದ್ದರು. ಇವರ ಕಾರು ಹೊಸಹಳ್ಳಿ ಗೇಟ್ ಬಳಿ ಬರುತ್ತಿದ್ದಂತೆಯೇ ಇನ್ನೋವಾ ಮತ್ತು ಐ–20 ಕಾರುಗಳಲ್ಲಿ ಬಂದ 8 ಮಂದಿ ● 9ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಪರಿಶೀಲನೆಯೊಂದಿಗೆ ಸಿಎಂ ಸಿದ್ದರಾಮಯ್ಯ ಇಂದು ಮೈಸೂರಿಗೆ ಭೇಟಿ



ಮೈಸೂರು, ಜು. 28– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಜು. 29) ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಪರಿಶೀಲಿಸಲಿದ್ದಾರೆ.

ನಾಳೆ ಬೆಳಗ್ಗೆ 10.30ಕ್ಕೆ ಬೆಂಗಳೂರಿನಿಂದ ರಸ್ತೆ ಮಾರ್ಗವಾಗಿ ಮೈಸೂರಿಗೆ ಹೊರಡುವ ಅವರು, ಮಾರ್ಗ ಮಧ್ಯೆ ಮಂಡ್ಯದ ಅಮರಾವತಿ ಹೋಟೆಲ್ ಬಳಿ ಹಾಗೂ ಗಣಂಗೂರು ಟೋಲ್ ಪ್ಲಾಜಾ ಸಮೀಪ ಪರಿಶೀಲನೆ ನಡೆಸಲಿದ್ದು, ಅಪಘಾತಗಳ ತಡೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಚರ್ಚಿಸಲಿದ್ದಾರೆ ಎಂದು ಮುಖ್ಯಮಂತ್ರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮಧ್ಯಾಹ್ನದ ವೇಳೆಗೆ ಮೈಸೂರು ತಲುಪಲಿರುವ ಮುಖ್ಯಮಂತ್ರಿಗಳು, ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ ನಂತರ ಸಂಜೆ 4 ಗಂಟೆ ಸುಮಾರಿಗೆ ರಸ್ತೆ ಮಾರ್ಗ ಬೆಂಗಳೂರಿಗೆ ಮರಳಲಿದ್ದಾರೆ.

ನಾಯಿ, ಹಂದಿ ಹಾವಳಿಯಿಂದ ಪಾರು ಮಾಡಿ...

- ಮೈಸೂರು ನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಸದಸ್ಯರ ಒಕ್ಕೊರಲ ಆಗ್ರಹ
- ಸುಪ್ರೀಂಕೋರ್ಟ್‌ಗೆ ವಿಷಯ ಮನವರಿಕೆ ಮಾಡಿಕೊಡುವ ಮನವಿ ಸಲ್ಲಿಸಲು ನಿರ್ಧಾರ



ಮೈಸೂರು, ಜು.28(ಎಸ್‌ಬಿಡಿ)– ಮೈಸೂರು ನಗರದಲ್ಲಿ ಬೀದಿನಾಯಿಗಳ ಹಾವಳಿ ನಿಯಂತ್ರಣಕ್ಕೆ ಸೂಕ್ತ ಕ್ರಮ ಅನುಸರಿಸಲು ಅನುವು ಮಾಡಿಕೊಡುವಂತೆ ಸುಪ್ರೀಂಕೋರ್ಟ್‌ಗೆ ಮನವಿ ಮಾಡಲು ನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಕೌನ್ಸಿಲ್ ಸಭೆಯಲ್ಲಿ ಬಹುತೇಕ ಸದಸ್ಯರು ಬೀದಿನಾಯಿ ಹಾವಳಿ ಬಗ್ಗೆ ದೂರಿದರು. ಈ ಬಗ್ಗೆ ಸುದೀರ್ಘ ಚರ್ಚೆಯ ನಂತರ ಬೀದಿನಾಯಿ ನಿಯಂತ್ರಣ ಸಂಬಂಧ ಈಗಿರುವ ● 6ನೇ ಪುಟಕ್ಕೆ

ಸದಸ್ಯರ ಪಟ್ಟಿಗೆ ಮಣಿದ ಮೇಯರ್ ಚೌಕಾಸಿ ನಂತರ ಅಂತಿಮವಾಗಿ

ಪ್ರತಿ ವಾರ್ಡ್‌ಗೆ 75 ಲಕ್ಷ ರೂ. ಅನುದಾನ ಘೋಷಣೆ

ಮೈಸೂರು: ಮೇಯರ್ ಶಿವಕುಮಾರ್ ಪ್ರತಿ ವಾರ್ಡ್‌ಗೆ 75 ಲಕ್ಷರೂ. ಅನುದಾನ ಘೋಷಿಸಿದರು. ಕೌನ್ಸಿಲ್ ಸಭೆ ಆರಂಭದಲ್ಲೇ ಮೊದಲು ಅನುದಾನ ಘೋಷಿಸಬೇಕು. ಹಿಂದಿನ ಅನುದಾನದಡಿ ಈಗ ಕಾಮಗಾರಿಗಳಿಗೆ ಟೆಂಡರ್ ಆಗಿದೆ. ಈ ಬಾರಿಯೂ ವಿಳಂಬ ಮಾಡಿದರೆ ಯಾವುದೇ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂದು ಬಿಜೆಪಿ ಸದಸ್ಯ ಎಂ.ಯು.ಸುಬ್ಬಯ್ಯ ಪ್ರಸ್ತಾಪಿಸಿದರು. ಪ್ರತಿ ವಾರ್ಡ್‌ಗೆ ಒಂದು ಕೋಟಿ ರೂ. ಅನುದಾನ ಘೋಷಿಸಬೇಕೆಂದು ಬಿ.ವಿ.ಮಂಜುನಾಥ್ ಹಾಗೂ ಪ್ರೇಮಾ ಶಂಕರೇಗೌಡ ಒತ್ತಾಯಿಸಿದರು. ಹಲವು ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಈ ವೇಳೆ ಮೇಯರ್ ಶಿವಕುಮಾರ್, ಆಯುಕ್ತರೊಂದಿಗೆ ಮಾತನಾಡಿ ಪಾಲಿಕೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಪ್ರಾರಂಭಿಕವಾಗಿ 25 ಲಕ್ಷ ರೂ. ಘೋಷಣೆ ಮಾಡಿ, ಮುಂದಿನ ಸಭೆಯಲ್ಲಿ ಹೆಚ್ಚುವರಿ ಘೋಷಿಸಲಾಗುವುದು ಎಂದು ತಿಳಿಸಿದರು. ಆದರೆ ಇದಕ್ಕೆ ಸದಸ್ಯರು ಒಪ್ಪದೆ, ತಮ್ಮ ಹಕ್ಕೊತ್ತಾಯ ಮುಂದುವರೆಸಿದರು. ಇದರ ನಡುವೆ ಸದಸ್ಯ ಎಂ.ಸಿ.ರಮೇಶ್, ಸದ್ಯದ ಆರ್ಥಿಕ ಸ್ಥಿತಿಯಲ್ಲಿ 50 ಲಕ್ಷ ರೂ. ಘೋಷಣೆ ಮಾಡುವುದು ಕಷ್ಟವಾಗುವುದಿಲ್ಲ ಎಂದರು. ಆಗ ಮೇಯರ್ ಕೂಡ, 50 ಲಕ್ಷ ಘೋಷಣೆ ಮಾಡುವುದಾಗಿ ತಿಳಿಸಿದರು. ಆದರೆ ಇದಕ್ಕೂ ಸದಸ್ಯರು ಆಕ್ಷೇಪಿಸಿದರು.

ಅಂತಿಮವಾಗಿ ಮೇಯರ್ ಶಿವಕುಮಾರ್, ಪ್ರತಿ ವಾರ್ಡ್‌ಗೆ 75 ಲಕ್ಷ ರೂ. ಘೋಷಣೆ ಮಾಡಿ, ತ್ವರಿತವಾಗಿ ಕಾಮಗಾರಿಗಳಿಗೆ ಟೆಂಡರ್ ಕರೆದು ಕಾರ್ಯರೂಪಕ್ಕೆ ತರಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ಸದಸ್ಯರು ಟೇಬಲ್ ತಟ್ಟಿ, ಸಮ್ಮತಿ ಸೂಚಿಸಿದರು.

ಮಾ.ವಿ.ರಾಂಪ್ರಸಾದ್ ಮೈಸೂರು ಪಾಲಿಕೆ ಆಡಳಿತ ಪಕ್ಷದ ನಾಯಕ



ಮೈಸೂರು: ಮೈಸೂರು ನಗರ ಪಾಲಿಕೆ ಆಡಳಿತ ಪಕ್ಷದ ನಾಯಕರಾಗಿ ಮಾ.ವಿ.ರಾಂಪ್ರಸಾದ್ ಆಯ್ಕೆಯಾಗಿದ್ದಾರೆ. ಕೌನ್ಸಿಲ್ ಸಭೆಯಲ್ಲಿ ಮೇಯರ್ ಶಿವಕುಮಾರ್, ಆಡಳಿತ ಪಕ್ಷದ ನಾಯಕರನ್ನಾಗಿ ಮಾ.ವಿ.ರಾಂಪ್ರಸಾದ್ ಅವರನ್ನು ಆಯ್ಕೆ ಮಾಡಲು ಬಿಜೆಪಿ ನಗರಾಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಮನವಿ ಮಾಡಿದ್ದು, ಈ ಹಿನ್ನೆಲೆಯಲ್ಲಿ ಮಾ.ವಿ.ರಾಂಪ್ರಸಾದ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಘೋಷಿಸಿದರು. ಚುನಾವಣೆಯಲ್ಲಿ ಪಕ್ಷೇತರರಾಗಿ ಗೆಲುವು ಸಾಧಿಸಿದ ಮಾ.ವಿ. ರಾಂಪ್ರಸಾದ್, ನಂತರದಲ್ಲಿ ಬಿಜೆಪಿಗೆ ಬೆಂಬಲ ನೀಡಿದ್ದರು. ಮೇಯರ್ ಆಯ್ಕೆ ಸಂದರ್ಭದಲ್ಲೂ ಇವರ ಹೆಸರು ಮುಂಚೂಣಿಯಲ್ಲಿ ಕೇಳಿಬಂದಿತ್ತು.



ಕಾಗದ ಮುಕ್ತ ಆಡಳಿತ, ಇ–ಬಜೆಟ್ ಇಂಗಿತ

ಮೈಸೂರು: ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಾಗದ ರಹಿತ ಆಡಳಿತ ಹಾಗೂ ಇ–ಬಜೆಟ್ ಮಂಡನೆಗೆ ಪ್ರಯತ್ನಿಸೋಣ ಎಂದು ನೂತನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ತಮ್ಮ ಮೊದಲ ಕೌನ್ಸಿಲ್ ಸಭೆಯಲ್ಲಿ ತಿಳಿಸಿದರು. ಸದಸ್ಯ ಕೆ.ವಿ.ಶ್ರೀಧರ್, ಈ ಹಿಂದೆ ಪಾಲಿಕೆ ಸದಸ್ಯರಿಗೆ ನೀಡಿದ್ದ ಟ್ಯಾಬ್ ಬಗ್ಗೆ ಪ್ರಸ್ತಾಪಿಸಿ, ಅವುಗಳ ಬಳಕೆ ಬಗ್ಗೆ ಪ್ರಶ್ನಿಸಿದರು. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಕೌನ್ಸಿಲ್ ನಡಾವಳಿಯ ಪುಸ್ತಕ ನೀಡುವ ಬದಲಾಗಿ, ಎಲ್ಲಾ ಸದಸ್ಯರಿಗೂ ಇ–ಮೇಲ್ ಮೂಲಕ ಅದರ ಸಾಫ್ಟ್ ಕಾಪಿ ಕಳುಹಿಸುವಂತೆ ಮನವಿ ಮಾಡಿದ್ದರ ಪರಿಣಾಮ ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ಎಲ್ಲಾ ಸದಸ್ಯರಿಗೂ ಟ್ಯಾಬ್ ನೀಡಲಾಯಿತು. ಆದರೆ ಈವರೆಗೆ ಒಮ್ಮೆಯೂ ಬಳಸಿಲ್ಲ. ಸಾರ್ವಜನಿಕರ ತೆರಿಗೆ ಹಣ ನಷ್ಟವಾಗುವುದು ಬೇಡ. ಟ್ಯಾಬ್‌ಗಳನ್ನು ವಾಪಸ್ ಪಡೆಯಿರಿ ಎಂದು ಒತ್ತಾಯಿಸಿದರಲ್ಲದೆ, ತಮಗೆ ನೀಡಿದ್ದ ಟ್ಯಾಬ್ ಅನ್ನು ಪಾಲಿಕೆಗೆ ವಾಪಸ್ ನೀಡಿದರು. ಕೊರೊನಾ ಸಂದರ್ಭದಲ್ಲಿ ಟ್ಯಾಬ್ ಮೂಲಕವೇ ಸಭೆ ನಡೆಸಲಾಗಿತ್ತು ಎಂದು ಕೆಲ ಸದಸ್ಯರು ಹೇಳಿದರೆ, ಮತ್ತೆ ಕೆಲವರು ಈ ಬಗ್ಗೆ ಚರ್ಚೆ ಮುಂದುವರೆಸುವುದು ಬೇಡ ಎನ್ನುವಂತೆ ಮಾತನಾಡಿದರು. ಸದಸ್ಯರು ಮಧ್ಯ ಪ್ರವೇಶಿಸಿ, ಮಾತನಾಡಿದ್ದರಿಂದ ಶ್ರೀಧರ್ ಏನೇ ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ದ್ವೇಷಕ್ಕೂ ಸಂತೋಷಕ್ಕೂ ಏನು ವ್ಯತ್ಯಾಸ?
ಗಂಡ : ನಾನು ನಿನ್ನ ಬಾವಿಗೆ ಹಾಕಿದರೆ ಅದು ದ್ವೇಷ. ನೀನೇ ಹೋಗಿ ಬಾವಿಗೆ ಬಿದ್ದರೆ ಅದು ಸಂತೋಷ.

ಮೈಸೂರು ಮಿತ್ರ

ಶನಿವಾರ, 29 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸಾವಿರ ಉಪದೇಶಗಳಿಗಿಂತಲೂ ಆಪತ್ಕಾಲದಲ್ಲಿ ಮಾಡಿದ ಒಂದು ಸಹಾಯ ಶ್ರೇಷ್ಠವಾದುದು. –ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಣಿಯಲಾರದವಳು ನೆಲ ಡೊಂಕು ಅಂದಳಂತೆ

ನಿಮ್ಮ ಪತ್ರಗಳು

ಸಾಂಸ್ಕೃತಿಕ ನಗರದ ಹೆಬ್ಬಾಗಿಲೇ ಸರಿ ಇಲ್ಲವೇ!



ಮಾನ್ಯರೆ,

ಮೈಸೂರು ಸುಂದರ ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಅರಮನೆ ನಗರ, ಪಾರಂಪರಿಕ ಕಟ್ಟಡಗಳ ಬೀಡು, ಕಾವೇರಿ, ಕಪಿಲೆ, ಲಕ್ಷ್ಮಣತೀರ್ಥ, ಹೇಮಾವತಿ, ನುಗು ನದಿಗಳು ಪೋಷಿಸುತ್ತಿರುವ ನಾಡು, ಚಾಮುಂಡಿಬೆಟ್ಟ, ಬಿಳಿಗಿರಿರಂಗನಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟಗಳು ಕಾಯುತ್ತಿರುವ ಊರು, ಕೆಲವೇ ಮೈಲುಗಳ ಸಮೀಪ ಇರುವ ನಾಗರಹೊಳೆ, ಬಂಡೀಪುರ ಕಾಡುಗಳನ್ನು ಒಳಗೊಂಡ ಸಂಪದ್ಭರಿತ ನಗರ ನಮ್ಮ ಮೈಸೂರು. ಜಿಲ್ಲೆಯಾದ್ಯಾಂತ ಲೆಕ್ಕವಿಲ್ಲದಷ್ಟು ದೇವಾಲಯಗಳು, ಮಸೀದಿ, ಚರ್ಚುಗಳು ಪೂಜಿಸಲ್ಪಡುವ ದೇವಲೋಕ. ಒಟ್ಟಾರೆ ಮಹಾಕವಿ ಪಂಪನು ಬಣ್ಣಿಸಿದ "ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ (ಮಹಿಷಾ) ದೇಶಮಂ" ಹಾಗೂ "ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೋಳ್ ಬನವಾಸಿ(ಮಹಿಷಾ) ದೇಶದೊಳ್" ಕಾವ್ಯಕ್ಕೂ ಮೀರಿದ ನಗರವಿದು. ಬನವಾಸಿ ಹೆಸರು ಇರುವಡೆ ಮೈಸೂರು, ಮಹಿಷಾ ಎಂದು ಬದಲಿಸಿದರೆ, ಆತನ ವರ್ಣನೆಯೂ ಸಹ ಒಡೆಯರ್ ರಾಜಮನೆತನವು ಆಳಿದ ಮೈಸೂರಿಗೆ ಕಡಿಮೆಯೇ ಎನ್ನಬಹುದು!.

ಇಂಥಹ ಸುಂದರ ನಗರದ ಹೆಬ್ಬಾಗಿಲೊಂದನ್ನು ನಿರ್ವಹಣೆ ಮಾಡದಿರುವುದು ಶೋಚನೀಯ. ತಿ.ನರಸೀಪುರ ರಸ್ತೆಯ ಲಲಿತಮಹಲ್ ಮುಂಭಾಗದಲ್ಲಿ ಇರುವ ಹೆಬ್ಬಾಗಿಲು ಶಿಥಿಲಗೊಂಡು ಕುಸಿಯುವ ಸ್ಥಿತಿಯಲ್ಲಿದೆ. ಕಂಬದ ಮೇಲೆ ಅರಳಿ ಮರವೊಂದು ಹೆಮ್ಮರವಾಗಿ ಬೆಳೆಯುತ್ತಿದೆ. ಅಳವಡಿಸಿದ ಕಬ್ಬಿಣದ ಗೇಟ್ ಹಾಗೂ ಗ್ರಿಲ್‌ಗಳು ಮುರಿದು ನಿಂತಿವೆ. ಲಲಿತಮಹಲ್‌ಗೆ ದೇಶ–ವಿದೇಶಗಳಿಂದ ಬರುವ ಗಣ್ಯರು ಇದರ ಮೂಲಕವೇ ಸಂಚರಿಸುವುದು. ಪಾರಂಪರಿಕ ವಾಸ್ತು ಶಿಲ್ಪದ ನೆಲೆಯಲ್ಲಿ ಇಲ್ಲಿಯವರೆಗೆ ಹೊಸದೊಂದನ್ನು ಕಟ್ಟಲಾಗಲಿಲ್ಲ. ಇರುವ ಹಳೆಯದನ್ನಾದರೂ ಉಳಿಸಿಕೊಳ್ಳುವಂತೆ ಮನವಿ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಆರೋಗ್ಯ ಭಾಗ್ಯದ 'ಗ್ಯಾರಂಟಿ' ಅವಶ್ಯಕತೆಯಿದೆ

ಮಾನ್ಯರೆ,



ಶುಕ್ರವಾರದ 'ಮೈಸೂರು ಮಿತ್ರ'ದಲ್ಲಿ 'ದೊಡ್ಡಾಸ್ಪತ್ರೆಗೆ ಬಂದರೆ ಇನ್ನೂ ನೋವೆ' ಎಂಬ ತಲೆ ಬರಹದಲ್ಲಿ ಪ್ರಕಟವಾದ ವರದಿಯಲ್ಲಿ ಮೈಸೂರಿನ ಕೆ.ಆರ್ ಆಸ್ಪತ್ರೆಯ ಅವ್ಯವಸ್ಥೆಯ ಚಿತ್ರಣವನ್ನು ಕೊಡಲಾಗಿದೆ. ಅನೇಕ ರೋಗಿಗಳು ಅಲ್ಲಿ ತಮಗಾದ ಕೆಟ್ಟ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಸಾಧಾರಣವಾಗಿ ದುಡ್ಡಿಲ್ಲದ ಬಡವರೇ ಹೋಗುವ ಕೆ.ಆರ್.ಆಸ್ಪತ್ರೆಯಲ್ಲಿ ಅವರಿಗೆ ಸೂಕ್ತವಾದ ಉಚಿತ ಚಿಕಿತ್ಸೆ ಇಲ್ಲದೆ ಪರದಾಡುವಂತಾಗಿದೆ. ಇಂತವರಿಗೆ ಸೂಕ್ತ ಚಿಕಿತ್ಸೆ ದೊರೆಯುವಂತಾಗಲಿ. ಸರ್ಕಾರ ಆರನೇ ಗ್ಯಾರಂಟಿಯಾಗಿ ಕಡಿಮೆ ದರ, ಉಚಿತವಾಗಿ ಎಲ್ಲರಿಗೂ 'ಆರೋಗ್ಯ ಭಾಗ್ಯ' ಸಿಗುವಂತೆ ಮಾಡಲಿ. ಇದರ ಅವಶ್ಯಕತೆ ತುಂಬಾ ಇದೆ. –ರಾಘವೇಂದ್ರ ಜೋಯಿಸ್, ಮೈಸೂರು.

ಬಳ್ಳೂರು ಹುಂಡಿ ಗ್ರಾಮದಲ್ಲಿ ಹುಲಿ ಹಾವಳಿ

ಮಾನ್ಯರೆ,

ನಂಜನಗೂಡು ತಾಲೂಕು ಕಾಡಂಚಿನ ಗ್ರಾಮವಾದ ಬಳ್ಳೂರು ಹುಂಡಿಯಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಮೊನ್ನೆ ಗ್ರಾಮದ ರೈತರೊಬ್ಬರು ತನ್ನ ಹಸುಗಳನ್ನು ಮೇಯಿಸುತ್ತಿರುವಾಗ ಕಾಡಿನಿಂದ ಬಂದ ಹುಲಿ ಎರಡು ಹಸುವಿನ ಮೇಲೆ ದಾಳಿ ಮಾಡಿದೆ. ಹುಲಿ ದಾಳಿಯಿಂದ ಒಂದು ಹಸು ಬಲಿಯಾಗಿದೆ. ಮತ್ತೊಂದಕ್ಕೆ ಹೆಚ್ಚಿನ ಗಾಯವಾಗಿದ್ದು, ಚಿಕಿತ್ಸೆ ಕೊಡಲಾಗಿದೆ.

ಈ ಹಿಂದೆ ಗ್ರಾಮದ ಮತ್ತೊಬ್ಬ ರೈತ ಸ್ವಾಮಿ ದಾಸಯ್ಯ ಎಂಬ ರೈತನ ಮೇಲೆಯೂ ಕೂಡ ಹುಲಿ ದಾಳಿ ಮಾಡಿತ್ತು. ಪ್ರತಿದಿನ ಹುಲಿ, ಚಿರತೆ, ಆನೆಗಳು, ಕಾಡುಹಂದಿ, ಜಿಂಕೆ ಮುಂತಾದ ಕಾಡುಪ್ರಾಣಿಗಳಿಂದ ಜನರಿಗೆ ಹೆಚ್ಚಿನ ತೊಂದರೆಗಳು ಉಂಟಾಗುತ್ತಿವೆ.

ಈಗಾಗಲೇ ಕಾಡುಪ್ರಾಣಿಗಳಿಂದ ನಷ್ಟ ಅನುಭವಿಸಿದ ರೈತರಿಗೆ ಯಾವುದೇ ತರಹದ ಪರಿಹಾರ ಸಿಕ್ಕಿಲ್ಲ. ಅರಣ್ಯಾಧಿಕಾರಿಗಳ ನಿರ್ಲಕ್ಷ್ಯದಿಂದ ಜನರಿಗೆ ತೊಂದರೆ ಯಾಗುತ್ತಿದೆ. ಈಗಾಗಲೇ ಮುಂಗಾರು ವಿಳಂಬವಾದ ಕಾರಣ ಜನರಿಗೆ ಬೇಸರವಾಗಿದ್ದು, ಇದರ ಜೊತೆಗೆ ಈ ಕಾಡುಪ್ರಾಣಿಗಳ ಹಾವಳಿಯಿಂದ ಮತ್ತಷ್ಟು ನಷ್ಟವಾಗುತ್ತಿದೆ. ದಯವಿಟ್ಟು ಮಾನ್ಯ ಶಾಸಕರು, ಅರಣ್ಯಾಧಿಕಾರಿಗಳು ಕೂಡಲೇ ಹುಲಿಯನ್ನು ಸೆರೆ ಹಿಡಿದು, ಕಾಡುಪ್ರಾಣಿಗಳಿಂದ ಜನರನ್ನು ರಕ್ಷಿಸಬೇಕೆಂದು ಮನವಿ.

–ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ.

ಈ ರಸ್ತೆಗೆ ಸುಸ್ಥಿತಿ ಭಾಗ್ಯ ಎಂದು?

ಮಾನ್ಯರೆ,

ಹಿಂದಿನ ಬಿಜೆಪಿ ಸರ್ಕಾರವಿದ್ದಾಗ ವಿ.ವಿ. ಮೊಹಲ್ಲಾ 1ನೇ ಮುಖ್ಯ ರಸ್ತೆ, ಆರಕ್ಷಕ ಠಾಣೆಯ ಎದುರು ಒಳಚರಂಡಿ ಪೈಪ್ ಅಳವಡಿಸುವ ಉದ್ದೇಶದಿಂದ ರಸ್ತೆಯನ್ನು ಅಗೆದು ತೇಪೆ ಹಚ್ಚುವ ಕಾರ್ಯ ಆರಂಭಿಸಿ ತಿಂಗಳುಗಳೇ ಕಳೆದಿವೆ. ಕಾಮಗಾರಿ ಮುಗಿದ ಮೇಲೆ ರಸ್ತೆಗೆ ಡಾಂಬರು ಹಾಕಬಹುದಿತ್ತು. ಡಾಂಬರು ಹಾಕಿದ ಮೇಲೆ ರಸ್ತೆ ಅಗೆದು ಹಾಳು ಮಾಡಿದ್ದಾರೆ. ಶಾಸಕ ಕೆ. ಹರೀಶ್‌ಗೌಡರು ಈ ಬಗ್ಗೆ ಗಮನಹರಿಸಿ ಸಮಸ್ಯೆ ಬಗೆಹರಿಸಲು ಮನವಿ.

– ನೊಂದ ನಾಗರಿಕರು, ಮೈಸೂರು.



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ನೀರಿಗಾಗಿ ನರಮೇಧದ ಆತಂಕ!

ಇತ್ತೀಚಿನ ಒಂದೆರಡು ತಿಂಗಳಲ್ಲಿ ಹೆಲ್ಮಂಡ್ ನದಿಯ ನೀರಿನ ಮೇಲಿನ ಹಕ್ಕುಗಳಿಗೆ ಸಂಬಂಧಪಟ್ಟಂತೆ ಅಫ್ಘಾನ್–ಇರಾನ್ ಗಡಿಯಲ್ಲಿ ಸೇನೆಗಳ ಮಧ್ಯೆ ಘರ್ಷಣೆ ನಡೆದಿದೆ. ಇರಾನಿನ ತಾಸಿನ್ ನ್ಯೂಸ್ ಏಜೆನ್ಸಿಯ ವರದಿಯಂತೆ ಇರಾನ್‌ನ ಸಿಸ್ಥಾನ ಮತ್ತು ಬಲೂಚೆಸ್ತಾನ್ ಪ್ರಾಂತ್ಯದ ಝುಬುಲ್ ಜಿಲ್ಲೆ ಮತ್ತು ಅಫ್ಘಾನಿಸ್ಥಾನದ ನಿಮ್ರುಜ್ ಪ್ರಾಂತ್ಯದ ಕೆಂಗ್ ಜಿಲ್ಲೆಯ ಸರಹದ್ದಿನಲ್ಲಿ ನಡೆದ ಘರ್ಷಣೆಯಲ್ಲಿ ಇರಾನಿನ ಇಬ್ಬರು ಸೈನಿಕರು ಹತರಾಗಿದ್ದಾರೆಂದು ಅಫ್ಘಾನ್‌ನ ತಾಲಿಬಾನ್ ಹೇಳಿದರೆ, ಇರಾನ್ ಸೇನೆ ತಾನು ಹನ್ನೆರಡು ತಾಲಿಬಾನ್ ಸೈನಿಕರನ್ನು ಸಾಯಿಸಿರುವುದಾಗಿ ತಿಳಿಸಿದೆ.

ಚೀನಿ ಸುದ್ದಿ ಏಜೆನ್ಸಿ ಕ್ಸಿನ್ ಹುವಾ ವರದಿಯಂತೆ ಇರಾನ್ ಸಂಸದ ಹುಸೈನ್ ಅಲಿ–ಶಹರಿಯಾರಿ ಹೇಳಿಕೆಯಂತೆ ಅಫ್ಘಾನ್‌ನ ತಾಲಿಬಾನ್ ಸರಕಾರವು ಹೆಲ್ಮಂಡ್ ನದಿ ನೀರನ್ನು ಇರಾನ್‌ನ ಭೂ ಪ್ರದೇಶಕ್ಕೆ ಹರಿಯುವುದನ್ನು ತಡೆದು ಹೆಚ್ಚುವರಿ ನೀರನ್ನು ಕಮಲ್ ಖಾನ್ ಅಣೆಕಟ್ಟು ಹಾಗೂ ಇನ್ನಿತರ ಜಲಾಶಯಗಳಲ್ಲಿ ಸಂಗ್ರಹಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಅಫ್ಘಾನ್ ಅನೇಕ ಜಲಾಶಯಗಳನ್ನು ನಿರ್ಮಿಸಿ ಹೆಲ್ಮಂಡ್ ನದಿ ನೀರನ್ನು ಸಂಗ್ರಹಿಸುತ್ತಿದೆ. ಇವುಗಳಿಲ್ಲದಿದ್ದರೆ ಈ ಹೆಚ್ಚುವರಿ ನೀರು ಇರಾನ್ ನತ್ತ ಹರಿಯುತ್ತಿತ್ತು ಎಂದು ಆರೋಪಿಸಿದರು.

ಹೆಲ್ಮಂಡ್ ನದಿಯ ಪ್ರಾಮುಖ್ಯತೆ: ಹೆಲ್ಮಂಡ್ ನದಿಯು ಅಫ್ಘಾನಿಸ್ತಾನ್–ಇರಾನ್ ಎರಡೂ ದೇಶಗಳಿಗೆ ಜೀವನದಿಯಾಗಿದೆ. ಅಫ್ಘಾನ್ ರಾಜಧಾನಿ ಕಾಬೂಲ್ ಬಳಿಯಿರುವ ಹಿಂದೂಕುಶ್ ಪರ್ವತ ಶ್ರೇಣಿಯಲ್ಲಿ ಹುಟ್ಟುವ ಈ ನದಿಯು 1150 ಕಿ.ಮೀ. ನಷ್ಟು ಹರಿದು ಉಭಯ ದೇಶಗಳ ಗಡಿಯಲ್ಲಿರುವ ಹಾಮೂನ್ ಸರೋವರ ಸೇರುತ್ತದೆ. ಅಫ್ಘಾನಿಸ್ತಾನದ ಅತೀ ಉದ್ದದ ನದಿಯಾಗಿರುವ ಹೆಲ್ಮಡ್ ಶೇ.95 ರಷ್ಟು ಅಫ್ಘಾನ್‌ನಲ್ಲಿ ಹರಿಯುತ್ತಿದ್ದು, ಅಫ್ಘಾನ್‌ನ ಶೇ. 40 ರಷ್ಟು ಭೂ ಮೇಲ್ಮೈ ಚದರದ ನೀರು ಈ ನದಿಯಲ್ಲಿದೆ. ಅಫ್ಘಾನ್‌ನ ದಕ್ಷಿಣ ಮತ್ತು ದ. ಪಶ್ಚಿಮ ಪ್ರಾಂತ್ಯಗಳು ಹಾಗೂ ಇರಾನ್‌ನ ಹೆಮೂನ್ ಪ್ರದೇಶದ ಶುಷ್ಕ ದಕ್ಷಿಣ–ಪಶ್ಚಿಮ ಪ್ರದೇಶಗಳಿಗೆ ನೀರುಣಿಸುವ ಜೀವ ನದಿಯಾಗಿದ್ದು ಜತೆಗೆ ಹೆಚ್ಚುವರಿ ನೀರು ಅಫ್ಘಾನ್‌ನ ಸರೋವರಗಳಿಗೂ ಹರಿಯುತ್ತಿದೆ ದುರದೃಷ್ಟವಶಾತ್ 1870ರ ದಶಕದಿಂದಲೂ ಹೆಲ್ಮಂಡ್ ನದಿ ನೀರಿನ ಹಂಚಿಕೆ ಎರಡೂ ದೇಶಗಳಿಗೆ ಕಗ್ಗಂಟಾಗಿದ್ದು ಇನ್ನೂ ಪರಿಹಾರವಾಗಿಲ್ಲ. ಈ ನದಿಯ ನೀರು ಸಂಗ್ರಹವಾಗುವ ಇರಾನ್‌ನ ಅತಿ ದೊಡ್ಡ ಸಿಹಿ ನೀರ ಸರೋವರ ಹಮೂನ್, ಅತಿಯಾದ ನೀರಿನ ಬಳಕೆ, ಬರಗಾಲ, ಸರೋವರದ ಸಾಮರ್ಥ್ಯಕ್ಕೆ ಮೀರಿ ಅಣೆಕಟ್ಟುಗಳ, ಜಲಾಶಯಗಳ ನಿರ್ಮಾಣ ಹಾಗೂ ನೀರಿನ ನಿಯಂತ್ರಣಗಳಿಂದಾಗಿ ಒಣಗುತ್ತಿರುವುದು ಇರಾನ್‌ನ ಸಮಸ್ಯೆಗಳನ್ನು ಹೆಚ್ಚಿಸಿರುವುದು ಉದ್ವಿಗ್ನತೆಯನ್ನು ಸೃಷ್ಟಿಸಿದೆ.

ಹೆಲ್ಮಂಡ್ ನದಿ ಒಪ್ಪಂದ–ಭಿನ್ನಾಭಿಪ್ರಾಯ: ಹೆಲ್ಮಂಡ್ ನದಿಯು ಎರಡೂ ದೇಶಗಳಿಗೆ ಕುಡಿಯುವ ನೀರು, ಮೀನುಗಾರಿಕೆ, ಕೃಷಿ ಹಾಗೂ ನೀರಾವರಿಗೆ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ 1973 ರಲ್ಲಿ ನದಿ ನೀರಿನ ಹಂಚಿಕೆಯ ಒಪ್ಪಂದಕ್ಕೆ ಎರಡೂ ದೇಶಗಳು ಸಹಿ ಹಾಕಿದವು. ಆದರೆ ಇದುವರೆಗೆ ಒಪ್ಪಂದವು ಅನುಷ್ಠಾನಗೊಳ್ಳದೇ ವಿವಾದವಾಗಿ ಬದಲಾವಣೆಗೊಂಡಿದೆ. ಒಪ್ಪಂದದ ಪ್ರಕಾರ ಅಫ್ಘಾನಿಸ್ಥಾನವು ಇರಾನ್‌ನ ಪ್ರತಿ ಸೆಕೆಂಡಿಗೆ 22 ಘನ ಮೀಟರ್ ನೀರು ನೀಡಬೇಕು.

ಸದ್ಭಾವನೆ ಮತ್ತು ಸಹೋದರ ಸಂಬಂಧಗಳಿಗಾಗಿ ಪ್ರತಿ ಸೆಕೆಂಡಿಗೆ ನಾಲ್ಕು ಘನ ಮೀಟರ್‌ನಷ್ಟು ಹೆಚ್ಚುವರಿಯಾಗಿ ವಾರ್ಷಿಕ ಸರಾಸರಿ 820 ಮಿ. ಕ್ಯೂ. ಮೀಟರ್ ನೀರನ್ನು ನೀಡಬೇಕೆಂದು ಷರತ್ತು ವಿಧಿಸಿದೆ. ಒಪ್ಪಂದದ ಸುಸೂತ್ರ ಅನುಷ್ಠಾನಕ್ಕೆ ಹೊಸ ಹೆಲ್ಮಂಡ್ ಆಯೋಗ ಸ್ಥಾಪಿಸುವ ಅವಕಾಶವಿದೆ.

ಅಫ್ಘಾನ್‌ನ ಷರಾಹ್ ಪ್ರಾಂತ್ಯದಲ್ಲಿ ಜಲವಿದ್ಯುತ್‌ಗಾಗಿ ಬಕ್ಷ್ ಆಬಾದ್ ಅಣೆಕಟ್ಟಿನ ನಿರ್ಮಾಣ ಹೆಚ್ಚಿನ ಭೂಮಿಗೆ ನೀರಾವರಿ ಹಾಗೂ ಉದ್ಯೋಗ ಸೃಷ್ಟಿಯ ಉದ್ದೇಶ ಹೊಂದಿದೆ. ಅದೇ ರೀತಿ 2021 ರಲ್ಲಿ ಅಫ್ಘಾನಿಸ್ಥಾನವು ಪ್ರದೇಶದ ಮೂಲಸೌಕರ್ಯ ಮತ್ತು ಕೃಷಿಗಾಗಿ ನಿರ್ಮಿಸಿದ ಚಹರ್ ಬುರ್ಜಕ್ ಜಿಲ್ಲೆಯ ಕಮಲ್ ಖಾನ್ ಅಣೆಕಟ್ಟು ತೆರೆದಾಗ ಪರಿಸ್ಥಿತಿ ಬಿಗಡಾಯಿಸಿದೆ. ಈ ಅಣೆಕಟ್ಟುಗಳು ಬರಪೀಡಿತ ಇರಾನ್‌ಗೆ ನೀರಿನ ಹರಿವನ್ನು ಕಡಿತಗೊಳಿಸುತ್ತದೆ. ಜತೆಗೆ ಈ ಅಣೆಕಟ್ಟು ಪರಿಸರ ಸಮಸ್ಯೆ ಸೃಷ್ಟಿಸಲಿವೆ. ಹಾಗೂ ಹಮೂನ್ ಜೌಗು ಪ್ರದೇಶಗಳನ್ನು ಪೋಷಿಸುವ ನೀರಿನ ಪೂರೈಕೆಗೆ ಅಡ್ಡಿಪಡಿಸುತ್ತದೆ ಎಂದು ಇರಾನ್ ಅಧಿಕಾರಿಗಳು ವಾದಿಸಿ, ಅದರ ನಿರ್ಮಾಣವನ್ನು ಹಲವು ವರ್ಷಗಳ ಕಾಲ ಸ್ಥಗಿತಗೊಳಿಸಲು ಯತ್ನಿಸಿದರೆ, ಅಫ್ಘಾನಿಸ್ಥಾನವು 1973ರ ಒಪ್ಪಂದಕ್ಕೆ ಅನುಗುಣವಾಗಿ ಅಣೆಕಟ್ಟುಗಳ ನೀರನ್ನು ಸುರಕ್ಷಿತಗೊಳಿಸುತ್ತಿದೆ ಎಂದು ವಾದಿಸುತ್ತಿದೆ.

1973ರ ಒಪ್ಪಂದದಂತೆ ಅಫ್ಘಾನಿಸ್ಥಾನಕ್ಕೆ ಹೆಲ್ಮಂಡ್ ನದಿ ನೀರಿನ ಮೇಲೆ ಅಪಾರ ಅಧಿಕಾರವಿದೆ. ಒಪ್ಪಂದದ ಪ್ರಕಾರ ಅಫ್ಘಾನಿಸ್ಥಾನವು ನದಿ ನೀರು ಪೂರೈಕೆ ಮೇಲೆ ಸಂಪೂರ್ಣ ಏಕಪಕ್ಷೀಯ ಹಕ್ಕುಗಳನ್ನು ಹೊಂದಿದೆ. ಕಮಲ್ ಖಾನ್ ಅಣೆಕಟ್ಟಿನ ಉದ್ಘಾಟನಾ ಸಮಾರಂಭದಲ್ಲಿ ಆಗಿನ ಅಫ್ಘಾನ್ ಅಧ್ಯಕ್ಷರಾದ ಅಶ್ರಫ್ ಘನಿಯವರು ಅಫ್ಘಾನ್ ಇನ್ನು ಮುಂದೆ ಯಾರಿಗೂ ಉಚಿತ ನೀರನ್ನು ನೀಡುವುದಿಲ್ಲ. ಆದ್ದರಿಂದ ಇರಾನ್ ನೀರಿಗೆ ವಿನಿಮಯ ರೂಪದಲ್ಲಿ ಅಫ್ಘಾನ್‌ರಿಗೆ ಇಂಧನ ನೀಡಬೇಕೆಂದು ಹೇಳಿದ್ದರು. ಕಳೆದ ವರ್ಷ ಜುಲೈನಲ್ಲಿ ಇರಾನ್ ವಿದೇಶಾಂಗ ಸಚಿವರಾದ ಹುಸೇನ್ ಅಮಿರಾ ಬ್ದುಲ್ಲಾಹಿಯಾನ್‌ರವರು ತಾಲಿಬಾನ್ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತತಿಯವರೊಂದಿಗೆ ದೂರವಾಣಿಯಲ್ಲಿ ಹೆಲ್ಮಂಡ್ ನದಿ ನೀರಿನಲ್ಲಿ ಟೆಹರಾನ್ ಹಕ್ಕುಗಳ ಕುರಿತು ಚರ್ಚಿಸಿದ್ದರು.

ಮೇ ಮೊದಲ ವಾರದಲ್ಲಿ ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿಯವರು ತಮ್ಮ ದೇಶದ ನೀರಿನ ಹಕ್ಕುಗಳ ಉಲ್ಲಂಘನೆಯ ಬಗ್ಗೆ ತಾಲಿಬಾನ್ ಸರಕಾರವನ್ನು ಟೀಕಿಸಿದ್ದರು. ನಮ್ಮ ಜನರ ಹಕ್ಕುಗಳನ್ನು ಉಲ್ಲಂಘಿಸಲು ನಾವು ಬಿಡುವುದಿಲ್ಲವೆಂದು ಹೇಳಿದ್ದರು. ನದಿ ನೀರಿನ ಮಟ್ಟವನ್ನು ಅಳೆಯಲು ಇರಾನ್‌ನ ಜಲಶಾಸ್ತ್ರಜ್ಞರಿಗೆ ಅವಕಾಶ ನೀಡುವಂತೆ ರೈಸಿಯವರು ತಾಲಿಬಾನ್‌ಗೆ ಒತ್ತಾಯಿಸಿದ್ದರು. ಇದಕ್ಕೆ ಪ್ರತಿಯಾಗಿ ತಾಲಿಬಾನ್‌ನ ವಿದೇಶಾಂಗ ಸಚಿವ ಮುತ್ತತಿಯವರು ಇರಾನ್ ತನ್ನ ಬರ ಪರಿಸ್ಥಿತಿಗಳನ್ನು ನಿರ್ಲಕ್ಷಿಸಬಾರದು ಮತ್ತು ಸದ್ದು ಮಾಡುವ ಬದಲು ಮುಖಾಮುಖಿ ಮಾತುಕತೆಯ ಮೂಲಕ ಸಮಸ್ಯೆ ಪರಿಹರಿಸಬೇಕು ಎಂದು ತಿರುಗೇಟು ನೀಡಿದ್ದರು.

ಹವಾಮಾನ ಬದಲಾವಣೆ ಪರಿಣಾಮ: ಪರಿಸರ ತಜ್ಞರ ಅಭಿಪ್ರಾಯದಂತೆ ಇರಾನ್ ಮತ್ತು ಅಫ್ಘಾನಿಸ್ಥಾನದಲ್ಲಿ ಜಗತ್ತಿನ ಸರಾಸರಿಗಿಂತ ಹೆಚ್ಚು ತಾಪಮಾನ ಇದೆ. ಕಳಪೆ ಜಲನಿರ್ವಹಣೆ, ಹೆಚ್ಚುತ್ತಿರುವ ಭೂತಾಪಮಾನ ಹಾಗೂ ಇತರ ಚಟುವಟಿಕೆಗಳು ಹೆಲ್ಮಂಡ್ ನದಿ ಜಲಾನಯನ ಪ್ರದೇಶದ ಮೇಲೆ ವಿನಾಶಕಾರಿ ಪರಿಣಾಮ ಬೀರಿದೆ. ವಾತಾವರಣ ಹೆಚ್ಚಳವಾಗುವ ತಾಪಮಾನ ಮಣ್ಣಿನಲ್ಲಿರುವ ತೇವಾಂಶ ನಾಶಪಡಿಸಿ ಬರಗಾಲ ಸೃಷ್ಟಿಸುತ್ತದೆ. ಬರಗಾಲವು ಜಲಮೂಲಗಳಲ್ಲಿರುವ ನೀರನ್ನು ವೇಗವಾಗಿ ಆವಿಗೊಳಿಸುತ್ತದೆ. ಆದರೆ ದುರಂತವೆಂದರೆ ಪರಿಸರದ ಪರಿಸ್ಥಿತಿಗಳನ್ನು ಪರಿಗಣಿಸದೇ ನೀರಿಗಾಗಿ ಎರಡೂ ದೇಶಗಳು ಯುದ್ಧಕ್ಕೆ ಸನ್ನದ್ಧವಾಗುತ್ತಿವೆ.

ಘರ್ಷಣೆಗೆ ಎರಡೂ ದೇಶಗಳು ಪರಸ್ಪರ ದೂಷಿಸುತ್ತಿವೆ. ಇರಾನ್ ಉಪ ಪೊಲೀಸ್ ಮುಖ್ಯಸ್ಥ ಖಾಸೆಮ್ ರೆಜೈ ಪ್ರಕಾರ ಮೊದಲ ಗುಂಡು ತಾಲಿಬಾನ್ ಹಾರಿಸಿತು ಎಂದು ಇಸ್ಲಾಮಿಕ್ ರಿಪಬ್ಲಿಕ್ ನ್ಯೂಸ್ ಏಜೆನ್ಸಿ (IRNA) ವರದಿ ಮಾಡಿದರೆ, ಇರಾನ್ ಘರ್ಷಣೆಯನ್ನು ಆರಂಭಿಸಿತು ಎಂದು ಅಫ್ಘಾನ್ ಆಂತರಿಕ ಸಚಿವಾಲಯದ ವಕ್ತಾರ ಅಬ್ದುಲ್ ನಫಿ ಟಾಕೋರ್ ದೂರಿದ್ದಾರೆ. ಒಟ್ಟಾರೆ ಅಫ್ಘಾನ್–ಇರಾನ್ ಗಡಿಯಲ್ಲಿ ಉದ್ವಿಗ್ನತೆ ನೆಲೆಸಿದೆ.

ಘರ್ಷಣೆಯ ಹಿಂದಿನ ಇತರ ಕಾರಣಗಳು: ಸಂಘರ್ಷಕ್ಕೆ ಮತ್ತೊಂದು ಕಾರಣ ಮಾದಕ ವಸ್ತು ಕಳ್ಳಸಾಗಣೆ. ಅಫ್ಘಾನ್ ವಿಶ್ವದ ಅತಿ ದೊಡ್ಡ ಅಫೀಮು ಉತ್ಪಾದಕ ದೇಶವಾಗಿದೆ. ಈ ಅಫೀಮು ಇರಾನ್ ಮೂಲಕ ಕಳ್ಳ ಸಾಗಣೆ ಮಾಡಲಾಗುತ್ತಿದೆ. ಇದನ್ನು ತಡೆಯಲು ಅಫ್ಘಾನ್ ಸರಕಾರ ಕಠಿಣ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಇರಾನ್ ಆರೋಪಿಸಿದೆ. ಇದೂ ಉಭಯ ದೇಶಗಳ ನಡುವೆ ಉದ್ವಿಗ್ನತೆಗೆ ಕಾರಣವಾಗಿದೆ. ಅಫ್ಘಾನಿಸ್ಥಾನವು ಜಾಗತಿಕ ಭಯೋತ್ಪಾದಕ ಅಥವಾ ಉಗ್ರಗಾಮಿ ಗುಂಪುಗಳಿಗೆ ಆಶ್ರಯ ನೀಡಿರುವುದು ಗಡಿಯಲ್ಲಿ ಯುದ್ಧದ ವಾತಾವರಣ ಸೃಷ್ಟಿಸಿದೆ.

ನೀರಿಗಾಗಿ ಯುದ್ಧದ ಪರಿಸ್ಥಿತಿ: ಮುಂದಿನ ದೊಡ್ಡ ಯುದ್ಧಗಳು ನೀರಿಗಾಗಿ ನಡೆಯಲಿದೆ ಎನ್ನುತ್ತಾರೆ ತಜ್ಞರು. ನಾಲ್ಕು ಸಾವಿರ ವರ್ಷಗಳ ಹಿಂದೆ ಮೆಸಪೊಟಮಿಯಾದಲ್ಲಿ ಟೈಗ್ರಿಸ್–ಯುಫ್ರೆಟಿಸ್ ನದಿಗಳ ನೀರಿನ ಹಂಚಿಕೆ ಬಗ್ಗೆ ವಿವಾದದ ಅತಿ ಹಳೆಯ ದಾಖಲೆ ಇದೆ ಎನ್ನುತ್ತಾರೆ. ಪ್ರಸ್ತುತ ಈ ನದಿಗಳ ನೀರಿಗಾಗಿ ಟರ್ಕಿ–ಸಿರಿಯಾ–ಇರಾನ್ ದೇಶಗಳ ಮಧ್ಯೆ ವಿವಾದವಿದೆ. ಇಥಿಯೋಪಿಯಾದ ಗ್ರ್ಯಾಂಡ್ ಇಥಿಯೋಪಿಯನ್ ರಿನೈಸೆನ್ಸ್ ಡ್ಯಾಂ ಮತ್ತು ಬ್ಲೂನೈಲ್ ನದಿಯ ನೀರಿನ ಬಳಕೆ ಕುರಿತು ಈಜಿಪ್ಟ್, ಸುಡಾನ್ ಮತ್ತು ಇಥಿಯೋಪಿಯಾ ದೇಶಗಳ ನಡುವಿನ ವಿವಾದ ಬಗೆಹರಿದಿಲ್ಲ. ಈಜಿಪ್ಟ್–ಇಥಿಯೋಪಿಯಾ ಸೇನೆಗಳು ಗಡಿಯುದ್ಧಕ್ಕೂ ಸನ್ನದ್ಧ ಸ್ಥಿತಿಯಲ್ಲಿವೆ. ಕ್ರಿಮಿಯಾಕ್ಕೆ ಹರಿಯುತ್ತಿದ್ದ ನೀರನ್ನು ಉಕ್ರೇನ್ ತನ್ನ ಖರ್ಸೋಣ್ ಪ್ರದೇಶಕ್ಕೆ ಹರಿಸಲು ಡೆನಿಯರ್ ನದಿಗೆ ಅಡ್ಡಲಾಗಿ ನಿರ್ಮಿಸಿದ ಖಖೊವ್ಕಾ ಅಣೆಕಟ್ಟನ್ನು ಕಳೆದ ವರ್ಷ ರಷ್ಯನ್ ಪಡೆಗಳು ನಾಶ ಮಾಡಿದವು. ಮೆಕ್ಸಿಕೋ, ಚಿಲಿ, ಇಸ್ರೇಲ್, ಭಾರತ, ಕೆನ್ಯಾ, ಪೆರು ಮೊದಲಾದ ನೂರಾರು ದೇಶಗಳು ನದಿ ನೀರಿನ ಹಂಚಿಕೆ ವಿವಾದದಲ್ಲಿವೆ. ವಿಶ್ವ ಸಂಸ್ಥೆಯ ಅಂಕಿ ಅಂಶ ವಿಭಾಗ ನೀಡಿರುವ ಮಾಹಿತಿಯಲ್ಲಿ 2022 ಏಪ್ರಿಲ್‌ವರೆಗೆ ಜಗತ್ತಿನಲ್ಲಿ 1100ಕ್ಕೂ ಹೆಚ್ಚು ನದಿ ನೀರಿನ ಹಂಚಿಕೆ ಸಂಬಂಧಪಟ್ಟಂತೆ ದೇಶವನ್ನು ಮಧ್ಯೆ ಉದ್ವಿಗ್ನತೆ ಘರ್ಷಣೆ ಹಾಗೂ ಸಣ್ಣ ಪ್ರಮಾಣದಲ್ಲಿ ಯುದ್ಧಗಳೂ ಆಗಿವೆ.



ಮುಂದಿನ ದೊಡ್ಡ ಯುದ್ಧಗಳು ನೀರಿಗಾಗಿ ನಡೆಯಲಿದೆ ಎನ್ನುತ್ತಾರೆ ತಜ್ಞರು. ನಾಲ್ಕು ಸಾವಿರ ವರ್ಷಗಳ ಹಿಂದೆ ಮೆಸಪೊಟಮಿಯಾದಲ್ಲಿ ಟೈಗ್ರಿಸ್–ಯುಫ್ರೆಟಿಸ್ ನದಿಗಳ ನೀರಿನ ಹಂಚಿಕೆ ಬಗ್ಗೆ ವಿವಾದದ ಅತಿ ಹಳೆಯ ದಾಖಲೆ ಇದೆ ಎನ್ನುತ್ತಾರೆ. ಪ್ರಸ್ತುತ ಈ ನದಿಗಳ ನೀರಿಗಾಗಿ ಟರ್ಕಿ–ಸಿರಿಯಾ–ಇರಾನ್ ದೇಶಗಳ ಮಧ್ಯೆ ವಿವಾದವಿದೆ. ಇಥಿಯೋಪಿಯಾದ ಗ್ರ್ಯಾಂಡ್ ಇಥಿಯೋಪಿಯನ್ ರಿನೈಸೆನ್ಸ್ ಡ್ಯಾಂ ಮತ್ತು ಬ್ಲೂನೈಲ್ ನದಿಯ ನೀರಿನ ಬಳಕೆ ಕುರಿತು ಈಜಿಪ್ಟ್, ಸುಡಾನ್ ಮತ್ತು ಇಥಿಯೋಪಿಯಾ ದೇಶಗಳ ನಡುವಿನ ವಿವಾದ ಬಗೆಹರಿದಿಲ್ಲ. ಈಜಿಪ್ಟ್–ಇಥಿಯೋಪಿಯಾ ಸೇನೆಗಳು ಗಡಿಯುದ್ಧಕ್ಕೂ ಸನ್ನದ್ಧ ಸ್ಥಿತಿಯಲ್ಲಿವೆ.

ಇಂದು ವಿಶ್ವ ಹುಲಿ ದಿನ

ಹುಲಿ ಸಾಮ್ರಾಜ್ಯದಲ್ಲಿ ಪಾರುಪತ್ಯ ಮೆರೆಯುವುದೇ 'ಕರುನಾಡು'

- 2022ರ ಹುಲಿ ಸಮೀಕ್ಷೆ ವರದಿಯತ್ತ ದೇಶದ ಚಿತ್ತ
- ಕ್ಯಾಮರಾ ಟ್ರಾಪ್‌ನಲ್ಲಿ 435 ಹುಲಿಗಳ ಚಿತ್ರಗಳ ಸೆರೆ
- ನಂಬರ್ ಒನ್ ಸ್ಥಾನಕ್ಕಾಗಿ ತೀವ್ರ ಪೈಪೋಟಿ

■ ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜು.28 –ರಾಷ್ಟ್ರೀಯ ಪ್ರಾಣಿ 'ಹುಲಿ' ಸಂತತಿ ಸಂರಕ್ಷಣೆಗೆ ಕೈಗೊಂಡ ಕಟ್ಟುನಿಟ್ಟಿನ ಕ್ರಮದಿಂದಾಗಿ ವಿಶ್ವದಲ್ಲೇ ಭಾರತ ಅತೀ ಹೆಚ್ಚು ಹುಲಿ ಹೊಂದಿರುವ ದೇಶ ಎಂಬ ಕೀರ್ತಿಗೆ ಪಾತ್ರವಾಗಿರುವ ಬೆನ್ನಲ್ಲೇ ಇದೀಗ ದೇಶದ ಹುಲಿ ಸಾಮ್ರಾಜ್ಯದ ಪಾರುಪತ್ಯ ಮೆರೆಯಲು ಕರ್ನಾಟಕ ತುದಿಗಾಲಲ್ಲಿ ನಿಂತಂತ್ತಿದೆ.

ಬೇಟೆಗಾರರ ಹಾವಳಿಯಿಂದಾಗಿ ಅಳಿವಿನಂಚಿಗೆ ದೂಡಲ್ಪಟ್ಟಿದ್ದ ಹುಲಿ ಸಂತತಿಯ ಪುನಶ್ಚೇತನಕ್ಕೆ ವಿಶ್ವಸಂಸ್ಥೆಯ ದೃಢ ನಿಲುವಿನಿಂದಾಗಿ ಇಂದು ಭಾರತವೂ ಒಳಗೊಂಡಂತೆ ಕೆಲ ರಾಷ್ಟ್ರಗಳಲ್ಲಿ ಹುಲಿ ಸಂತತಿಯಲ್ಲಿ ಸುಧಾರಣೆ ಕಂಡಿದೆ. ಅದರಲ್ಲೂ ಭಾರತದಲ್ಲಿ ವನ್ಯಜೀವಿಗಳ ಸಂರಕ್ಷಣೆಗೆ ತೊಟ್ಟ ಪಣದಿಂದಾಗಿ ವಿಶ್ವದ ಒಟ್ಟು ಹುಲಿಗಳ ಸಂಖ್ಯೆಯಲ್ಲಿ ಭಾರತದಲ್ಲೇ ಶೇ.70ಕ್ಕಿಂತ ಹೆಚ್ಚಿನ ಹುಲಿಗಳಿರುವುದು ಹೆಮ್ಮೆ ಪಡುವ ಸಂಗತಿ. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಸಲಾಗುವ ಹುಲಿ ಸಮೀಕ್ಷೆಯಲ್ಲಿ(ಟೈಗರ್ ಎಸ್ಟಿಮೇಷನ್)ನಲ್ಲಿ ಈ ಬಾರಿ ವಿಶ್ವದಲ್ಲಿ 4,500 ಹುಲಿಗಳಿರುವುದಾಗಿ ಅಂದಾಜಿಸಲಾಗಿದೆ. ಅದರಲ್ಲಿ ಭಾರತದಲ್ಲೇ 3,167 ಹುಲಿಗಳಿವೆ. ಇದು ಹೆಮ್ಮೆ ಪಡುವ ಸಂಗತಿ.

ಭಾರತದಲ್ಲಿ ಪ್ರಸ್ತುತ 53 ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸಲ್ಪಟ್ಟ ಸಂರಕ್ಷಿತಾರಣ್ಯವಿದ್ದು, ಅವುಗಳಲ್ಲಿ ಹುಲಿಗಳ ಸಂತತಿ ಸಂವೃದ್ಧಿಗೊಳ್ಳುತ್ತಿದೆ. ಸುಧಾರಣೆ ಕಂಡ ಹುಲಿಗಳ ಸಂತತಿ ನಿಧಾನವಾಗಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ವನ್ಯಧಾಮಗಳಲ್ಲೂ ನೆಲೆ ಕಂಡುಕೊಳ್ಳಲಾರಂಭಿಸಿರುವುದರಿಂದ ದೇಶದಲ್ಲಿ ಹುಲಿ ಸಂತತಿಗೆ ಸುಭದ್ರ ನೆಲೆ ಒದಗಿದೆ. ಇದರೊಂದಿಗೆ ಅರಣ್ಯ ಇಲಾಖೆ ಬೇಟೆಗಾರರ ಹಾವಳಿಗೆ ಬ್ರೇಕ್ ಹಾಕಲು ಕೈಗೊಂಡ ಕ್ರಮ ಹಾಗೂ ಅರಣ್ಯ ಸಿಬ್ಬಂದಿಗಳ ಪರಿಶ್ರಮ ಹುಲಿ ಸಂತತಿ ವೃದ್ಧಿಗೆ ಕಾರಣವಾಗಿದೆ.

ಕರುನಾಡು ಹುಲಿಗಳ ಬೀಡು: ಕಳೆದ ಬಾರಿ ಕೇವಲ ಎರಡು ಹುಲಿಗಳ ಸಂಖ್ಯೆಯಲ್ಲಿ ಕೊರತೆ ಉಂಟಾಗಿ ದೇಶದಲ್ಲಿ ಹುಲಿ ಹೊಂದಿರುವ ಎರಡನೇ ರಾಜ್ಯ ಎಂದು ಬೀಗಿತ್ತು. ಕರ್ನಾಟಕ ಈ ಹಿಂದೆ ಮೊದಲನೇ ಸ್ಥಾನ ಅಲಂಕರಿಸಿತ್ತು. 2018ರ ಸಮೀಕ್ಷೆಯಲ್ಲಿ ಮಾರ್ಜಿನ್ ಅಂಕಿ–ಅಂಶದಲ್ಲಿ ದೊಡ್ಡ ಪ್ರಮಾಣದ ವ್ಯತ್ಯಾಸವಿದ್ದರೂ ಮಧ್ಯಪ್ರದೇಶ ನಂಬರ್ ಒನ್ ಸ್ಥಾನಕ್ಕೇರಿತ್ತು. ಆದರೆ, ಈ ಬಾರಿ ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಸುಧಾರಣೆ ಕಂಡಿದೆ. ಹುಲಿ ಸಂರಕ್ಷಿತ ಪ್ರದೇಶ ಮಾತ್ರವಲ್ಲದೆ, ವನ್ಯಧಾಮ, ವಿವಿಧ ಉಪ ವಲಯದಲ್ಲೂ ಹುಲಿಗಳ ಹೆಜ್ಜೆ ಗುರುತು ಮೂಡಿದೆ. ಇದರಿಂದ ಕರ್ನಾಟಕ 2022ರ ಸಮೀಕ್ಷೆಯಲ್ಲಿ ಹುಲಿಗಳ ಸಾಮ್ರಾಜ್ಯದ ದೊರೆಯಾಗಿ ಕಂಗೊಳಿಸುವುದು ಖಚಿತವಾಗಿದೆ. 2018ರ ಸಮೀಕ್ಷೆಯಲ್ಲಿ ಕರ್ನಾಟಕದಲ್ಲಿ 4123 ಕ್ಯಾಮರಾ ಟ್ರಾಪ್ ಬಳಸಲಾಗಿತ್ತು. ಅವುಗಳಲ್ಲಿ 49,79,803 ಚಿತ್ರಗಳು ಸೆರೆಯಾಗಿದ್ದವು. ಅವುಗಳಲ್ಲಿ 404 ಹುಲಿಗಳ ಚಿತ್ರ ಸೆರೆ ಸಿಕ್ಕಿದ್ದವು. ಇದರೊಂದಿಗೆ ಸಿಬ್ಬಂದಿ ನಡೆಸಿದ ಸಮೀಕ್ಷೆ ವೇಳೆ ಕಂಡು ಬಂದ ಹುಲಿಗಳು ಸೇರಿದಂತೆ ಸಲ್ಲಿಸಿದ್ದ ವರದಿಯಲ್ಲಿ 475ರಿಂದ 573 ಹುಲಿಗಳಿವೆ ಎಂದು ಉಲ್ಲೇಖಿಸಲಾಗಿತ್ತು. ಅಂತಿಮವಾಗಿ ಎನ್‌ಟಿಸಿಎ ಬಿಡುಗಡೆ ಮಾಡಿದ ವರದಿಯಲ್ಲಿ ಕರ್ನಾಟಕ 524 ಹುಲಿ ಹೊಂದಿದೆ ಎಂದು ಘೋಷಿಸಲಾಗಿತ್ತು. 526 ಹುಲಿಗಳನ್ನು ಹೊಂದಿದ್ದ ಮಧ್ಯಪ್ರದೇಶ ಮೊದಲ ಸ್ಥಾನ ಪಡೆದು ಬೀಗಿತ್ತು.

2022ರಲ್ಲಿ ಕರ್ನಾಟಕದಲ್ಲಿ ನಡೆದ ಸಮೀಕ್ಷೆಯಲ್ಲಿ 4786 ಕ್ಯಾಮರಾ ಟ್ರಾಪ್ ಬಳಕೆ ಮಾಡಲಾಗಿದ್ದು, ವಿವಿಧ ಪ್ರಾಣಿಗಳ 66,86,450 ಚಿತ್ರಗಳು ಸೆರೆಯಾಗಿದ್ದವು. ಅವುಗಳಲ್ಲಿ ಈ ಬಾರಿ 435 ಹುಲಿಗಳ ಚಿತ್ರ ಸೆರೆಯಾಗಿವೆ. ಇನ್ನು ಸಿಬ್ಬಂದಿ ನಡೆಸಿದ ಸಮೀಕ್ಷೆಯಲ್ಲಿ ಕಂಡು ಬಂದ ಹುಲಿ ಹಾಗೂ ಅವುಗಳ ಹೆಜ್ಜೆಗಳ ಅಂಕಿ–ಅಂಶವನ್ನು ಪರಿಗಣಿಸಿದರೆ, ಈ ಬಾರಿ ಹುಲಿಗಳ ಸಂಖ್ಯೆಯಲ್ಲಿ ನಾವೇ ನಂಬರ್ ಒನ್ ಎಂದು ಕನ್ನಡಿಗರು ಬೀಗುವ ಎಲ್ಲಾ ಲಕ್ಷಣಗಳು ಗೋಚರಿಸಿವೆ.

ಎಲ್ಲೆಲ್ಲಿ ಎಷ್ಟೆಷ್ಟು: ರಾಜ್ಯದ ಹುಲಿ ಸಂರಕ್ಷಿತ ಪ್ರದೇಶವಾದ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 612, ಭದ್ರಾದಲ್ಲಿ 330, ಬಿಆರ್‌ಟಿಯಲ್ಲಿ 288, ಕಾಳಿಯಲ್ಲಿ 448, ನಾಗರಹೊಳೆಯಲ್ಲಿ 502 ಕ್ಯಾಮರಾ ಪಾಯಿಂಟ್ ಅಳವಡಿಸಲಾಗಿತ್ತು. ಇದಲ್ಲದೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ 80, ಬೆಳಗಾವಿ ವಿಭಾಗದಲ್ಲಿ 119, ಭದ್ರಾವತಿ ವಿಭಾಗದಲ್ಲಿ 121, ಕಾವೇರಿ ವನ್ಯಜೀವಿ ಧಾಮದಲ್ಲಿ 473, ಚಿಕ್ಕಮಗಳೂರು ವನ್ಯಜೀವಿ ಅರಣ್ಯದಲ್ಲಿ 41, ಹಳಿಯಾಳದಲ್ಲಿ 106, ಕಾರವಾರ ವಿಭಾಗದಲ್ಲಿ 135, ಕೊಪ್ಪ ವನ್ಯಜೀವಿಧಾಮದಲ್ಲಿ 50, ಕುದುರೇ ಮುಖ ವಿಭಾಗದಲ್ಲಿ 173, ಮಡಿಕೇರಿ (ಬ್ರಹ್ಮಗಿರಿ, ಪುಷ್ಪಗಿರಿ ಮತ್ತು ತಲಕಾವೇರಿ) ವಿಭಾಗದಲ್ಲಿ 175, ಮಲೆ ಮಹದೇಶ್ವರ ಬೆಟ್ಟದಲ್ಲಿ 432, ಮೈಸೂರು ವಿಭಾಗದಲ್ಲಿ 36, ಶಿವಮೊಗ್ಗ ವನ್ಯಜೀವಿ ಧಾಮದಲ್ಲಿ 182, ಶಿರಸಿ ವಿಭಾಗದಲ್ಲಿ 107, ವಿರಾಜಪೇಟೆ ವಿಭಾಗದಲ್ಲಿ 111, ಯಲ್ಲಾಪುರ ವಿಭಾಗದಲ್ಲಿ 94 ಸೇರಿ ರಾಜ್ಯದಲ್ಲಿ ಒಟ್ಟಾರೆ 4786 ಕ್ಯಾಮರಾ ಟ್ರಾಪ್ ಬಳಸಲಾಗಿತ್ತು.

ಪತ್ತೆಯಾದ ಹುಲಿಗಳು: ಕ್ಯಾಮರಾ ಟ್ರಾಪ್‌ನಲ್ಲಿ ನಾಗರಹೊಳೆ ಅರಣ್ಯದಲ್ಲಿ 149, ಬಂಡೀಪುರದಲ್ಲಿ 143 ಹುಲಿ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶದಲ್ಲಿ 39, ಭದ್ರದಲ್ಲಿ 26, ಕಾಳಿ ಅರಣ್ಯದಲ್ಲಿ 19 ಹುಲಿ ಸೇರಿದಂತೆ ರಾಜ್ಯದ 5 ಹುಲಿ ಸಂರಕ್ಷಿತ ಪ್ರದೇಶದಲ್ಲಿ ಒಟ್ಟು 376 ಹುಲಿಗಳು ಪತ್ತೆಯಾಗಿವೆ. ಅಲ್ಲದೆ, ಬನ್ನೇರುಘಟ್ಟದಲ್ಲಿ 2, ಬೆಳಗಾವಿ ಡಿವಿಷನ್‌ನಲ್ಲಿ 8, ಭದ್ರಾವತಿ ಡಿವಿಷನ್‌ನಲ್ಲಿ 6, ಕಾವೇರಿ ವನ್ಯಧಾಮದಲ್ಲಿ 2, ಚಿಕ್ಕಮಗಳೂರು ವನ್ಯಧಾಮದಲ್ಲಿ 8, ಹಳಿಯಾಳ ವಿಭಾಗದಲ್ಲಿ 2, ಕಾರವಾರ ಡಿವಿಷನ್‌ನಲ್ಲಿ 2, ಕೊಪ್ಪ ವನ್ಯಧಾಮದಲ್ಲಿ 9, ಕುದುರೆಮುಖ ವನ್ಯಜೀವಿ ವಿಭಾಗದಲ್ಲಿ 2, ಮಡಿಕೇರಿ ವಲಯದಲ್ಲಿ 6, ಮಡಿಕೇರಿ (ಬ್ರಹ್ಮಗಿರಿ, ಪುಷ್ಪಗಿರಿ, ತಲಕಾವೇರಿ) ವನ್ಯಧಾಮದಲ್ಲಿ 11, ಮಲೆ ಮಹಾದೇಶ್ವರ ವನ್ಯಧಾಮದಲ್ಲಿ 6, ಮೈಸೂರು ವಿಭಾಗದಲ್ಲಿ 4, ಶಿವಮೊಗ್ಗ ವನ್ಯಧಾಮದಲ್ಲಿ 2, ವಿರಾಜಪೇಟೆ ಡಿವಿಷನ್‌ನಲ್ಲಿ 5, ಯಲ್ಲಾಪುರ ಡಿವಿಷನ್‌ನಲ್ಲಿ 4 ಸೇರಿದಂತೆ ವನ್ಯಧಾಮ ಹಾಗೂ ವಿವಿಧ ವಿಭಾಗದಲ್ಲಿ ಒಟ್ಟು 79 ಹುಲಿಗಳು ಕ್ಯಾಮರಾ ಟ್ರಾಪ್‌ನಲ್ಲಿ ಸೆರೆಯಾಗಿವೆ ಎರಡು ವಿಭಾಗದಿಂದ ಈ ಬಾರಿ 455 ಹುಲಿಗಳು ಪತ್ತೆಯಾಗಿದ್ದು, ಅವುಗಳಲ್ಲಿ ರಿಮಾರ್ಕ್ಸ್‌ನಲ್ಲಿ 20 ಹುಲಿಗಳನ್ನು ಕೈ ಬಿಡಲಾಗಿದೆ. ಒಟ್ಟು 435 ಹುಲಿಗಳ ಚಿತ್ರ ಸೆರೆಯಾಗಿದೆ.



ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ವಲಯದಲ್ಲಿ ಹುಲಿರಾಯನ ಗಾಂಭೀರ್ಯ. /ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್



"ಕಳೆದ ಬಾರಿಯ ಹುಲಿ ಸಮೀಕ್ಷೆಯಲ್ಲಿ ವಿಶ್ವದಲ್ಲೇ ಅತೀ ಹೆಚ್ಚು ಹುಲಿ ಹೊಂದಿರುವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ಅದರಲ್ಲೂ ಕರ್ನಾಟಕದಲ್ಲಿ ಹುಲಿಗಳ ಸಂತತಿಯ ಸಂಖ್ಯೆಯಲ್ಲಿ ಪ್ರಗತಿಯಾಗಿದ್ದು, ಈ ಬಾರಿ ದೇಶದಲ್ಲೇ ಅತೀ ಹೆಚ್ಚು ಹುಲಿ ಹೊಂದಿರುವ ರಾಜ್ಯ ಎಂಬ ಹೆಗ್ಗಳಿಕೆ ಕರ್ನಾಟಕಕ್ಕೆ ದೊರೆಯಲಿದೆ ಎಂಬ ನಿರೀಕ್ಷೆಯಿದೆ. ಅದರಲ್ಲೂ ಮೈಸೂರು ಭಾಗದ ಅರಣ್ಯದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಳವಾಗಿರುವುದಕ್ಕೆ ನಾವು ಹೆಮ್ಮೆ ಪಡಬೇಕು. – ಸಾಗರ್ ಸುರೇಶ್, ವನ್ಯಜೀವಿ ಛಾಯಾಗ್ರಾಹಕ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮಾಂಗಲ್ಯ ಸರದಿಂದಲೇ ಕುತ್ತಿಗೆ ಬಿಗಿದು ಗೃಹಿಣಿ ಹತ್ಯೆ; ಆರೋಪಿಗೆ ಜೀವಾವಧಿ ಶಿಕ್ಷೆ

ಹುಣಸೂರು, ಜು.28–ಮಾಂಗಲ್ಯ ಸರದಿಂದ ಕುತ್ತಿಗೆ ಬಿಗಿದು ಗೃಹಿಣಿಯನ್ನು ಹತ್ಯೆ ಮಾಡಿದ ಹಂತಕರಿಗೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ಹುಣಸೂರಿನ 8ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಪಾಟೀಲ ಮೋಹನ ಕುಮಾರ ಭೀಮನಗೌಡ ತೀರ್ಪು ನೀಡಿದ್ದಾರೆ. ಹುಣಸೂರಿನ ಮಂಜುನಾಥ ಬಡಾವಣೆಯ ರಾಮಕೃಷ್ಣೇಗೌಡ ಎಂಬುವರ ಪತ್ನಿ ಜ್ಯೋತಿ ಹತ್ಯೆಗೀಡಾದವರಾಗಿದ್ದು, ಅದೇ ಬಡಾವಣೆಯ ಪ್ರವೀಣ್ ಶಿಕ್ಷೆಗೊಳಗಾದವನು.

ವಿವರ: ಹುಣಸೂರಿನ ಮಂಜುನಾಥ ಬಡಾವಣೆ ನಿವಾಸಿ ರಾಮಕೃಷ್ಣೇಗೌಡರು ತಮ್ಮ ಪತ್ನಿ ಜ್ಯೋತಿ ಅವರ ಹೆಸರಿನಲ್ಲಿ ಆಯುರ್ವೇದಿಕ್ ವೆಸ್ಟೀಜ್ ಕಂಪನಿಯ ಡಿಸ್ಟ್ರಿಬ್ಯೂಟರ್ ಕೆಲಸ ಮಾಡುತ್ತಿದ್ದರು. ಇವರೊಂದಿಗೆ ಅನೇಕರು ಕೆಲಸ ಮಾಡಿಕೊಂಡಿದ್ದು, ಆಗಿಂದಾಗ್ಗೆ ಕಂಪನಿ ವಿಚಾರವಾಗಿ ಮೀಟಿಂಗ್ ಸಹ ಇವರ ಮನೆಯಲ್ಲಿ ನಡೆಯುತ್ತಿತ್ತು. ಈ ಮೀಟಿಂಗ್‌ಗಳಿಗೆ ಪ್ರವೀಣ್ ಕೂಡ ಬರುತ್ತಿದ್ದ.

ರಾಮಕೃಷ್ಣೇಗೌಡರು ಕೆಲಸದ ವಿಚಾರವಾಗಿ ಬೇರೆ ಊರುಗಳಿಗೆ ಹೋದಾಗ ಅವರ ಮನೆಗೆ ಹೋಗುತ್ತಿದ್ದ ಪ್ರವೀಣ್, ಜ್ಯೋತಿ ಅವರೊಂದಿಗೆ ಅಸಭ್ಯವಾಗಿ ವರ್ತಿಸಿದನೆಂದು ಹೇಳಲಾಗಿದ್ದು, ಈ ಕಾರಣದಿಂದ ರಾಮಕೃಷ್ಣೇಗೌಡರು ನ್ಯಾಯ ಪಂಚಾಯಿತಿ ಮಾಡಿ ಆತನನ್ನು ಕೆಲಸದಿಂದ ತೆಗೆದು ಹಾಕಿದ್ದರು.

2017ರ ಡಿ.8ರಂದು ರಾಮಕೃಷ್ಣೇಗೌಡರು ಮನೆಯಲ್ಲಿ ಇಲ್ಲದ ವೇಳೆ ಮನೆಗೆ ತೆರಳಿದ ಪ್ರವೀಣ್, ಜ್ಯೋತಿಯೊಂದಿಗೆ ಅಸಭ್ಯವಾಗಿ ವರ್ತಿಸಿದ ಕಾರಣ ಬೇಸರಗೊಂಡ ಜ್ಯೋತಿ ಅಂದು ರಾತ್ರಿ 10.30ರ ಸುಮಾರಿನಲ್ಲಿ ಪ್ರವೀಣ್‌ನ ಮನೆ ಬಳಿ ತೆರಳಿ ಆತನ ತಂದೆ–ತಾಯಿಗೆ ದೂರು ಸಲ್ಲಿಸಿದ್ದಾರೆ. ಅಷ್ಟಕ್ಕೇ ಸುಮ್ಮನಿರದ ಜ್ಯೋತಿ, ಮರು ದಿನ ಬೆಳಗ್ಗೆ 6.15ರ ಸುಮಾರಿನಲ್ಲಿ ಮತ್ತೆ ಅವರ ಮನೆಗೆ ಹೋಗಿ ಗಲಾಟೆ ಮಾಡಿ ಬಂದಿದ್ದಾರೆ. ಇದರಿಂದ ರೋಷಗೊಂಡಿದ್ದ ಪ್ರವೀಣ, ಅಂದು ಬೆಳಗ್ಗೆ 6.50ರ ಸುಮಾರಿನಲ್ಲಿ ರಾಮಕೃಷ್ಣೇಗೌಡರ ಮನೆಯ ಟೆರೇಸ್ ಮೇಲಿದ್ದ ಜ್ಯೋತಿಯೊಂದಿಗೆ ಗಲಾಟೆ ಮಾಡಿ ಅವರ ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯ ಸರವನ್ನೇ ಕುತ್ತಿಗೆಗೆ ಬಿಗಿದು ಕೊಲೆ ಮಾಡಿ ಪರಾರಿಯಾಗಿದ್ದಾನೆ. ಈ ಸಂಬಂಧ ಹುಣಸೂರು ಟೌನ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಪ್ರವೀಣನಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಕೆಎಂಸಿ ಶಿವಶಂಕರ ಮೂರ್ತಿ ವಾದ ಮಂಡಿಸಿದ್ದರು.

ಮೈಸೂರಲ್ಲಿ ಇಬ್ಬರ ಬಂಧನ; 51 ಕೆ.ಜಿ. ಗಾಂಜಾ ವಶ

ಮೈಸೂರು, ಜು.28–ಮೈಸೂರಿನ ಸಿಸಿಬಿ ಪೊಲೀಸರು 51 ಕೆ.ಜಿ. 420 ಗ್ರಾಂ ಗಾಂಜಾ ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಿದ್ದಾರೆ. ಮತ್ತೋರ್ವ ಪರಾರಿಯಾಗಿದ್ದಾನೆ.

ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಗ್ರಾಮದ ಆಟೋಚಾಲಕ ಸಯ್ಯದ್ ಇರ್ಫಾನ್(41) ಮತ್ತು ನಂಜನಗೂಡು ಪಟ್ಟಣದ ನೀಲಕಂಠ ನಗರ ನಿವಾಸಿ ಸಲೀಂ ಉಲ್ಲಾಖಾನ್(36) ಬಂಧಿತರಾಗಿದ್ದು, ಮೈಸೂರಿನ ನಾಯ್ಡುನಗರ ನಿವಾಸಿ ವಾಸೀಂ ಪಾಷ ಪರಾರಿಯಾಗಿದ್ದಾನೆ.

ವಿವರ: ಸಿಸಿಬಿ ಇನ್ಸ್‌ಪೆಕ್ಟರ್ ಜಿ.ಶೇಖರ್ ಅವರು ತಮ್ಮ ಸಿಬ್ಬಂದಿ ಅಸ್ಗರ್ ಖಾನ್, ಸಲೀಂ ಪಾಷ, ಟಿ.ಪ್ರಕಾಶ್, ನರಸಿಂಹರಾಜು ಮತ್ತು ಮೋಹನ ಆರಾಧ್ಯ ಅವರೊಡಗೂಡಿ ಜು.26ರಂದು ಗಸ್ತು ತಿರುಗುತ್ತಿದ್ದ ವೇಳೆ ಮಧ್ಯಾಹ್ನ 2.10ರಲ್ಲಿ ಫೌಂಟನ್ ಸರ್ಕಲ್ ಕಡೆಯಿಂದ ರಾಜೇಂದ್ರನಗರ ಮುಖ್ಯ ರಸ್ತೆಯಲ್ಲಿ ಬರುತ್ತಿದ್ದ ಪ್ಯಾಸೆಂಜರ್ ಆಟೋ (ಕೆಎ 02 ಬಿ 5525)ವನ್ನು ಪಶು ವೈದ್ಯಕೀಯ ಆಸ್ಪತ್ರೆ ಬಳಿ ತಡೆದು ನಿಲ್ಲಿಸಿ ತಪಾಸಣೆ ನಡೆಸಿದಾಗ 5 ಕೆ.ಜಿ. ಗಾಂಜಾ ಪತ್ತೆಯಾಗಿದೆ. ಆಟೋ ಡ್ರೈವರ್ ಸಯ್ಯದ್ ಇರ್ಫಾನ್ ಮತ್ತು ಆಟೋದಲ್ಲಿದ್ದ ಸಲೀಂ ಉಲ್ಲಾಖಾನ್ ಅವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ, ತಾವು ನಾಯ್ಡು ನಗರದ ವಾಸೀಂ ಪಾಷ ನೀಡಿದ ಗಾಂಜಾವನ್ನು ಆತ ಹೇಳಿದ ವ್ಯಕ್ತಿಗೆ ಫೌಂಟನ್ ಸರ್ಕಲ್ ಬಳಿ ಕೊಡಲು ಹೋಗುತ್ತಿರುವುದಾಗಿ ತಿಳಿಸಿದ್ದಾರೆ.

ಇವರಿಬ್ಬರು ನೀಡಿದ ಮಾಹಿತಿಯನ್ನಾಧರಿಸಿ ನಾಯ್ಡುನಗರದ ವಾಸೀಂ ಪಾಷ ಮನೆ ಮೇಲೆ ದಾಳಿ ನಡೆಸಿದ ವೇಳೆ ವಾಸೀಂ ಪಾಷ ಮನೆಯಿಂದ ಓಡಿ ಹೋಗಿದ್ದಾನೆ. ಆತನ ಮನೆಯಲ್ಲಿ ತಪಾಸಣೆ ನಡೆಸಿದಾಗ 45 ಬಂಡಲ್ ಗಳಲ್ಲಿ ಒಟ್ಟು 46 ಕೆ.ಜಿ. 420 ಗ್ರಾಂ ಗಾಂಜಾ ಪತ್ತೆಯಾಗಿದೆ ಇಬ್ಬರನ್ನು ಬಂಧಿಸಿ, ಒಟ್ಟು 51 ಕೆ.ಜಿ 420 ಗ್ರಾಂ ಗಾಂಜಾ ಹಾಗೂ ಪ್ಯಾಸೆಂಜರ್ ಆಟೋ ವಶಪಡಿಸಿಕೊಂಡ ಸಿಸಿಬಿ ಇನ್ಸ್‌ಪೆಕ್ಟರ್ ಶೇಖರ್ ಅವರು ಈ ಸಂಬಂಧ ಎನ್.ಆರ್. ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮೃತ ವ್ಯಕ್ತಿಯ ಹೆಸರಲ್ಲಿ ನಕಲಿ ವ್ಯಕ್ತಿಗಳ ಸೃಷ್ಟಿಸಿ 10.18 ಎಕರೆ ಭೂಮಿ ಕಬಳಿಕೆ

ನಂಜನಗೂಡು, ಜು.28–ಮೃತ ವ್ಯಕ್ತಿಯ ಹೆಸರಿನಲ್ಲಿ ನಕಲಿ ವ್ಯಕ್ತಿಗಳಿಂದ ನೋಂದಣಿ ಮಾಡಿಸಿಕೊಳ್ಳುವ ಮೂಲಕ ರೈತನೊಬ್ಬನ 10 ಎಕರೆ 18 ಗುಂಟೆ ಜಮೀನು ಕಬಳಿಸಿರುವ ಬಗ್ಗೆ ಕ್ರಿಮಿನಲ್ ಕೇಸ್ ದಾಖಲಾಗಿದೆ.

ನಂಜನಗೂಡು ತಾಲೂಕು ಕೆಂಬಾಲ ಗ್ರಾಮದ ಉಮೇಶ್, ಆತನ ಪತ್ನಿ ಮಂಜುಳಾ, ನಂಜನಗೂಡು ತಾಲೂಕು ಬಿದರಗೂಡು ಗ್ರಾಮದ ರವಿಕುಮಾರ್, ಆತನ ಪತ್ನಿ ರಕ್ಷಿತಾ ಲೋಕೇಶ್, ನಂಜನಗೂಡು ಟೌನ್ ನೀಲಕಂಠ ನಗರದ ಅನಂತನಾಗ್, ಶಿವರಾಜು, ರಾಮಸ್ವಾಮಿ ಲೇಔಟ್‌ನ ಮಹೇಂದ್ರ ಕುಮಾರ್, ಗುಂಡ್ಲುಪೇಟೆ ತಾಲೂಕು ಶಿಂಡನಪುರ ಗ್ರಾಮದ ಸಂತೋಷ್ ಎಂಬುವರು ಚಾಮರಾಜನಗರ ತಾಲೂಕು ಬಸವನಪುರ ಗ್ರಾಮದ ರೈತ ವಿ.ಜಿ.ಮೈಲ್ ಸ್ವಾಮಿ(53) ಎಂಬುವರ ಜಮೀನು ಕಬಳಿಸಿದ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಮೈಲ್‌ಸ್ವಾಮಿ ಅವರ ಮುತ್ತಾತ ಎ.ಎಂ.ಸುಂದರಮೂರ್ತಿ ಅವರಿಗೆ ನಂಜನಗೂಡು ತಾಲೂಕು ಕೆಂಬಾಲ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 10 ಎಕರೆ 19 ಗುಂಟೆ ಜಮೀನಿದೆ. ಅವರ ನಿಧನದ ನಂತರ ಮಗ ಎ.ಎಸ್.ರಾಜಮಾಣಿಕ್ಯಂ ಈ ಜಮೀನಿನ ಸ್ವಾಧೀನದಲ್ಲಿದ್ದರು. ಅವರು 1985ರ ನ.11ರಂದು ಹಾಗೂ ಅವರ ಪತ್ನಿ ಮೀನಾಕ್ಷಿ ಅಮ್ಮಾಳ್ 1987ರ ಅ.15ರಂದು ನಿಧನ ಹೊಂದಿದ ನಂತರ ಈ ದಂಪತಿಯ ಏಕೈಕ ಪುತ್ರಿ ಪರಮೇಶ್ವರಿ ಅವರು (ಮೈಲ್‌ಸ್ವಾಮಿ ಅವರ ತಾಯಿ) ಸ್ವಾಧೀನನುಭವದಲ್ಲಿದ್ದಾರೆ.

ಆದರೆ ಜಮೀನಿನ ದಾಖಲೆಗಳೆಲ್ಲವೂ ಮೈಲ್‌ಸ್ವಾಮಿಯವರ ಮುತ್ತಾತ ಎ.ಎಂ.ಸುಂದರಮೂರ್ತಿ ಅವರ ಹೆಸರಲ್ಲೇ ಮುಂದುವರೆದಿದೆ. ಈ ಮಧ್ಯೆ ಕೆಂಬಾಲ ಗ್ರಾಮದ ಉಮೇಶ್ ಮತ್ತು ಆತನ ಪತ್ನಿ ಮಂಜುಳಾ ಎಂಬುವರು ಈ ಜಮೀನಿನ ಒಂದು ಭಾಗವನ್ನು ಬೆಂಗಳೂರಿನ ಆರ್.ಟಿ.ನಗರ, ಕನಕನಗರ 8ನೇ ಕ್ರಾಸ್‌ನ ಮನೆ ನಂ.61ರಲ್ಲಿ ವಾಸವಿರುವ ದೊಡ್ಡಲಿಂಗಪ್ಪ ಎಂಬುವರ ಮಗ ಎ.ಎಂ. ಸುಂದರ ಮೂರ್ತಿ ಎಂಬುವರಿಂದ 2022ರ ಜ.13ರಂದು ಖರೀದಿ ಮಾಡಿರುವುದಾಗಿ ನಂಜನಗೂಡು ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯಾಗಿದೆ. ಅದೇ ರೀತಿ ಬಿದರಗೂಡು ಗ್ರಾಮದ ಬಿ.ಎಂ.ರವಿಕುಮಾರ್ ಮತ್ತು ಅವರ ಪತ್ನಿ ಶ್ರೀಮತಿ ರಕ್ಷಿತಾ ಲೋಕೇಶ್ ಎಂಬುವರು ಬೆಂಗಳೂರಿನ ಆರ್.ಟಿ.ನಗರ, ಕನಕನಗರ 8ನೇ ಕ್ರಾಸ್‌ನಲ್ಲಿ ವಾಸವಿರುವ ಮಹದೇವಮೂರ್ತಿ ಎಂಬುವರ ಪುತ್ರ ಎ.ಎಂ.ಸುಂದರ ಮೂರ್ತಿ ಅವರಿಂದ ಜಮೀನಿನ ಮತ್ತೊಂದು ಭಾಗವನ್ನು 2023ರ ಜು.14ರಂದು ಖರೀದಿ ಮಾಡಿರುವುದಾಗಿ ನೋಂದಣಿಯಾಗಿದೆ. ಇಬ್ಬರೂ ಸುಂದರಮೂರ್ತಿಗಳು ಬೆಂಗಳೂರಿನ ಒಂದೇ ರಸ್ತೆಯವರಾದರೂ ತಂದೆಯ ಹೆಸರು ಹಾಗೂ ಆಧಾರ್ ಸಂಖ್ಯೆಗಳು ಬೇರ್ಪಟ್ಟಿವೆ. ಈ ಖರೀದಿಗಳಿಗೆ ಅನಂತನಾಗ್, ಹೆಚ್.ಎಲ್.ಮಹೇಂದ್ರ ಕುಮಾರ್, ಶಿವರಾಜು, ಸಂತೋಷ್ ಅವರುಗಳು ಸಾಕ್ಷಿದಾರರಾಗಿದ್ದು, ಇವರೆಲ್ಲರ ವಿರುದ್ಧ ಮೈಲ್ ಸ್ವಾಮಿ ನೀಡಿದ ದೂರನ್ನಾಧರಿಸಿ ನಂಜನಗೂಡು ಟೌನ್ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 415, 416, 417, 418, 419, 420, 463, 465, 468ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮತದಾರರಿಗೆ ಆಮಿಷ: ಶಾಸಕ ಸ್ಥಾನ ಅಸಿಂಧುಗೊಳಿಸಲು ಅರ್ಜಿ: ಸಿಎಂ ಸಿದ್ದರಾಮಯ್ಯಗೆ ಹೈಕೋರ್ಟ್ ನೋಟಿಸ್

ಬೆಂಗಳೂರು, ಜು.28– ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸುವ ಮೂಲಕ ಮತದಾರರಿಗೆ ಆಮಿಷವೊಡ್ಡಿರುವ ಆರೋಪದಡಿ ವರುಣಾ ಕ್ಷೇತ್ರದ ಶಾಸಕ ಸ್ಥಾನದಿಂದ ಅನರ್ಹಗೊಳಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿದೆ. ಸೆಪ್ಟೆಂಬರ್ ಒಂದಕ್ಕೆ ಮುಂದಿನ ವಿಚಾರಣೆ ಮುಂದೂಡಿ ನ್ಯಾಯಮೂರ್ತಿ ಸುನೀಲ್ ದತ್ ಯಾದವ್ ಆದೇಶ ನೀಡಿದರು.

ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 123(2) ಪ್ರಕಾರ ಮತದಾರರಿಗೆ ಆಮಿಷ ಒಡ್ಡುವಂತಿಲ್ಲ. ಆದರೆ ಕಾಂಗ್ರೆಸ್ ಪಕ್ಷ ಮತದಾರರಿಗೆ ಗ್ಯಾರಂಟಿ ಕಾರ್ಡ್ ವಿತರಿಸಿ ಆಮಿಷ ಒಡ್ಡಿದೆ. ಹೀಗಾಗಿ ಸಿದ್ದರಾಮಯ್ಯ ಅವರ ಶಾಸಕ ಸ್ಥಾನದ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಕೋರಿ ಕೆ.ಎಂ.ಶಂಕರ ಎಂಬುವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಸಿದ್ದರಾಮಯ್ಯ ಅವರು ಸಂವಿಧಾನದ ನಿಬಂಧನೆಗಳು ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆಯಡಿ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಗ್ಯಾರಂಟಿಗಳು ಅಭ್ಯರ್ಥಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ನೀಡಿದ ಕೊಡುಗೆ ಮತ್ತು ಭರವಸೆಗಳ ಸ್ವರೂಪದಲ್ಲಿದೆ. ಪ್ರತಿವಾದಿ ಸಿದ್ದರಾಮಯ್ಯ ಅವರ ಒಪ್ಪಿಗೆ ಮೇರೆಗೆ ಇದನ್ನು ಮಾಡಲಾಗಿದ್ದು, ವರುಣಾ ಕ್ಷೇತ್ರದ ಮತದಾರರಿಗೆ ಆಮಿಷವೊಡ್ಡಲಾಗಿದೆ ಎಂದು ಆರೋಪಿಸಿ ಕೆಎಂ ಶಂಕರ ಸಲ್ಲಿಸಿರುವ ಅರ್ಜಿಯು ನ್ಯಾಯಮೂರ್ತಿ ಯಾದವ್ ಅವರ ಏಕಸದಸ್ಯ ಪೀಠದ ಮುಂದೆ ವಿಚಾರಣೆ ನಡೆಯಿತು. ಚುನಾವಣೆ ವೇಳೆ ಸಿದ್ದರಾಮಯ್ಯ ಅವರು ಚುನಾವಣಾ ಸಮಯದಲ್ಲಿ ಭ್ರಷ್ಟಾಚಾರ ನಡೆಸಿದ್ದರು ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ಮುಡಾ ಗುಂಪು ಮನೆ ಯೋಜನೆಗಾಗಿ

ಮೈಸೂರು ವಿಜಯನಗರ 3ನೇ ಹಂತದ 8 ಎಕರೆ ಜಾಗ ಆಯ್ಕೆ



ಮುಡಾ ಕಚೇರಿ ಮುಂದೆ ಗುಂಪು ಮನೆಗಳ ಮಾದರಿ ಪ್ರಾತ್ಯಕ್ಷಿಕೆ

ಆರ್ಕಿಟೆಕ್ಚರಲ್ ಡಿಸೈನ್ ಮಾಡಲು ಶೀಘ್ರ ಟೆಂಡರ್



ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಉದ್ದೇಶಿತ ಸ್ಥಳದಲ್ಲಿ ಶುಕ್ರವಾರ ಪರಿಶೀಲನೆ ನಡೆಸಿದರು.

ಎಸ್.ಟಿ.ರವಿಕುಮಾರ್

ಮೈಸೂರು, ಜು.28–ಮೈಸೂರು ಮತ್ತು ಸುತ್ತಮುತ್ತ ಭೂಮಿ ಬೆಲೆ ಗಗನಕ್ಕೇರಿರುವುದರಿಂದ ನೂರಾರು ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ನಿರ್ಮಿಸಿ ವಸತಿ ರಹಿತರಿಗೆ ನಿವೇಶನ ಹಂಚುವುದು ಕಷ್ಟಸಾಧ್ಯವಾಗಿರುವುದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (MUDA)ವು ಲಭ್ಯವಿರುವ ಕಡಿಮೆ ಜಾಗಗಳಲ್ಲಿ ಬಹುಮಹಡಿ ಕಟ್ಟಡಗಳತ್ತ ಆಸಕ್ತಿ ವಹಿಸಿದೆ.

ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸಿ ಕೈಗೆಟಕುವ ದರದಲ್ಲಿ ಬಡವರು, ಮಧ್ಯಮ ವರ್ಗದ ಜನರಿಗೆ ಸಿಂಗಲ್, ಡಬಲ್ ಬೆಡ್ ರೂಂಗಳುಳ್ಳ ಗುಂಪು ಮನೆಗಳನ್ನೇ ಹಂಚುವ ಮೂಲಕ 35–40 ವರ್ಷಗಳಿಂದ ಅರ್ಜಿ ಸಲ್ಲಿಸಿ ಕಾಯುತ್ತಿರುವ ನಿವೇಶನಾಕಾಂಕ್ಷಿಗಳ ಬೇಡಿಕೆ ಈಡೇರಿಸಲು ಪ್ರಾಧಿಕಾರ ಮುಂದಾಗಿದೆ.

ಆ ಉದ್ದೇಶಕ್ಕಾಗಿ ಈಗಾಗಲೇ ಹೂಟಗಳ್ಳಿ ಸಮೀಪ ಬಸವನಹಳ್ಳಿ ಬಳಿ ಹಾಗೂ ದಟ್ಟಗಳ್ಳಿಯಲ್ಲಿ ಗುಂಪು ಮನೆ ಯೋಜನೆಗೆ ಡಿಪಿಆರ್, ಎಸ್ಟಿಮೇಟ್ ಸಮೇತ ಪ್ರಸ್ತಾವನೆ ಸಲ್ಲಿಸಿ ಸರ್ಕಾರದ ಅನುಮೋದನೆಗಾಗಿ ನಿರೀಕ್ಷಿಸುತ್ತಿರುವ ಮುಡಾ, ಇದೀಗ ಮೂರನೇ ಯೋಜನೆಗಾಗಿ ಹಿನಕಲ್ ಹಿಂಭಾಗ ರಿಂಗ್ ರೋಡ್ ಸಮೀಪವೇ ವಿಜಯನಗರ 3ನೇ ಹಂತದ ಪ್ರಮುಖ ಸ್ಥಳ (Prime Location) ದಲ್ಲಿ 8 ಎಕರೆ ಜಾಗವನ್ನು ಗುರ್ತಿಸಿದೆ.

ರಿಂಗ್ ರೋಡ್ ಒಳಗೇ ಇರುವ ಈ ಜಾಗವನ್ನು ಹಲವು ವರ್ಷಗಳ ಹಿಂದೆಯೇ ವಿಜಯನಗರ 3ನೇ ಹಂತದ ವಸತಿ ಬಡಾವಣೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿತ್ತಾದರೂ, ಭೂ ಮಾಲೀಕರು ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದರಿಂದ ಅಲ್ಲಿ ನಿವೇಶನ ರಚಿಸಲು ಸಾಧ್ಯವಾಗಿರಲಿಲ್ಲ. ಕೋರ್ಟ್‌ಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ವಸತಿ ಬಡಾವಣೆಯಂತಹ ಸಾರ್ವಜನಿಕ ಹಿತಾಸಕ್ತಿಗಾಗಿ ಸ್ವಾಧೀನಪಡಿಸಿಕೊಂಡು ಭೂ ಮಾಲೀಕರಿಗೆ ನಿಯಮಾನುಸಾರ ಪರಿಹಾರದ ಹಣವನ್ನು ನೀಡಲಾಗಿದೆ ಎಂಬುದನ್ನು ಮನವರಿಕೆ ಮಾಡಿದ ಹಿನ್ನೆಲೆಯಲ್ಲಿ ನ್ಯಾಯಾಲಯವು ಮುಡಾ ಪರ ತೀರ್ಪು ನೀಡಿತ್ತು ಎಂದು ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ತಿಳಿಸಿದ್ದಾರೆ.

ಈ ಕಾರಣಕ್ಕಾಗಿ ಪ್ರತಿಷ್ಠಿತ ವಿಜಯನಗರ 3ನೇ ಹಂತದ ವಸತಿ ಬಡಾವಣೆಯ ಈ ಪ್ರಮುಖ ಜಾಗ ಖಾಲಿ ಉಳಿದಿತ್ತು. ಇದೀಗ ಅಲ್ಲಿ ಗುಂಪು ಮನೆಗಳನ್ನು ನಿರ್ಮಿಸಿ ವಸತಿ ರಹಿತ ಆಕಾಂಕ್ಷಿಗಳಿಗೆ ಹಂಚಿಕೆ ಮಾಡಲುದ್ದೇಶಿಸಿದ್ದು, ಬಹುಮಹಡಿಗಳ ಕಟ್ಟಡಕ್ಕೆ ಅತ್ಯಂತ ಸೂಕ್ತ ಜಾಗ ಎಂದು ಗುರ್ತಿಸಿದ್ದೇವೆ ಎಂದು ಅವರು ತಿಳಿಸಿದರು.

ಜಿ+10 ಮಹಡಿಯ 2 ಯೂನಿಟ್‌ಗಳು

ರಿಂಗ್ ರಸ್ತೆಗೆ ಕೇವಲ 50 ಮೀಟರ್ ದೂರದಲ್ಲಿರುವ ಈ 8 ಎಕರೆ ಜಾಗದಲ್ಲಿ ಜಿ+10 ಮಹಡಿಯ 2 ಘಟಕಗಳನ್ನು ನಿರ್ಮಿಸಿ ಸುಮಾರು 800 ರಿಂದ 1,000 ಮನೆಗಳನ್ನು ಮಂಜೂರು ಮಾಡಲುದ್ದೇಶಿಸಲಾಗಿದೆ. 60 ಅಡಿ ರಸ್ತೆ, ಪಾರ್ಕು, ಓಪನ್ ಸ್ಪೇಸ್, ಒಳ ಚರಂಡಿ, ಕುಡಿಯುವ ನೀರು ಇನ್ನಿತರೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.

ಶೀಘ್ರ ಆರ್ಕಿಟೆಕ್ಚರಲ್ ಡಿಸೈನ್

ಸದರಿ ಜಾಗದಲ್ಲಿ ಮಲ್ಟಿ ಸ್ಟೋರ್ಡ್ ಬಿಲ್ಡಿಂಗ್ ನಿರ್ಮಿಸಲು ಆರ್ಕಿಟೆಕ್ಚರಲ್ ಡಿಸೈನ್ ತಯಾರಿಸಿ ವರದಿ ಸಲ್ಲಿಸಲು ತಜ್ಞ ಇಂಜಿನಿಯರಿಂಗ್ ಕಂಪನಿಯಿಂದ ಶೀಘ್ರ ಟೆಂಡರ್ ಕರೆಯಲು ನಿರ್ಧರಿಸಿರುವ ಮುಡಾ ಅಧಿಕಾರಿಗಳು, ನಂತರ ಪ್ರಾಧಿಕಾರದ ಸಭೆ ಅನುಮೋದನೆ ಪಡೆದು ಗುಂಪು ಮನೆ ಯೋಜನೆ ಅನುಷ್ಠಾನಕ್ಕೆ ಡಿಪಿಆರ್‌ನೊಂದಿಗೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ಮಾಡಲಾಗುತ್ತಿದೆ.

ಜಂಟಿ ಸಹಯೋಗ

ಗುರ್ತಿಸಿರುವ 8 ಎಕರೆ ಪ್ರದೇಶದಲ್ಲಿ ಎರಡು ಘಟಕಗಳನ್ನು ಜಂಟಿ ಸಹಯೋಗ (Joint Venture)ದೊಂದಿಗೆ ನಿರ್ಮಿಸುವ ಸಂಬಂಧ ಈಗಾಗಲೇ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹಾಗೂ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಮುಡಾ ಅಧಿಕಾರಿಗಳು ಚರ್ಚಿಸಿದ್ದು, ಸಚಿವರು ಯೋಜನೆ ಅನುಷ್ಠಾನಕ್ಕೆ ಆಸಕ್ತಿ ತೋರಿದ್ದಾರೆ.

ಜಾಗದಲ್ಲಿ ಕಟ್ಟಡ ನಿರ್ಮಿಸಿದ ಬಿಲ್ಡರ್‌ಗಳಿಗೆ ಲಭ್ಯವಾದ ಮನೆಗಳ ಪೈಕಿ ಶೇ.50ರಷ್ಟನ್ನು ಬಿಟ್ಟುಕೊಟ್ಟು, ಉಳಿದ ಶೇ.50ರಷ್ಟು ಮನೆಗಳನ್ನು ಮುಡಾ ಕೈಗೆಟಕುವ ದರದಲ್ಲಿ (No Loss- No Profitನಂತೆ) ಆಕಾಂಕ್ಷಿಗಳಿಗೆ ಹಂಚಿಕೆ ಮಾಡಬಹುದಾಗಿದೆ. ಜಾಯಿಂಟ್ ವೆಂಚರ್ ಸ್ಕೀಂನಿಂದ ಮುಡಾಗೆ ಉಚಿತವಾಗಿ ಕಟ್ಟಡ ನಿರ್ಮಿಸಿದಂತಾಗಲಿದ್ದು, ಕಟ್ಟಡ ನಿರ್ಮಿಸಿದ ವೆಚ್ಚವನ್ನು ಬಿಲ್ಡರ್ ತಮಗೆ ನೀಡಿದ ಶೇ.50ರಷ್ಟು ಮನೆಗಳನ್ನು ಮಾರಾಟ ಮಾಡಿ ಪಡೆದುಕೊಳ್ಳಲಿದ್ದಾರೆ.

ಸಮೀಕ್ಷೆಯಲ್ಲಿ ಭಾರೀ ಬೇಡಿಕೆ

ಗುಂಪು ಮನೆಗಳನ್ನು ನಿರ್ಮಿಸಲುದ್ದೇಶಿಸಿದ್ದ ಮುಡಾ ಈ ಹಿಂದೆ 2017ರ ಮೇ 2ರಿಂದ 31ರವರೆಗೆ ಬೇಡಿಕೆ ಸಮೀಕ್ಷೆಗೆಂದು ಅರ್ಜಿ ಕರೆದಿದ್ದಾಗ ಸಾರ್ವಜನಿಕರಿಂದ 45,000 ಅರ್ಜಿ ಸಲ್ಲಿಕೆಯಾಗಿದ್ದವು. ಅಲ್ಲದೇ ಈಗಾಗಲೇ ಮುಡಾ ನಿವೇಶನಕ್ಕಾಗಿ ಮೈಸೂರಲ್ಲಿ 1.35 ಲಕ್ಷ ಮಂದಿ ಅರ್ಜಿ ಸಲ್ಲಿಸಿ ಹಲವು ವರ್ಷಗಳಿಂದ ಕಾಯುತ್ತಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ವಸತಿ ಬಡಾವಣೆ ಮರೀಚಿಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ, ಮಂಡಕಳ್ಳಿ ವಿಮಾನ ನಿಲ್ದಾಣ, ಕೈಗಾರಿಕಾಭಿವೃದ್ಧಿ, ಜೋಡಿ ರೈಲು ಹಳಿ ಮಾರ್ಗ, ಐಟಿ–ಬಿಟಿ ಕಂಪನಿಗಳ ಸ್ಥಾಪನೆ, ಮೈಸೂರು–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ, ಚಿತ್ರನಗರಿ, ಪ್ರವಾಸೋದ್ಯಮ ಸೇರಿದಂತೆ ಇನ್ನಿತರ ಸೌಲಭ್ಯಗಳು ಅಭಿವೃದ್ಧಿಯಾಗುತ್ತಿರುವುದರಿಂದ ಪ್ರತಿಯೊಬ್ಬರೂ ಮೈಸೂರಲ್ಲಿ ಆಸ್ತಿ ಖರೀದಿಸಲು ತೋರುತ್ತಿರುವ ಕಾರಣ ಇಲ್ಲಿ ಭೂಮಿ ಬೆಲೆ ನಿರೀಕ್ಷೆಗೂ ಮೀರಿ ಏರಿಕೆಯಾಗಿದೆ.

ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳು, ಡೆವಲಪರ್‌ಗಳು, ಬಿಲ್ಡರ್‌ಗಳು ಈಗಾಗಲೇ ಮೈಸೂರು ಸುತ್ತಮುತ್ತಲಿನ ಭೂಮಿ ಖರೀದಿಸಿ ವಸತಿ ಬಡಾವಣೆ, ಅಪಾರ್ಟ್‌ಮೆಂಟ್, ವಿಲ್ಲಾಗಳನ್ನು ನಿರ್ಮಿಸುತ್ತಿರುವುದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಜಾಗವೇ ಸಿಗದಂತಾಗಿದೆ.

ಒಂದು ವೇಳೆ ವಸತಿ ಬಡಾವಣೆ ನಿರ್ಮಿಸಲು ಮುಂದಾದರೆ ಮೈಸೂರಿನಿಂದ ಸುಮಾರು 25 ಕಿ.ಮೀ. ದೂರದಲ್ಲಿ ಖರೀದಿಸಬೇಕು. ಪ್ರಸ್ತುತ ಭೂಮಿ ಬೆಲೆಯಲ್ಲಿ ಬಡಾವಣೆ ನಿರ್ಮಿಸಿದರೆ ಕಡಿಮೆ ಬೆಲೆಯಲ್ಲಿ ಅರ್ಜಿದಾರರಿಗೆ ನಿವೇಶನ ಕೊಡಲು ಮುಡಾಗೆ ಸಾಧ್ಯವಾಗುವುದಿಲ್ಲ.

ಅಲ್ಲದೇ ರೈತರು ಮುಡಾಗೆ ಭೂಮಿ ನೀಡಲು ಆಸಕ್ತಿಯನ್ನು ತೋರುತ್ತಿಲ್ಲ. ಬಲವಂತವಾಗಿ ಈಗ ಸ್ವಾಧೀನಪಡಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವೂ ಇಲ್ಲದ ಕಾರಣ ಶೇ.50:50ರ ಅನುಪಾತದಲ್ಲಿ ಮನವೊಲಿಸಿ ರೈತರ ಸಹಯೋಗದೊಂದಿಗೆ ವಸತಿ ಯೋಜನೆ ಅನುಷ್ಠಾನಗೊಳಿಸಬೇಕಾಗುತ್ತದೆ. ಈ ಹಿಂದೆ ಬಲ್ಲಹಳ್ಳಿಗಾಗಿ, ಇತ್ತೀಚೆಗೆ ಬೊಮ್ಮೇನಹಳ್ಳಿ ಯೋಜನೆಗೆ ಮುಡಾ ಪ್ರಯತ್ನಿಸಿತ್ತಾದರೂ, ಪ್ರಯೋಜನವಾಗದಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಮೈಸೂರು ತಾಲೂಕು ಧನಗಳ್ಳಿ ಗ್ರಾಮ ಪಂಚಾಯಿತಿ ಜೆಡಿಎಸ್ ವಶಕ್ಕೆ



ಚಾಮುಂಡೇಶ್ವರಿ ಕ್ಷೇತ್ರದ ಧನಗಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಲೀಲಾವತಿ ನಿಂಗರಾಜು, ಉಪಾಧ್ಯಕ್ಷರಾಗಿ ಸವಿತಾ ಕೃಷ್ಣಮೂರ್ತಿ ಆಯ್ಕೆಯಾದರು. ಇವರು ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ಎಪಿಎಂಸಿ ಮಾಜಿ ಸದಸ್ಯ ಕೋಟೆಹುಂಡಿ ಮಹದೇವು ಅವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಸುರೇಶ್, ಪಾಪಣ್ಣ, ಮಹಾಲಕ್ಷ್ಮಿ, ನಿಂಗಮ್ಮ, ನಿಜಗುಣ, ದೀಪು, ರಘು, ಮಂಗಳಗೌರಿ, ಸೌಮ್ಯ, ಮಂಗಳಮ್ಮ, ಮಂಜುಳ, ಲಕ್ಷ್ಮಮ್ಮ, ಬಸಪ್ಪ, ನಂಜಮ್ಮ, ಧನಗಳ್ಳಿ ಸ್ವಾಮಿ, ಸಿದ್ಧಲಿಂಗಮೂರ್ತಿ, ಡಿ.ಸಾಲುಂಡಿ ಕೃಷ್ಣಮೂರ್ತಿ, ಅಂಗಡಿ ಭಾಸ್ಕರ, ದೊಡ್ಡಹುಂಡಿ ಮಹದೇವು, ಶಿವಲಿಂಗ, ಕುಮಾರ, ಬಸಪ್ಪ, ಭಾಸ್ಕರ, ಕುಳ್ಳೇಗೌಡ, ಸಿದ್ದರಾಮಣ್ಣ, ಶ್ರೀಕಂಠ, ರವಿ, ಬಸವನಾಯಕ ಉಪಸ್ಥಿತರಿದ್ದರು.

ರಾಜ್ಯಪಾಲ ಗೆಹ್ಲೋಟ್‌ರನ್ನು ಬಿಟ್ಟು ಹಾರಿದ ವಿಮಾನ




ಬೆಂಗಳೂರು, ಜು.28– ತಡವಾಗಿ ಆಗಮಿಸಿದರು ಎಂಬ ಕಾರಣ ನೀಡಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಬಿಟ್ಟು ಹಾರಿದ್ದ ಏರ್ ಏಷ್ಯಾ ವಿಮಾನಯಾನ ಸಂಸ್ಥೆ ಶುಕ್ರವಾರ ಈ ಸಂಬಂಧ ತೀವ್ರ ವಿಷಾದ ವ್ಯಕ್ತಪಡಿಸಿದೆ.

ರಾಜ್ಯಪಾಲರನ್ನು ಬಿಟ್ಟು ಹಾರಿದ್ದ ವಿಮಾನಯಾನ ಸಂಸ್ಥೆ ವಿರುದ್ಧ ರಾಜ್ಯಪಾಲರ ಕಚೇರಿ "ಶಿಷ್ಟಾಚಾರ ಉಲ್ಲಂಘನೆ" ಪ್ರಕರಣ ದಾಖಲಿಸಿದ ಬೆನ್ನಲ್ಲೇ ವಿಮಾನಯಾನ ಸಂಸ್ಥೆ ವಿಷಾದ ವ್ಯಕ್ತಪಡಿಸಿದೆ.

ರಾಜ್ಯಪಾಲರ ಪ್ರೋಟೋಕಾಲ್ ಅಧಿಕಾರಿ ಎಂ.ವೇಣುಗೋಪಾಲ್ ಅವರು ಏರ್‌ಪೋರ್ಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಎಐಎಕ್ಸ್ ಕನೆಕ್ಟ್ ಹಾಗೂ ಇದಕ್ಕೆ ಕಾರಣರಾದ ಏರ್‌ಲೈನ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಇನ್ನು ಈ ಘಟನೆಗೆ ತೀವ್ರ ವಿಷಾದ ವ್ಯಕ್ತಪಡಿಸಿದ ವಿಮಾನಯಾನ ಸಂಸ್ಥೆ, ರಾಜ್ಯಪಾಲರ ಕಚೇರಿಯೊಂದಿಗೆ ಸಂಪರ್ಕದಲ್ಲಿರುವುದಾಗಿ ಹೇಳಿದೆ. ಘಟನೆಗೆ ನಾವು ಪ್ರಾಮಾಣಿಕವಾಗಿ ವಿಷಾದಿಸುತ್ತೇವೆ. ತನಿಖೆ ನಡೆಸಲಾಗುತ್ತಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಏರ್‌ಲೈನ್‌ನ ಹಿರಿಯ ಅಧಿಕಾರಿಗಳ ತಂಡ, ಗವರ್ನರ್ ಕಚೇರಿಯೊಂದಿಗೆ ಸಂಪರ್ಕದಲ್ಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜು ವಿದ್ಯಾರ್ಥಿಗಳ ಸಾಧನೆ

ಟ್ರೋಫಿ, ನಗದು ಬಹುಮಾನದೊಂದಿಗೆ ವಿದ್ಯಾರ್ಥಿಗಳಿಗೆ ಗೌರವ



ಮೈಸೂರು, ಜು.28– ಬೆಂಗಳೂರಿನ ಸೌಂದರ್ಯ ಕಾನೂನು ಕಾಲೇಜು ಆಯೋಜಿಸಿದ್ದ ಮೊದಲನೇ ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜು ವಿದ್ಯಾರ್ಥಿಗಳು ವಿಜೇತರಾಗಿದ್ದು, 30 ಸಾವಿರ ರೂ. ನಗದು ಬಹುಮಾನ ವನ್ನು ತಮ್ಮದಾಗಿಸಿಕೊಂಡಿದ್ದಾರೆ.

ದೇಶದ 100ಕ್ಕೂ ಹೆಚ್ಚು ಪ್ರತಿಷ್ಠಿತ ಕಾಲೇಜುಗಳ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜು ವಿದ್ಯಾರ್ಥಿಗಳು ಮೇಲುಗೈ ಸಾಧಿಸಿ, ಸಾಂಸ್ಕೃತಿಕ ನಗರಿ ಮೈಸೂರು ಹಾಗೂ ತಮ್ಮ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಸ್ಪರ್ಧೆಯಲ್ಲಿ ವಿಜೇತರಾದ ಈ ಕಾಲೇಜಿನ 3ನೇ ವರ್ಷದ ವಿದ್ಯಾರ್ಥಿನಿ ಯು.ಜೆ. ಶೀತಲ್, 2ನೇ ವರ್ಷದ ವಿದ್ಯಾರ್ಥಿಗಳಾದ ಅನನ್ಯ ಹಾಗೂ ರೋಹನ್ ವಿ. ಗಂಗಡ್ಕರ್ ಅವರಿಗೆ ಸೌಂದರ್ಯ ಕಾಲೇಜು ಸಭಾಂಗಣದಲ್ಲಿ ನಡೆದ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿಗಳೂ ಆದ ಕರ್ನಾಟಕ ಕಾನೂನು ಪ್ರಾಧಿಕಾರದ ಮುಖ್ಯಸ್ಥರಾದ ಎಸ್.ಆರ್. ಬನ್ನೂರು ಮಠ್, ನಿವೃತ್ತ ನ್ಯಾಯಾಧೀಶರಾದ ಧರ್ಮಗೌಡ ಮತ್ತು ಪ್ರೊ. ಸಿ.ಎಸ್. ಪಾಟೀಲ್, 30 ಸಾವಿರ ರೂ. ನಗದು ಬಹುಮಾನ ಹಾಗೂ ಟ್ರೋಫಿ ನೀಡಿ, ಸನ್ಮಾನಿಸಿದರು. ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾಗುವ ಮೂಲಕ ಈ ವಿದ್ಯಾರ್ಥಿಗಳು ಜೆಎಸ್‌ಎಸ್ ಕಾನೂನು ಕಾಲೇಜು ಹಾಗೂ ಮೈಸೂರಿನ ಗೌರವವನ್ನು ಇಮ್ಮಡಿಗೊಳಿಸಿದ್ದಾರೆ.

ಪೋಷಕರೇ ಎಚ್ಚರ!

ಅಪಘಾತ ಮಾಡಿದ ಶಾಲಾ ವಿದ್ಯಾರ್ಥಿ ವಿರುದ್ಧ ಎಫ್‌ಐಆರ್; ತಂದೆ ಮೇಲೂ ಕೇಸ್ ದಾಖಲು

ಮೈಸೂರು, ಜು.28(ಆರ್‌ಕೆ)–ಅಪಘಾತ ಮಾಡಿ ಇಂಜಿನಿಯರಿಂಗ್ ವಿದ್ಯಾರ್ಥಿ ಗಾಯಗೊಳ್ಳಲು ಕಾರಣರಾದ 15 ವರ್ಷದ ಶಾಲಾ ವಿದ್ಯಾರ್ಥಿ ವಿರುದ್ಧ ಮೈಸೂರಿನ ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಅಪ್ರಾಪ್ತ ಬಾಲಕನಿಗೆ ಚಾಲನೆ ಮಾಡಲು ವಾಹನ ನೀಡಿದ ಆತನ ತಂದೆಯ ಮೇಲೂ ಕೇಸ್ ಹಾಕಲಾಗಿದೆ


ಮೈಸೂರಿನ ಎಸ್‌ಜೆಸಿಇ ಆವರಣದಲ್ಲಿ ಬಾಲಕ ಕಾರು ಚಾಲನೆ ಮಾಡಿ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ 19 ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿ ಆರ್ಯ ಎಂಬುವರ ತಲೆಗೆ ಗಂಭೀರ ಪೆಟ್ಟಾಗಿ, ಮೂಳೆ ಮುರಿದಿತ್ತು. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪರಿಸ್ಥಿತಿ ಗಂಭೀರವಾಗಿದೆ

ಗಾಯಗೊಂಡಿರುವ ಆರ್ಯ ತಂದೆ ನೀಡಿದ ದೂರಿನನ್ವಯ ಗುರುವಾರ ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್ ಕಾರು ಚಾಲನೆ ಮಾಡಿದ ಶಾಲಾ ವಿದ್ಯಾರ್ಥಿ ವಿರುದ್ಧ ಎಫ್‌ಐಆರ್ ದಾಖಲಿಸಿರುವುದಲ್ಲದೆ, ಅಪ್ರಾಪ್ತನಿಗೆ ಕಾರು ಚಾಲನೆ ಮಾಡಲು ಕೊಟ್ಟ ಆತನ ತಂದೆ ವಿರುದ್ಧವೂ ಪ್ರಕರಣ ದಾಖಲಿಸಿದ್ದಾರೆ.

ಅಪ್ರಾಪ್ತರಿಗೆ ವಾಹನ ಕೊಡಬಾರದು. ಚಾಲನೆ ಮಾಡದಂತೆ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಅಮಾಯಕರ ಪ್ರಾಣಕ್ಕೆ ಕುತ್ತಾಗುವುದಲ್ಲದೆ, ಶಾಶ್ವತ ಅಂಗವಿಕಲರಾಗುವುದಕ್ಕೂ ಪೋಷಕರೆ ಕಾರಣರಾಗುತ್ತಾರೆ ಎಂದು ಪ್ರಸನ್ನಕುಮಾರ್ ಎಚ್ಚರಿಕೆ ನೀಡಿದ್ದಾರೆ.

84 ತಹಸೀಲ್ದಾರ್‌ಗಳ ವರ್ಗಾವಣೆ

ಮೈಸೂರು, ಜು. 28– ರಾಜ್ಯ ಸರ್ಕಾರ 84 ತಹಸೀಲ್ದಾರ್‌ಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕು ತಹಸೀಲ್ದಾರ್ ಮಲ್ಲಿಕಾರ್ಜುನ ಅವರನ್ನು ಮೈಸೂರು ತಾಲೂಕು ತಹಸೀಲ್ದಾರ್‌ರಾಗಿ, ತರೀಕೆರೆ ತಹಸೀಲ್ದಾರ್ ಸಿ.ಎಸ್. ಪೂರ್ಣಿಮಾ ಅವರನ್ನು ಕೆ.ಆರ್.ನಗರಕ್ಕೆ, ಸರಗೂರು ತಹಸೀಲ್ದಾರ್ ಶಂಶಾಲಂ ಅವರನ್ನು ಲಿಂಗಸಗೂರಿಗೆ, ತಿ.ನರಸೀಪುರ ತಹಸೀಲ್ದಾರ್ ಸಿ.ಜಿ. ಗೀತಾ ಅವರನ್ನು ಚನ್ನರಾಯ ಪಟ್ಟಣಕ್ಕೆ, ದಕ್ಷಿಣ ಕನ್ನಡದ ಕಡಬ ತಹಸೀಲ್ದಾರ್ ಟಿ. ರಮೇಶ್‌ಬಾಬು ಅವರನ್ನು ಗುಂಡ್ಲುಪೇಟೆಗೆ, ಚಾಮರಾಜನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪುರಸಭಾ ತಹಸೀಲ್ದಾರ್ ಆಗಿದ್ದ ಬಿ. ಗಿರಿಜಾ ಅವರನ್ನು ಚಾಮರಾಜನಗರ ತಾಲೂಕು ತಹಸೀಲ್ದಾರ್‌ರಾಗಿ ವರ್ಗಾವಣೆ ಮಾಡಲಾಗಿದೆ.



ಮೊಸಂಬಾಯನಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಆಯ್ಕೆಯಾದ ಮಾರಶೆಟ್ಟಿಹಳ್ಳಿ ಗ್ರಾಮದ ಸದಸ್ಯ ಸದಾನಂದ ಅವರನ್ನು ಗ್ರಾಪಂ ಮಾಜಿ ಅಧ್ಯಕ್ಷ ಶಂಭಣ್ಣ, ಸದಸ್ಯರಾದ ನಾಗರಾಜು, ನಂಜುಂಡಸ್ವಾಮಿ, ಮಂಜುನಾಥ್, ಯುವ ಮುಖಂಡ ನಾಡನಹಳ್ಳಿ ನಾಗರಾಜು ಅಭಿನಂದಿಸಿದರು. ಈ ವೇಳೆ ಮುಖಂಡರಾದ ಹಂಚ್ಯಾ ಪ್ರಸನ್ನ, ಹಾರೋಹಳ್ಳಿ ರವೀಂದ್ರ, ಮಹೇಶ್, ಮನುಕುಮಾರ್, ದೊಡ್ಡಸ್ವಾಮಿ, ವಿಜಯಕುಮಾರ್, ಚೇತನ್, ಬುಗತಗಳ್ಳಿ ಮಾದೇವು ಉಪಸ್ಥಿತರಿದ್ದರು.

ನಾಲೆಯಲ್ಲಿ ಕೊಚ್ಚಿ ಹೋಗಿದ್ದ ಚಾಲಕನ ಮೃತದೇಹ ಪತ್ತೆ



ಮಂಡ್ಯ, ಜು.28– ತಾಲೂಕಿನ ತಿಬ್ಬನಹಳ್ಳಿ ಬಳಿ ವಿಶ್ವೇಶ್ವರಯ್ಯ ನಾಲೆಗೆ ಕಾರು ಉರುಳಿ ನೀರಿನಲ್ಲಿ ಕೊಚ್ಚಿ ಹೋಗಿದ್ದ ಚಾಲಕನ ಮೃತದೇಹ ಶುಕ್ರವಾರ ಬೆಳಗ್ಗೆ ಪತ್ತೆಯಾಗಿದೆ.

ತಾಲೂಕಿನ ಶಿವಳ್ಳಿ ಗ್ರಾಮದ ಮರಿಗೌಡ ಎಂಬುವರ ಪುತ್ರ ಲೋಕೇಶ್(45) ನೀರಿನಲ್ಲಿ ಕೊಚ್ಚಿ ಹೋಗಿದ್ದವರು. ಇವರ ಮೃತದೇಹ ದುರಂತ ನಡೆದ ಒಂದು ಕಿಲೋಮೀಟರ್ ದೂರದಲ್ಲಿರುವ ಸೇತುವೆ ಬಳಿ ದೊರೆತಿದೆ. ಮಂಡ್ಯದಲ್ಲಿ ಪತ್ನಿ, ಮಗಳೊಂದಿಗೆ ವಾಸವಿದ್ದ ಲೋಕೇಶ್ ಗುರುವಾರ ಕಾರ್ಯನಿಮಿತ್ತ ಪಾಂಡವಪುರಕ್ಕೆ ಸ್ನೇಹಿತನ ಕಾರಿನಲ್ಲಿ ತೆರಳುತ್ತಿದ್ದ ವೇಳೆ ತಿಬ್ಬನಹಳ್ಳಿ ಬಳಿ ನಿಯಂತ್ರಣ ತಪ್ಪಿದ ಕಾರು ತುಂಬಿ ಹರಿಯುತ್ತಿದ್ದ ವಿಶ್ವೇಶ್ವರಯ್ಯ ನಾಲೆಗೆ ಉರುಳಿ ಬಿದ್ದಿತ್ತು. ಈ ವೇಳೆ ಲೋಕೇಶ್ ರಕ್ಷಣೆಗಾಗಿ ಕೂಗಿಕೊಂಡರೂ ಯಾರು ಸಹಾಯಕ್ಕೆ ಬಂದಿರಲಿಲ್ಲ. ಪರಿಣಾಮ ಲೋಕೇಶ್ ನೀರಿನಲ್ಲಿ ಕೊಚ್ಚಿ ಹೋಗಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ನುರಿತ ಈಜುಗಾರರು ಹುಡುಕಾಟ ನಡೆಸಿದರೂ ಲೋಕೇಶ್ ಪತ್ತೆಯಾಗಿರಲಿಲ್ಲ. ಹೀಗಾಗಿ ಗುರುವಾರ ರಾತ್ರಿ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು. ಶುಕ್ರವಾರ ಬೆಳಗ್ಗೆ ಶೋಧ ಕಾರ್ಯ ಮುಂದುವರಿಸಿದಾಗ ದುರಂತ ನಡೆದ ಒಂದು ಕಿಲೋಮೀಟರ್ ದೂರದಲ್ಲಿ ಲೋಕೇಶ್ ಮೃತದೇಹ ಪತ್ತೆಯಾಗಿದೆ. ಮಿಮ್ಸ್‌ನಲ್ಲಿ ಶವದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಮನೆ ಬೀಗ ಮುರಿದು ಕಳ್ಳತನ

ಮದ್ದೂರು, ಜು.28– ಹಾಡಹಗಲೇ ಮನೆ ಬೀಗ ಮುರಿದು ಚಿನ್ನಾಭರಣ ದೋಚಿರುವ ಘಟನೆ ಶುಕ್ರವಾರ ತಾಲೂಕಿನ ಸಾದೊಳಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಚಿನ್ನಪ್ಪ ಎಂಬುವರ ಮನೆಯಲ್ಲೇ ಕಳ್ಳತನ ನಡೆದಿರುವುದು. ಚಿನ್ನಪ್ಪನವರು ಮದ್ದೂರಿನ ನ್ಯಾಯಾಲಯಕ್ಕೆ ಹೋಗಿದ್ದರು. ಅಲ್ಲದೇ ಮನೆಯಲ್ಲಿ ಯಾರೂ ಇಲ್ಲದಿರುವ ವೇಳೆ ಇಂದು ಮಧ್ಯಾಹ್ನ 1.30ರಲ್ಲಿ ಮನೆ ಬೀಗ ಮುರಿದು ಒಳನುಗ್ಗಿರುವ ದುಷ್ಕರ್ಮಿಗಳು ಬೀರುವಿನಲ್ಲಿದ್ದ 10 ಗ್ರಾಂ ಚಿನ್ನ ದೋಚಿ ಪರಾರಿಯಾಗಿದ್ದಾರೆ. ಮನೆಯವರು ಬಂದು ನೋಡಿದಾಗ ಪ್ರಕರಣ ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಇನ್‌ಸ್ಪೆಕ್ಟರ್ ಸಂತೋಷ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಈ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗಮ್ಮ ನಿಧನ



ಕೆ.ಆರ್.ಪೇಟೆ, ಜು.28– ತಾಲೂಕಿನ ಮತ್ತಿಘಟ್ಟ ಗ್ರಾಮದ ವೀರಶೈವ ಲಿಂಗಾಯಿತ ಹಿರಿಯ ಮುಖಂಡರಾದ ನಾಗಮ್ಮ(75) ಶುಕ್ರವಾರ ನಿಧನರಾದರು. ಮೃತರು ಉಪನ್ಯಾಸಕ ಎಸ್.ಚಂದ್ರಶೇಖರ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜು.29ರಂದು ಮಧ್ಯಾಹ್ನ 12ಗಂಟೆಗೆ ಸ್ವಗ್ರಾಮ ಮತ್ತಿಘಟ್ಟದಲ್ಲಿ ನಡೆಯಲಿದೆ.

ಅರ್ಜಿ ಆಹ್ವಾನ

ಮಂಡ್ಯ, ಜು.28– ಬೆಂಗಳೂರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶನಾಲಯದಲ್ಲಿ 'ಕಲ್ಯಾಣ ಸಂಘಟಿಕರು' 'ಸಿ' ವೃಂದದ ಒಟ್ಟು 14 ಹುದ್ದೆಗಳಿಗೆ ಅರ್ಹ ಮಾಜಿ ಸೈನಿಕರಿಂದ (ಜೆಸಿಒ ಹಾಗೂ ತತ್ಸಮಾನ ರ್ಯಾಂಕ್) ಅರ್ಜಿ ಆಹ್ವಾನಿಸಿದೆ.

ಸರ್ಕಾರಿ ಮುದ್ರಣಾಲಯಗಳಲ್ಲಿ ಲಭ್ಯವಿರುವ ಸರ್ಕಾರದಿಂದ ನಿಗದಿಪಡಿಸಿದ ಅರ್ಜಿ ನಮೂನೆ 1ನ್ನು ಭರ್ತಿ ಮಾಡಿ, ದ್ವಿಪ್ರತಿಯಲ್ಲಿ ಆ.5 ರೊಳಗಾಗಿ ಅಧ್ಯಕ್ಷರು, ಇಲಾಖಾ ನೇಮಕಾತಿ ಸಮಿತಿ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ನಂ.58, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಭವನ, ಬೆಂಗಳೂರು –560025, ಇವರಿಗೆ ಸಲ್ಲಿಸುವಂತೆ ಮೈಸೂರಿನ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರಿಗೆ ಹವಾಮಾನಕ್ಕೆ ತಕ್ಕಂತೆ ಬೆಳೆ ಬೆಳೆಯಲು ಅರಿವು ಮೂಡಿಸಿ

ಕುಂದುಕೊರತೆ ಸಭೆಯಲ್ಲಿ ಶಾಸಕ ದರ್ಶನ್ ಸೂಚನೆ



ಮಂಡ್ಯ, ಜು.28– ಅತಿವೃಷ್ಟಿ ಹಾಗೂ ಅನಾವೃಷ್ಟಿಗೆ ತುತ್ತಾಗಿ ರೈತರ ಬೆಳೆ ಹಾಳಾಗುತ್ತಿದೆ. ಹೀಗಾಗಿ ಹವಾಮಾನ ಬದಲಾವಣೆಗೆ ತಕ್ಕಂತೆ ರೈತರು ಬೆಳೆ ಬೆಳೆಯಬೇಕು. ಇದಕ್ಕೆ ಸಂಬಂಧಪಟ್ಟ ಕೃಷಿ ಇಲಾಖೆ ಅಧಿಕಾರಿಗಳು ರೈತರಿಗೆ ಕಾಲಕಾಲಕ್ಕೆ ಮಾಹಿತಿ ಒದಗಿಸಬೇಕು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ಶುಕ್ರವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರೈತರ ಕುಂದುಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಬ್ಬಿಗೆ ಬೆಂಬಲ ಬೆಲೆ ನೀಡುವಂತೆ ಶಾಸನ ಸಭೆಯಲ್ಲಿ ಚರ್ಚಿಸಲಾಗುವುದು. ಬಹು ವಾರ್ಷಿಕ ಬೆಳೆಗಳಾದ ತೆಂಗು, ಅಡಿಕೆ ಹಾಗೂ ರಸಗೊಬ್ಬರಗಳ ವಿತರಣೆಯಲ್ಲಿ ಲೋಪ ಉಂಟಾಗದಂತೆ ಎಚ್ಚರ ವಹಿಸಲಾಗುವುದು ಎಂದರು.

ಇಂದಿನ ರೈತರ ಕುಂದು ಕೊರತೆ ಸಭೆಯಲ್ಲಿ ಚರ್ಚಿಸಲಾಗಿರುವ ಎಲ್ಲಾ ವಿಷಯವನ್ನು ಮುಂದಿನ ಶಾಸಕಾಂಗ ಸಭೆಯಲ್ಲಿ ಚರ್ಚಿಸಲಾಗುವುದು ಎಂದರು. ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ರೈತರ ಖಾತೆಗೆ ವಿವಿಧ ಯೋಜನೆಯಡಿ ಜಮೆಯಾಗುವ ಸಹಾಯಧನ ಹಾಗೂ ಸಾಮಾಜಿಕ ಪಿಂಚಣಿ ಹಣದಲ್ಲಿ ರೈತರ ಸಾಲದ ಹಣವನ್ನು ಬ್ಯಾಂಕ್‌ನವರು ಕಟಾವು ಮಾಡಬಾರದು ಎಂದು ಹೇಳಿದರು.

ಸಭೆಯಲ್ಲಿದ್ದ ಹಲವು ರೈತ ಮುಖಂಡರು ಮಾತನಾಡಿ, ರೈತರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಸಾಲಕ್ಕೆ ಸಂಬಂಧಿಸಿದಂತೆ ಸಿವಿಲ್ ಸ್ಕೋರ್‌ಗಳನ್ನು ಲೆಕ್ಕ ಮಾಡುವಾಗ ಬೆಳೆ ಸಾಲವನ್ನು ಲೆಕ್ಕಾಚಾರ ಮಾಡುತ್ತಾರೆ. ಇದರಿಂದ ಸಾಲ ದೊರೆಯುವುದು ಕಷ್ಟವಾಗುತ್ತಿದೆ ಎಂದಾಗ ಈ ಕುರಿತು ಡಿಎಲ್‌ಬಿಸಿ ಸಭೆಯಲ್ಲಿ ಚರ್ಚಿಸಿ ಪ್ರಸ್ತಾವನೆಯನ್ನು ರಾಜ್ಯಮಟ್ಟಕ್ಕೆ ಕಳುಹಿಸಿ ಕೊಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ರೈತರ ಮಾರುಕಟ್ಟೆಯನ್ನು ದಲ್ಲಾಳಿ ಮುಕ್ತ ಮಾರುಕಟ್ಟೆ ಮಾಡಿ ರೈತರಿಂದ ಸರ್ಕಾರವೇ ಖರೀದಿ ಮಾಡುವಂತೆ ರೈತ ಮುಖಂಡರು ಚರ್ಚಿಸಿದಾಗ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಮೈಷುಗರ್‌ನಲ್ಲಿ ತಾಂತ್ರಿಕಾ ಸಿಬ್ಬಂದಿಗಳ ಕೊರತೆ ಇಲ್ಲ. ಮೆಕಾನಿಕಲ್ ಇಂಜಿನಿಯರ್, ಚೀಫ್ ಕೆಮಿಸ್ಟ್ರಿ ಪರ್ಸನ್ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರೊಂದಿಗೆ ಆರ್‌ಬಿಟೆಕ್ ಸಂಸ್ಥೆಯವರು ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸಿದ್ದಾರೆ. ಜು.26 ರಂದು ಸಕ್ಕರೆ ಕಾರ್ಖಾನೆಗೆ ಟರ್ಬೈನ್ ಸರಬರಾಜು ಆಗಬೇಕಿದ್ದು, ಅವರಿಗೆ ಅಂತಿಮ ಗಡುವು ನೀಡಲಾಗಿದ್ದು, ಜು.31ರಂದು ಸರಬರಾಜು ಆಗಲಿದೆ. ಸಕ್ಕರೆ ಕಾರ್ಖಾನೆಗಳು ರೈತರಿಂದ ಖರೀದಿಸುವ ಕಬ್ಬಿಗೆ ನಿಗದಿತ ಅವಧಿಯಲ್ಲಿ ಹಣ ನೀಡಿ. ಕಬ್ಬಿಗೆ ಹೊಸ ದರ ನಿಗದಿಯಾದಲ್ಲಿ ವ್ಯತ್ಯಾಸವನ್ನು ನಂತರ ಪಾವತಿಸಬಹುದು ಎಂದರು.

ರೈತರು ಕಷ್ಟಪಟ್ಟು ಬೆಳೆದ ಬೆಳೆ ಕಾಡು ಪ್ರಾಣಿಗಳ ಪಾಲಾಗುತ್ತಿರುವ ಬಗ್ಗೆ ದೂರು ಕೇಳಿ ಬಂದಿದೆ. ಇದಕ್ಕೆ ಸೂಕ್ತ ಪರಿಹಾರ ನೀಡುವಂತೆ ಹಾಗೂ ಕಾಡುಪ್ರಾಣಿಗಳ ಹಾವಳಿ ತಡೆಗೆ ಕ್ರಮ ವಹಿಸುವಂತೆ ಅರಣ್ಯಾಧಿಕಾರಿಗಳಿಗೆ ತಿಳಿಸಲಾಗುವುದು ಎಂದರು.

ತಾಲೂಕು ಕಚೇರಿಗಳಲ್ಲಿ ಕೆಲಸ ವಿಳಂಬವಾಗುತ್ತಿದೆ ಎಂದು ಸಾರ್ವಜನಿಕರಿಂದ ಸಾಕಷ್ಟು ದೂರು ಕೇಳಿ ಬಂದಿದ್ದು, ವಿಶೇಷವಾಗಿ ಹೋಬಳಿ ಮಟ್ಟದಲ್ಲಿ ಬೃಹತ್ ಪೌತಿಖಾತೆ ಆಂದೋಲನ ಆಯೋಜಿಸಲಾಗುವುದು. ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ಅಧಿಕಾರಿ, ಪಿಡಿಓಗಳು ಕಡ್ಡಾಯವಾಗಿ ಗ್ರಾಮದಲ್ಲಿದ್ದು, ಸಾರ್ವಜನಿಕರನ್ನು ಅಲೆದಾಡಿಸದೇ ಅವರ ಸಮಸ್ಯೆ ಪರಿಹರಿಸಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಉಪವಿಭಾಗಾಧಿಕಾರಿ ಶಿವಮೂರ್ತಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಅಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕ ಎಂ.ಪಿ.ಕೃಷ್ಣಕುಮಾರ್ ಹಾಗೂ ವಿವಿಧ ಸಂಘಟನೆಯ ರೈತ ಮುಖಂಡರು ಹಾಜರಿದ್ದರು.

ಮಂಡ್ಯದಲ್ಲಿ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ಮಂಡ್ಯ, ಜು.28– ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆಯಲ್ಲಿ ಹೊರಟು ತಾಲೂಕು ಪಂಚಾಯಿತಿಗೆ ತೆರಳಿ ಇಓಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಅವರು, ಇಂಡವಾಳು, ಬೇವಿನಹಳ್ಳಿ, ಶಿವಳ್ಳಿ, ಹಳೇ ಬೂದನೂರು, ಮಂಗಲ, ಹೊಳಲು, ಚೀರನಹಳ್ಳಿ, ಬಸರಾಳು, ಸೂನಗಹಳ್ಳಿ ಗ್ರಾಪಂಗಳಲ್ಲಿ ಕೆಲಸ ಮಾಡಿರುವ ಕೂಲಿಕಾರರಿಗೆ 100 ದಿನ ಕೆಲಸ ನೀಡಬೇಕು. ಈಗಾಗಲೇ ಕಳೆದ 3 ವರ್ಷಗಳಿಂದ ಕೆಲಸ ಮಾಡಿರುವ ಕಾರ್ಮಿಕರಿಗೆ ಪ್ರೋತ್ಸಾಹ ಧನವನ್ನು ಅವರ ಖಾತೆಗೆ ಜಮೆ ಮಾಡಬೇಕು. ಕೂಲಿ ಕಾರ್ಮಿಕರ ಸುರಕ್ಷತೆ ದೃಷ್ಟಿಯಿಂದ ಕೈ ಗವಸು, ಶೂಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ವಿವಿಧ ಗ್ರಾಮಗಳಿಗೆ ಸ್ಮಶಾನ ಮಂಜೂರು ಮಾಡಿಕೊಡಬೇಕು. ಒತ್ತುವರಿಯಾಗಿರುವ ಸ್ಮಶಾನ ತೆರವುಗೊಳಿಸಿ ಅಭಿವೃದ್ಧಿ ಪಡಿಸಬೇಕು. ಮೊಳೆಕೊಪ್ಪಲು, ಹುಲ್ಕೆರೆ ಸೇರಿ ಇತರೆಡೆ ವಾಸಿಸುತ್ತಿರುವ ಬುಡಕಟ್ಟು ಮತ್ತು ಸಿಳ್ಳೆಕ್ಯಾತ ಜನಾಂಗಕ್ಕೆ ನಿವೇಶನ ಒದಗಿಸಿ ವಸತಿ ಸಹಾಯಧನ ನೀಡಬೇಕು. ಉಪಕಸುಬು ಮಾಡಲು ಸಾಲ ನೀಡಬೇಕು. ಗ್ರಾಮೀಣ ಪ್ರದೇಶದಲ್ಲಿ ಹದಗೆಟ್ಟಿರುವ ರಸ್ತೆಗಳನ್ನು ದುರಸ್ಥಿಗೊಳಿಸಿ ಚರಂಡಿ ಮತ್ತು ಸಿ.ಸಿ.ರಸ್ತೆಗಳನ್ನು ನಿರ್ಮಾಣ ಮಾಡಬೇಕು. ಉಪಕಸುಬು ಮಾಡಲು ಸಾಲ ಕೇಳಿ ಅರ್ಜಿ ಸಲ್ಲಿಸಿರುವ ಬಡವರಿಗೆ ಆರ್‌ಬಿಐ ನಿರ್ದೇಶನದಂತೆ 2 ಲಕ್ಷ ರೂ.ವರೆಗೆ ಬಡ್ಡಿರಹಿತ ಸಾಲ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪ್ರಾಂತ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ಎಂ.ಪುಟ್ಟಮಾದು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಹನುಮೇಶ್, ಉಪಾಧ್ಯಕ್ಷ ಬಿ.ಎಂ.ಶಿವಮಲ್ಲಯ್ಯ, ಸಂಘಟನೆಯ ಅಮಾಸಯ್ಯ, ಆರ್.ರಾಜು, ಸಂತೋಷ್, ಅಬ್ದುಲ್ಲಾ, ಎಚ್.ಎಸ್.ಮಂಜುಳಾ, ಟಿ.ಪಿ.ಅರುಣ್‌ಕುಮಾರ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಪ್ಲಾಸ್ಟಿಕ್ ಮುಕ್ತ ಮಾಡಲು ಪ್ರತಿಯೊಬ್ಬರು ಸಹಕರಿಸಿ: ಮನವಿ



ಶ್ರೀರಂಗಪಟ್ಟಣ, ಜು.28– ಪಟ್ಟಣವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ಪ್ರತಿಯೊಬ್ಬರು ಸಹಕರಿಸಬೇಕು ಎಂದು ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಮನವಿ ಮಾಡಿದರು.

ಪಟ್ಟಣದ ಪುರಸಭೆ ವತಿಯಿಂದ ಆಯೋಜಿಸಿದ್ದ ಪರಿಸರ ಸಂರಕ್ಷಣೆ ಹಾಗೂ ಪ್ಲಾಸ್ಟಿಕ್ ಮುಕ್ತ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದ ಜನತೆ, ಉದ್ದಿಮೆದಾರರು, ವಾಣಿಜ್ಯ ವ್ಯಾಪಾರಿಗಳು, ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ ಎಲ್ಲರೂ ಪ್ಲಾಸ್ಟಿಕ್ ತ್ಯಜಿಸಿ, ಬಟ್ಟೆ ಬ್ಯಾಗ್ ಬಳಸಬೇಕು. ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಭಿತ್ತಿಪತ್ರಗಳು, ಫ್ಲೆಕ್ಸ್, ಭಾವುಟ ಪ್ಲಾಸ್ಟಿಕ್ ತಟ್ಟೆ ಸೇರಿದಂತೆ ಇನ್ನಿತರ ಪ್ಲಾಸ್ಟಿಕ್ ವಸ್ತುಗಳ ಮಾರಾಟ ನಿಲ್ಲಿಸಬೇಕು. ಪ್ಲಾಸ್ಟಿಕ್ ಬಳಕೆ ಹಾಗೂ ಮಾರಾಟದ ಮೇಲೆ ಈಗಾಗಲೇ ಸರ್ಕಾರ ಕಾನೂನು ಕ್ರಮಕ್ಕೆ ಮುಂದಾಗಿದ್ದು, ಅಂಗಡಿ ಮುಂಗಟ್ಟುಗಳ ಮೇಲೆ ಪುರಸಭಾಧಿಕಾರಿಗಳು ನಿಗಾ ವಹಿಸಿದ್ದಾರೆ. ಹೀಗಾಗಿ ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ಒತ್ತು ನೀಡಬೇಕು ಎಂದರು.

ಇದೇ ವೇಳೆ ಪರಿಸರ ಸಂರಕ್ಷಣೆ ಅಭಿಯಾನ ಅಂಗವಾಗಿ ಪುರಸಭೆಗೆ ಹೊಸದಾಗಿ ಖರೀದಿಸಿದ್ದ 2 ಕಸ ಸಂಗ್ರಹಣೆ ವಾಹನಗಳಿಗೆ ಶಾಸಕ ರಮೇಶ್ ಬಂಡಿಸಿದ್ದೇಗೌಡ ಚಾಲನೆ ನೀಡಿದರು. ಬಳಿಕ ಪರಿಸರ ಸಂರಕ್ಷಣೆ ಕುರಿತು ರಸ್ತೆ ಬದಿ ವ್ಯಾಪಾರಿಗಳಿಗೆ ಕರಪತ್ರ ಹಂಚುವ ಮೂಲಕ ಅರಿವು ಮೂಡಿಸಲಾಯಿತು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ರಾಣಿ, ಪುರಸಭಾ ಸದಸ್ಯರಾದ ಎಂ.ಎಲ್.ದಿನೇಶ್, ದಯಾನಂದ, ರಾಧ, ವಸಂತಕುಮಾರಿ, ನಿರ್ಮಲ, ವೇಣು ಗೋಪಾಲ್ ಸೇರಿದಂತೆ ಇತರಿದ್ದರು.

ಮೂರನೇ ಪುಟದಿಂದ

ನಾಯಿ, ಹಂದಿ ಹಾವಳಿಯಿಂದ ಪಾರು ಮಾಡಿ...

ಅವಕಾಶದ ಬಗ್ಗೆ ಸಭೆಯ ಗಮನಕ್ಕೆ ತಂದ ಮೇಯರ್, ಈ ವಿಚಾರವಾಗಿ ನ್ಯಾಯಾಲಯದ ಮೊರೆ ಹೋಗುವ ನಿರ್ಧಾರ ಪ್ರಕಟಿಸಿದರು. ಮನುಷ್ಯರಂತೆ ನಾಯಿಗಳಿಗೂ ಬದುಕುವ ಹಕ್ಕಿದೆ ಸಂತಾನಹರಣ ಚಿಕಿತ್ಸೆ ನಂತರ ನಾಯಿಗಳನ್ನು ಮೊದಲಿದ್ದ ಸ್ಥಳದಲ್ಲೇ ಬಿಡಬೇಕು. ರೋಗಪೀಡಿತ ನಾಯಿಗಳಿಗೆ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ ನೀಡಿ, ಗುಣವಾದ ಬಳಿಕ ಹಿಡಿದು ತಂದಿದ್ದ ಸ್ಥಳದಲ್ಲೇ ಬಿಡಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಈ ಕ್ರಮಗಳನ್ನು ಹೊರತುಪಡಿಸಿ ಮತ್ಯಾವುದೇ ಅವಕಾಶಗಳಿಲ್ಲ. ದೇಶದಾದ್ಯಂತ ನ್ಯಾಯಾಲಯದ ಆದೇಶ ಪಾಲಿಸಲಾಗುತ್ತಿದೆ. ಆದರೆ ಮೈಸೂರು ನಗರದಲ್ಲಿ ಬೀದಿನಾಯಿಗಳ ಸಮಸ್ಯೆ ಗಂಭೀರವಾಗಿದೆ. ಮಾನವ ಮತ್ತು ಶ್ವಾನಗಳ ಸಂಘರ್ಷವನ್ನು ಲಘುವಾಗಿ ಪರಿಗಣಿಸಲಾಗದು. ಚಿಕ್ಕಮಕ್ಕಳು, ದೊಡ್ಡವರೆನ್ನದೆ ಎಲ್ಲರ ಮೇಲೂ ದಾಳಿ ಮಾಡುತ್ತಿವೆ. ಸದ್ಯ ಹೆಚ್.ಡಿ.ಕೋಟೆ ರಸ್ತೆ, ಎಸ್‌ಟಿಪಿ ಪ್ಲಾಂಟ್ ಬಳಿ ಪುನರ್ವಸತಿ ಕೇಂದ್ರ ನಿರ್ಮಿಸಲಾಗಿದೆ. ವ್ಯಾಘ್ರ ರೀತಿ ವರ್ತಿಸುವ ಬೀದಿನಾಯಿಗಳನ್ನು ಹಿಡಿದು, ಪುನರ್ವಸತಿ ಕೇಂದ್ರದಲ್ಲಿರಿಸುವುದು ಸೇರಿದಂತೆ ಸೂಕ್ತ ಕ್ರಮಗಳ ಬಗ್ಗೆ ವಿಶೇಷ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ಬಳಿಕ, ಅನುಷ್ಠಾನಕ್ಕೆ ಅನುಮತಿ ಕೋರಿ ಸುಪ್ರೀಂಕೋರ್ಟ್‌ನಲ್ಲಿ ಮನವಿ ಮಾಡೋಣ ಎಂದು ಮೇಯರ್ ಶಿವಕುಮಾರ್ ಸಭೆಗೆ ವಿವರಿಸಿದರು.

ಸದಸ್ಯರ ಆತಂಕ: ಇದಕ್ಕೂ ಮುನ್ನ ಬೀದಿನಾಯಿ ಹಾವಳಿ ಬಗ್ಗೆ ಹಲವು ಸದಸ್ಯರು ನಿದರ್ಶನ ಸಹಿತ ಸಭೆಗೆ ತಿಳಿಸಿದರು. ಪಾಲಿಕೆಯ ಜೆಡಿಎಸ್ ನಾಯಕಿ ಅಶ್ವಿನಿ ಅನಂತು, ಈ ವಿಚಾರವನ್ನು ಮೊದಲು ಪ್ರಸ್ತಾಪಿಸಿದರು. ನಾಯಿಗಳ ಹಾವಳಿ ವಿಪರೀತವಾಗಿದೆ. ನಾಯಿಗಳನ್ನು ಹಿಡಿದು ಆಪರೇಷನ್ ಬಳಿಕ ತಂದು ಬಿಡಲಾಗುತ್ತಿದೆ ಎನ್ನುತ್ತಾರೆ. ಆದರೆ ಈ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ. ಕಾಯಿಲೆ ಇರುವ ನಾಯಿಗಳಿಗೆ ಚಿಕಿತ್ಸೆಯನ್ನೂ ನೀಡುತ್ತಿಲ್ಲ. ನಾಯಿಗಳ ಬಗ್ಗೆ ಜನರಲ್ಲಿ ಆತಂಕ ಹೆಚ್ಚಾಗಿದೆ ಎಂದು ಹೇಳಿದರು. ಬಿಜೆಪಿ ಸದಸ್ಯೆ ಪ್ರಮಿಳಾ ಭರತ್ ಇದಕ್ಕೆ ಧ್ವನಿಗೂಡಿಸಿದರು. ಜೆಡಿಎಸ್‌ನ ಪ್ರೇಮಾ ಶಂಕರೇಗೌಡ ಅವರು ತಮಗೆ ನಾಯಿ ಕಚ್ಚಿದ್ದರ ಬಗ್ಗೆ ಪುನಃ ಪ್ರಸ್ತಾಪಿಸಿ, ಆತಂಕ ವ್ಯಕ್ತಪಡಿಸಿದರು. ಕಾಂಗ್ರೆಸ್‌ನ ಅನ್ವರ್ ಬೇಗ್, ಅಯಾಜ್ ಪಾಷಾ ಸೇರಿದಂತೆ ಎಲ್ಲಾ ಪಕ್ಷಗಳ ಸದಸ್ಯರೂ ಬೀದಿನಾಯಿಗಳ ಹಾವಳಿಯನ್ನು ಸಭೆಯ ಮುಂದಿಟ್ಟರು.

ಜನರಿಗೆ ತಿಳಿಸಿ: ಬೀದಿನಾಯಿಗಳಿಂದ ಕಡಿತಕ್ಕೊಳಗಾದವರು ಪಾಲಿಕೆ ಸದಸ್ಯರನ್ನು ಪ್ರಶ್ನಿಸುತ್ತಿದ್ದಾರೆ. ನಾಯಿ ಹಾವಳಿ ತಪ್ಪಿಸುವಂತೆ ಆಗ್ರಹಿಸುತ್ತಿದ್ದಾರೆ. ಬೀದಿನಾಯಿ ವಿಚಾರವಾಗಿ ನ್ಯಾಯಾಲಯದ ಆದೇಶ ಹಾಗೂ ನಿಯಂತ್ರಣಕ್ಕಿರುವ ಅವಕಾಶ ಹಾಗೂ ಮುಂದಿನ ಚಿಂತನೆ ಬಗ್ಗೆ ಮೇಯರ್ ಹಾಗೂ ಆಯುಕ್ತರು ಜಂಟಿ ಸುದ್ದಿಗೋಷ್ಠಿ ನಡೆಸಿ, ಸಾರ್ವಜನಿಕರಿಗೆ ತಿಳಿಸಬೇಕು ಎಂದು ಸದಸ್ಯೆ ಎಂ.ಲಕ್ಷ್ಮಿ ಮನವಿ ಮಾಡಿದರು.

ನಾಯಿ ಉಸ್ತುವಾರಿ ಸಚಿವರು!: ತಾವು ನಾಯಿ ಕಡಿತಕ್ಕೆ ಗುರಿಯಾಗಿದ್ದನ್ನು ಪುನಃ ಪ್ರಸ್ತಾಪಿಸಿ, ಬೀದಿನಾಯಿ ಹಾವಳಿ ಬಗ್ಗೆ ಆತಂಕ ವ್ಯಕ್ತಪಡಿಸಿದ ಪ್ರೇಮಾ ಶಂಕರೇಗೌಡ, ಈ ಸಮಸ್ಯೆಯಾದಾಗ ಯಾರನ್ನು ಸಂಪರ್ಕಿಸಬೇಕು ಎನ್ನುವುದೇ ಗೊತ್ತಾಗುತ್ತಿಲ್ಲ ಎಂದು ಹೇಳುವ ಭರದಲ್ಲಿ ನಾಯಿ ಉಸ್ತುವಾರಿ ಸಚಿವರು ಎಂದರು. ತಕ್ಷಣ ಸರಿಪಡಿಸಿಕೊಂಡು ನಾಯಿ ಉಸ್ತುವಾರಿ ಅಧಿಕಾರಿಗಳು ಯಾರು ಎನ್ನುವುದನ್ನು ಸಭೆಗೆ ತಿಳಿಸಬೇಕೆಂದು ಆಗ್ರಹಿಸಿದರು. ಪ್ರೇಮಾ ಅವರ ಬಾಯ್ತಪ್ಪಿನ ಮಾತಿಗೆ ಸದಸ್ಯರೆಲ್ಲಾ ನಕ್ಕು ಸುಮ್ಮನಾದರು.

ಹಂದಿ ಸೆರೆಗೆ ಕ್ರಮ: ನಮ್ಮ ವಾರ್ಡ್‌ನಲ್ಲಿ ಬೀದಿನಾಯಿ ಜೊತೆಗೆ ಹಂದಿಗಳ ಕಾಟ ಜಾಸ್ತಿಯಾಗಿದೆ. ಬಿಡಾಡಿ ಹಂದಿಗಳ ಸೆರೆ ಹಿಡಿಯಲು ಹೋದವರನ್ನು ಅವುಗಳ ಪಾಲಕರು ಚಾಕು ತೋರಿಸಿ ಬೆದರಿಸುತ್ತಾರೆ ಎಂದು ಸದಸ್ಯೆ ಶಾಂತಮ್ಮ ಗಂಭೀರ ಆರೋಪ ಮಾಡಿದರು. ಇದಕ್ಕೆ ಧ್ವನಿಗೂಡಿಸಿದ ಎಸ್‌ಬಿಎಂ ಮಂಜು, ಈ ಹಿಂದೆ ಹಂದಿ ಪಾಲಕರರೊಂದಿಗೆ ಸಭೆ ಮಾಡಿದಾಗ, ನಮ್ಮ ಜೀವನೋಪಾಯಕ್ಕೆ ಹಂದಿ ಸಾಕಿದ್ದೇವೆ. ನಮಗೆ ಪರ್ಯಾಯ ವ್ಯವಸ್ಥೆಯಿಲ್ಲ. ನಾವು ಬೀದಿಯಲ್ಲೇ ಬಿಡಬೇಕಾಗುತ್ತದೆ ಎಂದು ನೇರವಾಗಿ ಹೇಳಿದ್ದರು. ಪರಿಸ್ಥಿತಿ ಹೀಗಿರುವಾಗ ಪರಿಣಾಮಕಾರಿ ಕ್ರಮ ವಹಿಸಬೇಕಿದೆ ಎಂದು ಹೇಳಿದರು. ಇದಕ್ಕೆ ಮೇಯರ್ ಶಿವಕುಮಾರ್ ಪ್ರತಿಕ್ರಿಯಿಸಿ, ಹಂದಿ ಹಾವಳಿ ತಪ್ಪಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳುವಂತೆ ಖಡಕ್ ಸೂಚನೆ ನೀಡಿದರು.

ಸಹಾಯಕರ ನಿಯೋಜನೆಗೆ ಚಿಂತನೆ: ಪ್ರಸಕ್ತ ಸಾಲಿನ ಸ್ವಚ್ಛ ಸರ್ವೇಕ್ಷಣೆ ಅಭಿಯಾನದಲ್ಲಿ ಮೈಸೂರು ಪ್ರಥಮ ಪ್ರಶಸ್ತಿ ಪಡೆಯಬೇಕು. ಈ ನಿಟ್ಟಿನಲ್ಲಿ ಮೇಯರ್ ಹಾಗೂ ಆಯುಕ್ತರು ಕೈಗೊಳ್ಳುವ ನಿರ್ಧಾರಗಳಿಗೆ ನಮ್ಮ ಸಹಕಾರ ಇದ್ದೇ ಇರುತ್ತದೆ. ಈ ನಿಟ್ಟಿನಲ್ಲಿ ಶೀಘ್ರ ಟೆಂಡರ್ ಕರೆದು ಹೆಚ್ಚುವರಿ ತಾತ್ಕಾಲಿಕ ಕಾರ್ಮಿಕರ ನಿಯೋಜನೆಗೆ ಇಂದೇ ಘೋಷಣೆ ಮಾಡಬೇಕೆಂದು ಮಾಜಿ ಮೇಯರ್ ಅಯೂಬ್ ಖಾನ್ ಆಗ್ರಹಿಸಿದರು. ಅಶ್ವಿನಿ ಅನಂತು, ಗೋಪಿ, ಪ್ರೇಮಾ ಶಂಕರೇಗೌಡ ಸೇರಿದಂತೆ ಅನೇಕ ಸದಸ್ಯರು ಪೌರ ಕಾರ್ಮಿಕರ ಸಂಖ್ಯೆ ಕಡಿಮೆ ಇರುವುದರಿಂದ ಸ್ವಚ್ಛತೆ ನಿರ್ವಹಣೆಗೆ ತೊಂದರೆಯಾಗಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಸ್ವಚ್ಛತಾ ಸಹಾಯಕರನ್ನು ನಿಯೋಜಿಸುವ ಸಂಬಂಧ ಚರ್ಚೆ ನಡೆಸಿ, ನಿರ್ಣಯಿಸಲಾಗುವುದು ಎಂದು ಮೇಯರ್ ತಿಳಿಸಿದರು.

ಇಂದೋರ್ ಮಾದರಿ ಕ್ರಮ: ಪಾಲಿಕೆಯ 47 ಜನರ ಇಂದೋರ್‌ಗೆ ತೆರಳಿ ಅಲ್ಲಿನ ನಿರ್ವಹಣೆ ಬಗ್ಗೆ ತಿಳಿದಿದ್ದೇವೆ. ಅಲ್ಲಿ ಎರಡು ಪಾಳಿಯಲ್ಲಿ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಾರೆ. ಸೆಕೆಂಡರಿ ಪಾಯಿಂಟ್‌ಗಳಲ್ಲೂ ನಿತ್ಯ 2 ಬಾರಿ ಸ್ವಚ್ಛತೆ ನಡೆಸಲಾಗುತ್ತದೆ. ಅಲ್ಲಿನ ನಿರ್ವಹಣೆ ಬಗ್ಗೆ ಹಿಂದಿನ ಆಯುಕ್ತರ ಗಮನಕ್ಕೆ ತಂದು, ಹೆಚ್ಚುವರಿ ಕೆಲಸಗಾರರ ಅಗತ್ಯತೆ ಬಗ್ಗೆ ತಿಳಿಸಲಾಗಿತ್ತು. ಇಂದೋರ್ ಮಾದರಿಯಲ್ಲಿ ಮೈಸೂರಿನಲ್ಲೂ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಪ್ರತಿ ವಾರ್ಡ್‌ಗೆ ಹೆಚ್ಚುವರಿಯಾಗಿ ನಾಲ್ಕೈದು ಸಹಾಯಕ ನೌಕರರನ್ನು ನಿಯೋಜನೆ ಮಾಡುವ ಇಂಗಿತವನ್ನು ಮೇಯರ್ ಶಿವಕುಮಾರ್ ವ್ಯಕ್ತಪಡಿಸಿದರು. ಈ ಸಂಬಂಧ ಸಭೆಯಲ್ಲಿ ಹೆಚ್ಚುವರಿ ಕಾರ್ಯಸೂಚಿ ಮಂಡನೆಯಾಗಿ ಚರ್ಚೆ ನಡೆಯಿತಾದರೂ ಸಮಯದ ಅಭಾವದಿಂದಾಗಿ ನಿರ್ಣಯ ಕೈಗೊಳ್ಳಲಾಗದೆ ಮುಂದೂಡಲಾಯಿತು. ಸಭೆಯಲ್ಲಿ ಉಪಮೇಯರ್ ಡಾ.ಜಿ.ರೂಪಾ, ಪಾಲಿಕೆಯ ನೂತನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಹಾಜರಿದ್ದರು.

ಇ–ಬಜೆಟ್ ಇಂಗಿತ

ಹೇಳುವುದಿದ್ದರೂ ಮೇಯರ್ ಉದ್ದೇಶಿಸಿ ಮಾತನಾಡಿ ಎಂದು ಏರುಧ್ವನಿಯಲ್ಲೇ ಹೇಳಿದರು. ಈ ವೇಳೆ ಮೇಯರ್ ಪ್ರತಿಕ್ರಿಯಿಸಿ, ಸದಸ್ಯರ ಅವಧಿ ಮುಗಿದ ಬಳಿಕ ವಾಪಸ್ ಪಡೆದು, ಮುಂಬರುವ ಸದಸ್ಯರಿಗೆ ವಿತರಿಸಲಾಗುವುದು ಎಂದು ಸ್ಪಷ್ಟಪಡಿಸಿದರು. ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಮಾತನಾಡಿ, ಪ್ರಸ್ತುತ ಎಲ್ಲರೂ ಮೊಬೈಲ್ ಅವಲಂಬಿಸಿದ್ದೇವೆ. 2013ರಿಂದ 17ರವರೆಗೆ ನಾನು ತುಮಕೂರು ಮಹಾನಗರ ಪಾಲಿಕೆ ಆಯುಕ್ತನಾಗಿದ್ದಾಗ ದೇಶದಲ್ಲೇ ಮೊದಲಿಗೆ ಇ–ಬಜೆಟ್ ಮಂಡಿಸಿದ್ದೆವು. ಅದಕ್ಕಾಗಿ 14 ಲಕ್ಷ ರೂ. ವೆಚ್ಚದಲ್ಲಿ ಎಲ್ಲಾ ಸದಸ್ಯರಿಗೂ ಲ್ಯಾಪ್‌ಟಾಪ್ ನೀಡಲಾಗಿತ್ತು. ಮೈಸೂರು ಪಾಲಿಕೆ ಸದಸ್ಯರಿಗೆ ಟ್ಯಾಬ್ ನೀಡಿರುವುದು ಒಳ್ಳೆಯದೆ. ಕಾಗದ ಮುಕ್ತ ಪಾಲಿಕೆ ಆಡಳಿತಕ್ಕೆ ಅವಕಾಶವಿದೆ. ನಡಾವಳಿ ಹಾಗೂ ಪ್ರಕಟಣೆಗಳನ್ನು ಟ್ಯಾಬ್ ಮೂಲಕವೇ ಕಳುಹಿಸಬಹುದು. ಮುಂದೆ ಇ–ಬಜೆಟ್ ಮಂಡಿಸೋಣ, ಕಾಗದ ಮುಕ್ತ ಆಡಳಿತಕ್ಕೆ ಪ್ರಯತ್ನಿಸೋಣ ಎಂದು ತಿಳಿಸಿದರು.

ಸಿಂಧುವಳ್ಳಿ ಗ್ರಾಮ ಪಂಚಾಯ್ತಿ ಜೆಡಿಎಸ್ ತೆಕ್ಕೆಗೆ



ಮೈಸೂರು, ಜು.28– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಸಿಂಧುವಳ್ಳಿ ಗ್ರಾಮಪಂಚಾಯಿತಿಗೆ 2ನೇ ಅವಧಿಗೆ ಅಧ್ಯಕ್ಷರಾಗಿ (ಸಾಮಾನ್ಯ ಮಹಿಳೆ) ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಶ್ರೀಮತಿ ಜಿ. ಪ್ರೇಮ ಆರ್. ಕೃಷ್ಣಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ (ಸಾಮಾನ್ಯ ಪುರುಷ) ರಹಮಾನ್ ಉಲ್ಲಾ ಆಯ್ಕೆಯಾದರು.

ಇವರು ಕ್ರಮವಾಗಿ ಕಾಂಗ್ರೆಸ್ ಬೆಂಬಲಿತ ಶ್ರೀಮತಿ ಉಮಾರಾಣಿ ಮತ್ತು ಮಹದೇವ ಅವರ ವಿರುದ್ಧ 14:11 ಮತ್ತು 13:12 ಮತಗಳ ಅಂತರದಲ್ಲಿ ಜಯ ಸಾಧಿಸಿದರು. ನಂತರ ಇವರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವರಾದ ಜಿ.ಟಿ. ದೇವೇಗೌಡ ಅವರನ್ನು ಅಭಿನಂದಿಸಿದರು.

ಈ ವೇಳೆ ನಿರ್ಗಮಿತ ಅಧ್ಯಕ್ಷರಾದ ಅನ್ನಪೂರ್ಣ ಉಮೇಶ್, ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಕೃಷ್ಣಯ್ಯ, ಸದಸ್ಯರುಗಳಾದ ಭೀಮಾ ಮಹೇಶ್, ನೀಲ ಚನ್ನನಾಯಕ, ಮಹಮದ್ ಸುಹೇಲ್, ಮಹದೇವಸ್ವಾಮಿ, ನಂಜುಂಡ, ಶಿವಯ್ಯ, ಪಾಪಣ್ಣ, ಶಿವರುದ್ರಮ್ಮ, ಸುನೀತ ನಂಜುಂಡಸ್ವಾಮಿ, ಜೆಡಿಎಸ್ ಮುಖಂಡರು ಹಾಗೂ ಸಿಂಧುವಳ್ಳಿ ಗ್ರಾಪಂ ಮಾಜಿ ಉಪಾಧ್ಯಕ್ಷರಾದ ಡಾ. ಉಮಾಪತಿ, ಮುಖಂಡರಾದ ದಡದಹಳ್ಳಿ ಮಹೇಶ್, ಮಂಜುನಾಥ ಬ್ಯಾತಹಳ್ಳಿ, ಶೀಮಾ ಮಹೇಶ್, ಶಿವಣ್ಣ, ಹರೀಶ್ ಕುಮಾರ್ ಎಸ್.ಕೆ, ಲೋಕೇಶ್ ದಡದಹಳ್ಳಿ, ಜೆಸಿಬಿ ಬಸವರಾಜು, ನವೀನ್ ಎಸ್.ಆರ್, ನಂಜುಂಡಸ್ವಾಮಿ, ಚನ್ನನಾಯಕ, ಜಗದೀಶ್ ಎಸ್.ಎಂ, ಅಪ್ಪಾಜಿ, ಡಿ.ಎನ್. ಮಹೇಶ್, ಉಮೇಶ್ ಡೈರಿ, ಸಂತೋಷ್ ಕುಮಾರ್ ಎಸ್.ಕೆ, ಮಹಮ್ಮದ್ ರಫಿ, ಶೇಷಣ್ಣ ಬೆಟ್ಟಿ, ಶಿವಣ್ಣ (ಚಾಳ), ನಾಗ (ಭಟ್ಟಿ), ಕುಮಾರ್ ಗುಡ್ಡ, ರವಿ ಆಟೋ ಸೇರಿದಂತೆ ಹಲವರು ಹಾಜರಿದ್ದರು.

ಕೌನ್ಸಿಲ್‌ನಲ್ಲಿ ನಿರ್ಣಯವಾದರೂ ಕೇಬಲ್ ತೆರವು ಮಾಡದಿರುವುದಕ್ಕೆ ಗಂಭೀರ ಚರ್ಚೆ

- ಆಯುಕ್ತರ ಉತ್ತರಕ್ಕೆ ಸಹಮತ
- ಆದರೆ ಹಿಂದಿನ ಸಭೆಯ ನಿರ್ಣಯ ಲಘುವಾಗಿ ಪರಿಗಣಿಸಿದ್ದಕ್ಕೆ ಆಕ್ಷೇಪ

ಬಿಬಿಎಂಪಿ ವ್ಯಾಪ್ತಿಯ ನಿರ್ವಹಣೆ ಅಧ್ಯಯನ ನಂತರ ಕೇಬಲ್ ತೆರವಿಗೆ ಕ್ರಮ



ಮೈಸೂರು, ಜು.28(ಎಸ್‌ಬಿಡಿ)–ಕಂಬಗಳಲ್ಲಿ ಅಳವಡಿಸಿರುವ ಕೇಬಲ್ ತೆರವುಗೊಳಿಸಲು ಕೌನ್ಸಿಲ್‌ನಲ್ಲಿ ನಿರ್ಣಯ ಕೈಗೊಂಡಿದ್ದರೂ ಕಾರ್ಯರೂಪಕ್ಕೆ ಬಾರದಿರುವ ಬಗ್ಗೆ ಶುಕ್ರವಾರದ ಕೌನ್ಸಿಲ್‌ನಲ್ಲಿ ಸುದೀರ್ಘ ಚರ್ಚೆಯಾಯಿತು.

ಆಪ್ಟಿಕಲ್ ಫೈಬರ್ ಕೇಬಲ್(OFC) ಮೂಲಕವೇ ನಗರ ಪಾಲಿಕೆಗೆ ನೂರಾರು ಕೋಟಿ ಆದಾಯ ಬರುತ್ತದೆ. ಕಂಬಗಳಲ್ಲಿ ಅಳವಡಿಸಿರುವ ಕೇಬಲ್‌ಗಳನ್ನು ಕಟ್ ಮಾಡಿ, ಅಂಡರ್ ಗ್ರೌಂಡ್(ಯುಜಿ)ನಲ್ಲಿ ಅಳವಡಿಸಿಕೊಳ್ಳಲು ಅನುಮತಿ ನೀಡುವುದರಿಂದ ಸುಮಾರು 700 ಕೋಟಿ ರೂ. ಆದಾಯ ನಿರೀಕ್ಷಿಸಬಹುದು. ಈ ಬಗ್ಗೆ ಕೌನ್ಸಿಲ್‌ನಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಕಂಬದಲ್ಲಿ ಕೇಬಲ್ ಅಳವಡಿಸಲು ಅನುಮತಿ ನೀಡಿಲ್ಲ ಎಂದು ಸೆಸ್ಕ್ ಅಧಿಕಾರಿಗಳೂ ಸ್ಪಷ್ಟಪಡಿಸಿದ್ದಾರೆ. ಆದರೂ ಅಧಿಕಾರಿಗಳು ಏಕೆ ಅನುಷ್ಠಾನ ಮಾಡುತ್ತಿಲ್ಲ. ಬಿಬಿಎಂಪಿಯಲ್ಲಿ ಓಎಫ್‌ಸಿಯಿಂದ 300 ಕೋಟಿ ರೂ. ಆದಾಯ ಪಡೆಯಲಾಗುತ್ತಿದೆ. ಹಾಗಾಗಿ ಕೌನ್ಸಿಲ್ ನಿರ್ಣಯವನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು ಎಂದು ಮಾಜಿ ಮೇಯರ್ ಅಯೂಬ್ ಖಾನ್ ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಕೇಬಲ್ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಹಿಂದಿನ ಆಯುಕ್ತರಿಗೆ ಸೂಚನೆ ನೀಡಲಾಗಿತ್ತು. ಆದರೆ ಕಾರಣಾಂತರಗಳಿಂದ ವಿಳಂಬವಾಯಿತು. ಈ ಬಗ್ಗೆ ಈಗಿನ ಆಯುಕ್ತರಿಗೆ ತಿಳಿಸಿದ್ದೇನೆ. ಅವರೇ ಸ್ಪಷ್ಟನೆ ನೀಡಲಿದ್ದಾರೆ ಎಂದರು. ಪಾಲಿಕೆ ಆಯುಕ್ತರು ಮಾತನಾಡಿ, ಅಧಿಕಾರಿಗಳ ತಂಡ ರಚನೆ ಮಾಡಿ, ಕೇಬಲ್ ಸಂಬಂಧ ಬಿಬಿಎಂಪಿಯಲ್ಲಿನ ನಿರ್ವಹಣೆ ಬಗ್ಗೆ ಅಧ್ಯಯನ ಮಾಡಿದ ಬಳಿಕ ಕೇಬಲ್ ತೆರವಿಗೆ ಕಾಲಾವಕಾಶ ನೀಡಿ, ನಂತರ ಮುಂದಿನ ಕ್ರಮ ಕೈಗೊಳ್ಳೋಣ ಎಂದರು. ಆಗ ಅಯೂಬ್ ಖಾನ್, ಈ ವಿಚಾರವಾಗಿ 8–9 ತಿಂಗಳಿಂದ ಚರ್ಚೆ ನಡೆದು, ಕಂಬಗಳಲ್ಲಿ ಅಳವಡಿಸಿರುವ ಕೇಬಲ್ ತೆರವಿಗೆ ನಿರ್ಣಯವೂ ಆಗಿದೆ. ನಾಮಕಾವಸ್ಥೆಗೆ ಸಾರ್ವಜನಿಕ ಪ್ರಕಟಣೆಯನ್ನೂ ನೀಡಲಾಗಿದೆ. ನಂತರವೂ ಅನಧಿಕೃತವಾಗಿ ಕೇಬಲ್ ಅಳವಡಿಸಲಾಗುತ್ತಿದ್ದು, ಈ ಬಗ್ಗೆ ಪಾಲಿಕೆ ಸದಸ್ಯರು ಮಾಹಿತಿ ನೀಡಿದ್ದರಿಂದ ಉದಯಗಿರಿ, ರಾಜೀವ್‌ನಗರದಲ್ಲಿ ಭಾಗದಲ್ಲಿ ಅಪಾರ ಪ್ರಮಾಣದ ಕೇಬಲ್ ವಶಪಡಿಸಿ ಕೊಳ್ಳಲಾಗಿದೆ. ಇದರಲ್ಲಿ ಪಾಲಿಕೆ ಅಧಿಕಾರಿಗಳ ಸಹಕಾರವೂ ಇರಬಹುದು. ಹಾಗಾಗಿ ಯಾವ ಒತ್ತಡಕ್ಕೂ ಮಣಿಯದೆ ಕೌನ್ಸಿಲ್ ನಿರ್ಣಯವನ್ನು ಅನುಷ್ಠಾನಕ್ಕೆ ತರಬೇಕು ಎಂದರು. ಇದಕ್ಕೆ ಆಯುಕ್ತರು ಪ್ರತಿಕ್ರಿಯಿಸಿ, ನನಗಿನ್ನೂ ಅಧಿಕಾರಿಗಳ ಪರಿಚಯವೂ ಆಗಿಲ್ಲ. ಈ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಲಘುವಾಗಿ ಮಾತನಾಡಬೇಡಿ: ಕೇಬಲ್ ತೆರವಿಗೆ ಸೂಚಿಸಿದರೆ ಕೆಲ ಅಧಿಕಾರಿಗಳು ನಮಗೆ ಕೌನ್ಸಿಲ್ ತೀರ್ಮಾನ ಮುಖ್ಯವಲ್ಲ, ಆಯುಕ್ತರಿಂದ ಮೌಖಿಕ ಆದೇಶ ಬರಬೇಕು ಎಂದು ಹೇಳಿದರು. ಆ ಅಧಿಕಾರಿಗಳು ಪಾಲಿಕೆಯಿಂದ ಬಿಡುಗಡೆ (ರಿಲೀವ್)ಯಾಗಿದ್ದಾರೆ ಎಂದು ವರ್ಕ್ಸ್ ಕಮಿಟಿ ಅಧ್ಯಕ್ಷೆ ಶಾಂತಕುಮಾರಿ ದೂರಿದರು. ಇದು ಇಡೀ ಕೌನ್ಸಿಲ್‌ಗಾದ ಅಪಮಾನ ಎಂದು ಅನೇಕ ಸದಸ್ಯರು ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಮೇಯರ್ ಪ್ರತಿಕ್ರಿಯಿಸಿ, ಕೌನ್ಸಿಲ್ ವಿಚಾರವಾಗಿ ಯಾರಾದರೂ ಲಘುವಾಗಿ ಮಾತನಾಡಿದರೆ ಆ ಕ್ಷಣದಲ್ಲೇ ರಿಲೀವ್ ಮಾಡುತ್ತೇವೆ ಎಂದು ಖಡಕ್ ಎಚ್ಚರಿಕೆ ನೀಡಿದರು.

ಪ್ರತ್ಯೇಕ ಘಟಕ ಮಾಡಿ: ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷ ವಿ.ರಮೇಶ್ ಮಾತನಾಡಿ, ಬಿಬಿಎಂಪಿಯಲ್ಲಿ ಓಎಫ್‌ಸಿ ಸೆಲ್ ಮಾಡಿದ್ದಾರೆ. ಯಾವುದಾದರೂ ಕಾಮಗಾರಿಗೆ ನೆಲ ಅಗೆಯುವ ಮುನ್ನ ಕಡ್ಡಾಯವಾಗಿ ವಾರ್ಡ್ ಇಂಜಿನಿಯರ್ ಗಮನಕ್ಕೆ ತರುವಂತೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಪಾಲಿಕೆ ಇಂಜಿನಿಯರ್, ಸೆಸ್ಕ್, ವಾಟರ್ ಬೋರ್ಡ್ ಸೇರಿದಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಜಂಟಿ ಪರಿಶೀಲನೆ ನಡೆಸಿ, ದೃಢೀಕರಿಸಿದ ನಂತರವೇ ಕಾಮಗಾರಿ ನಡೆಸಲಾಗುತ್ತದೆ. ಆ ವ್ಯವಸ್ಥೆಯನ್ನು ಮೈಸೂರಿನಲ್ಲೂ ಜಾರಿಗೆ ತಂದರೆ ಅವಘಡಗಳನ್ನು ತಪ್ಪಿಸಬಹುದು ಎಂದು ತಿಳಿಸಿದರು.

ರಸ್ತೆಗೆ ನಾಮಕರಣ: ಅಶೋಕಪುರಂ 1ನೇ ಮುಖ್ಯರಸ್ತೆ, 1ನೇ ಕ್ರಾಸ್‌ನಿಂದ 13ನೇ ಕ್ರಾಸ್‌ವರೆಗೆ ಸಿದ್ಧಾರ್ಥ ಹಾಸ್ಟೆಲ್ ಎದುರಿನ ರಸ್ತೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ತಾಯಿ 'ಶ್ರೀಮತಿ ಭೀಮಬಾಯಿ' ಹೆಸರು ನಾಮಕರಣ ಮಾಡಲು ಕೌನ್ಸಿಲ್ ಒಪ್ಪಿಗೆ ದೊರಕಿತು. ಆದರೆ ರಾಮಕೃಷ್ಣನಗರ ವೃತ್ತದಿಂದ ಇಸ್ಕಾನ್ ಕಡೆಗಿನ ಸಿಗ್ನಲ್‌ವರೆಗಿನ ರಸ್ತೆಗೆ ಡಾ.ಅಂಬೇಡ್ಕರ್ ಅವರ ತಂದೆ 'ಶ್ರೀಯುತ ರಾಮ್‌ಜೀ ಸಕ್ಪಾಲ್' ಹೆಸರಿಡುವ ಸಂಬಂಧ ಪರಿಶೀಲಿಸಿದ ನಂತರ ನಿರ್ಣಯಿಸಲು ತೀರ್ಮಾನಿಸಲಾಯಿತು. ಈ ರಸ್ತೆಗೆ ಈಗಾಗಲೇ ಬೇರೆ ಹೆಸರಿದೆ ಎನ್ನಲಾಗಿದ್ದು ಪರಿಶೀಲಿಸಿದ ಬಳಿಕ ಮುಂದಿನ ಸಭೆಯಲ್ಲಿ ಒಪ್ಪಿಗೆ ನೀಡಲಾಗುವುದು ಎಂದು ಮೇಯರ್ ಸ್ಪಷ್ಟಪಡಿಸಿದರು.

ನಿರ್ಗಮಿತ ಆಯುಕ್ತರಿಗೆ ಮೆಚ್ಚುಗೆ ನುಡಿ

ಪಾಲಿಕೆಯ ನೂತನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರನ್ನು ಸ್ವಾಗತಿಸಿದ ಸದಸ್ಯರು, ನಿರ್ಗಮಿತ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಅವರ ಆಡಳಿತದ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದರು. ಕೆ.ವಿ.ಶ್ರೀಧರ್ ಮಾತನಾಡುವಾಗ ನಿರ್ಗಮಿತ ಆಯುಕ್ತರು ಅತ್ಯುತ್ತಮವಾಗಿ ಕೆಲಸ ಮಾಡಿದ್ದರು. ಪಾಲಿಕೆ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದರೆಂದು ಬಣ್ಣಿಸಿದರು. ಮಾಜಿ ಮೇಯರ್ ಅಯೂಬ್ ಖಾನ್ ಅವರು, ಲಕ್ಷ್ಮಿಕಾಂತ ರೆಡ್ಡಿ ಅವರು, ಪಾಲಿಕೆಯ ಹಣದ ಕೊರತೆ ನೀಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಅವಧಿಯಲ್ಲಿ ಗುತ್ತಿಗೆದಾರರಿಗೆ ಬಿಲ್ ಪಾವತಿಸಿ, ಅನೇಕ ಉತ್ತಮ ಕೆಲಸ ಮಾಡಿದರು. ಪಾಲಿಕೆಯ ಆರ್ಥಿಕ ಸ್ಥಿತಿ ಸುಧಾರಿಸಲು ಶ್ರಮಿಸಿದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹೀಗೆ ಅನೇಕ ಸದಸ್ಯರು ನಿರ್ಗಮಿತ ಆಯುಕ್ತರ ಕಾರ್ಯ ವೈಖರಿಯನ್ನು ನೆನಪು ಮಾಡಿಕೊಂಡರು.

ಆಗಸ್ಟ್ 30ರಂದು ಶಿವಭವನದಲ್ಲಿ ಉಚಿತ ಸಾಮೂಹಿಕ ವಿವಾಹ


ಮೈಸೂರು, ಜು. 28– ಮೈಸೂರಿನ ಶ್ರೀರಾಂಪುರ 2ನೇ ಹಂತದ ಎಸ್‌ಬಿಎಂ ಬಡಾವಣೆಯಲ್ಲಿರುವ ಶಿವ ದೇವಾಲಯ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶಿವಭವನದ ಉದ್ಘಾಟನಾ ಮಹೋತ್ಸವದ ಅಂಗವಾಗಿ ಕುವೆಂಪುನಗರ ವೀರಶೈವ ಸ್ನೇಹ ಬಳಗದ ವತಿಯಿಂದ ಐದು ಜೋಡಿಗಳಿಗೆ ಆಗಸ್ಟ್ 30ರಂದು ಉಚಿತ ಸಾಮೂಹಿಕ ವಿವಾಹವನ್ನು ಏರ್ಪಡಿಸಲಾಗಿದೆ. ವಧು–ವರರಿಗೆ ಮಾಂಗಲ್ಯ, ವಸ್ತ್ರಗಳನ್ನು ಉಚಿತವಾಗಿ ನೀಡಲಾಗುವುದು.

ಸಾಮೂಹಿಕ ವಿವಾಹದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಹರಗುರು ಚರಮೂರ್ತಿಗಳು, ಗಣ್ಯರು, ವಧು–ವರರ ಬಂಧುಮಿತ್ರರು ಹಾಗೂ ಸಾರ್ವಜನಿಕರು ಭಾಗವಹಿಸಿ ನೂತನ ದಂಪತಿಗಳಿಗೆ ಶುಭ ಹಾರೈಸಲಿದ್ದಾರೆ.

ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ, ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ.

30 ಆಗಸ್ಟ್ 2023 ಬುಧವಾರದಂದು ಸಾಮೂಹಿಕ ವಿವಾಹ ಕಾರ್ಯಕ್ರಮವಿದ್ದು, 8 ದಿನಗಳ ಮುಂಚಿತವಾಗಿ ವೀರಶೈವ ಸ್ನೇಹ ಬಳಗದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಕಚೇರಿಯಲ್ಲಿ ಖುದ್ದು ಸಂಪರ್ಕಿಸಿ ಅರ್ಜಿ ಸಲ್ಲಿಸಬೇಕಿದೆ. ಮಾಹಿತಿಗಾಗಿ ಮೊ. 9741117631 ಹಾಗೂ 9900556394 ಈ ಸಂಖ್ಯೆಗಳಲ್ಲಿ ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ.

ನಾಳೆ ನಾಯಿ ಮರಿ, ಬೆಕ್ಕಿನ ಮರಿ ದತ್ತು ಮೇಳ



ಮೈಸೂರು: ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆಯು ನಾಯಿಮರಿ ಮತ್ತು ಬೆಕ್ಕಿನ ಮರಿಗಳನ್ನು ದತ್ತು ಪಡೆಯುವ ವಿಶೇಷ ಮೇಳವನ್ನು ಆಯೋಜಿಸಿದೆ.

ಇದೇ ಜುಲೈ 30 ಭಾನುವಾರ ಬೆಳಗ್ಗೆ 11 ಗಂಟೆಗೆ ಬೋಗಾದಿಯಲ್ಲಿರುವ ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆ ಆವರಣದಲ್ಲಿ ಮೇಳ ಆರಂಭವಾಗಲಿದೆ ಪ್ರಾಣಿಪ್ರಿಯರಿಗೆ ಈ ವಿಶೇಷ ಮೇಳ ಹಲವಾರು ಅವಕಾಶ ಒದಗಿಸುತ್ತದೆ. ಪ್ರಾಣಿಪ್ರಿಯರು ನಾಯಿಮರಿ ಅಥವಾ ಬೆಕ್ಕಿನಮರಿಯನ್ನು ಖರೀದಿಸುವ ಬದಲು ದತ್ತು ಪಡೆಯಬಹುದು. ಮುಗ್ಧ ಜೀವಕ್ಕೆ ಆಶ್ರಯ ನೀಡಬಹುದಾಗಿದೆ.

ತರಬೇತಿ ಪಡೆದ ಸ್ವಯಂಸೇವಕರು ಮೌಲ್ಯಯುತವಾದ ಮಾರ್ಗದರ್ಶನವನ್ನು ನೀಡಲಿದ್ದಾರೆ. ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡಲು ತಜ್ಞರು, ವೈದ್ಯರು ಕೂಡ ಇರಲಿದ್ದಾರೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೀಪಲ್ ಫಾರ್ ಅನಿಮಲ್ ಸಂಸ್ಥೆಯು ಪ್ರಾಣಿಗಳ ದತ್ತು ಪಡೆಯಲು ಸರಳ ಮತ್ತು ಸುಲಭ ಪ್ರಕ್ರಿಯೆಗಳನ್ನು ಜಾರಿಗೆ ತಂದಿದೆ.

ಸುರಕ್ಷಿತ ವಾತಾವರಣ, ಕಾಳಜಿ, ಸಹಾನುಭೂತಿ, ಪ್ರೀತಿಯಾಗಿ ನೋಡಿಕೊಳ್ಳುವುದನ್ನು ಖಚಿತಪಡಿಸಿಕೊಂಡು ದತ್ತು ನೀಡಲಾಗುವುದು. ಸಾಕುಪ್ರಾಣಿಗಳನ್ನು ದತ್ತು ಪಡೆಯುವುದು ಎಂದರೆ ಜೀವವನ್ನು ಉಳಿಸುವುದಾಗಿದೆ ಮತ್ತು ನಿಷ್ಠಾವಂತ ಒಡನಾಡಿಯನ್ನು ಪಡೆಯುವುದಾಗಿದೆ ಎಂದು ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆರೈಕೆ ತಾಣ: ಗಾಯಗೊಂಡ ನಾಯಿಗಳಿಗೆ ಆರೈಕೆ ಮಾಡಿ ಉಪಚರಿಸುವ ಆಶ್ರಯ ತಾಣವನ್ನು ಪೀಪಲ್ ಫಾರ್ ಅನಿಮಲ್ ಸಂಸ್ಥೆಯಲ್ಲಿ ಇದೇ ಜುಲೈ 31ರಂದು ಉದ್ಘಾಟಿಸಲಾಗುವುದು. ಬೋಗಾದಿಯ ರೂಪಾನಗರದಲ್ಲಿರುವ ಪೀಪಲ್ ಫಾರ್ ಅನಿಮಲ್‌ನಲ್ಲಿ ಈ ಆಶ್ರಯತಾಣಕ್ಕೆ ಚಾಲನೆ ನೀಡಲಾಗುವುದು. ರಾಜವಂಶಸ್ಥರಾದ ತೃಷಿಕಾ ಕುಮಾರಿ ಒಡೆಯರ್ ವಿಶೇಷ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಡಾ. ಡಿ.ಎಲ್.ಮಾಧವಿ ಅವರ ನೇತೃತ್ವದಲ್ಲಿ ಇದನ್ನು ಆರಂಭಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ

ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜು. 28– ಚಾಮುಂಡಿಪುರಂನಲ್ಲಿರುವ ಬಾಲ ಬೋಧಿನಿ ಶಾಲೆಯಲ್ಲಿ ಅಪೂರ್ವ ಸ್ನೇಹ ಬಳಗ ಹಾಗೂ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಾಳೆ (ಜುಲೈ 29) ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರವರೆಗೂ ಏರ್ಪಡಿಸಲಾಗಿದೆ ಎಂದು ಅಪೂರ್ವ ಸ್ನೇಹ ಬಳಗದ ಅಧ್ಯಕ್ಷರಾದ ಅಪೂರ್ವ ಸುರೇಶ್ ತಿಳಿಸಿದ್ದಾರೆ,

ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ ಹೃದಯ ತಜ್ಞರಾದ ಡಾ.ರವಿ, ನಗರಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷ ಹೇಮಾ ನಂದೀಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಉದ್ಯಮಿ ಜೈರಾಮ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಆ.1ರಂದು ಡಾ.ಕೆ.ಕೃಷ್ಣಮೂರ್ತಿ ಶತಮಾನೋತ್ಸವ ಸಮಾರಂಭ



ಮೈಸೂರು, ಜು. 28– ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಮೈಸೂರಿನ ಡಾ.ಕೆ.ಕೃಷ್ಣಮೂರ್ತಿ ಶತಮಾನೋತ್ಸವ ಸಮಿತಿ ಸಹಯೋಗದಲ್ಲಿ ಆ. 1 ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಆವರಣದಲ್ಲಿ ಡಾ.ಕೆ.ಕೃಷ್ಣಮೂರ್ತಿ ಶತಮಾನೋತ್ಸವ ಸಮಾರಂಭ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಕುಲಪತಿ ಪ್ರೊ. ನಿರಂಜನ ವಾನಳ್ಳಿ ಉದ್ಘಾಟಿಸುವರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿ ಡಾ.ಎಸ್.ಅಹಲ್ಯಾ ಅಧ್ಯಕ್ಷತೆ ವಹಿಸುವರು. ಬಹುಶ್ರುತ ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್ ಅವರು ಮುಖ್ಯ ಭಾಷಣಕಾರರಾಗಿದ್ದಾರೆ. ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಆಶಯ ನುಡಿಗಳನ್ನಾಡುವರು. ಡಾ.ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ಸಂಸ್ಥಾಪಕ ನಿರ್ದೇಶಕರಾದ ಡಾ.ಕೆ.ಲೀಲಾಪ್ರಕಾಶ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಕಾರ್ಯಕ್ರಮವು ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘ ಮತ್ತು ಕರ್ನಾಟಕ ಸಂಸ್ಕೃತ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಂಘ ಸಹಕಾರದಲ್ಲಿ ನಡೆಯಲಿದೆ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಸಚಿವ ನರಸಿಂಹಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಮಹಾ ನಗರ ಪಾಲಿಕೆಯ ನೂತನ ಆಯುಕ್ತ ಅಶಾದ್ ಉರ್ ರೆಹಮನ್ ಶರೀಫ್ ಅವರನ್ನು ಟೀಂ ಮೈಸೂರು ತಂಡದಿಂದ ಅಭಿನಂದಿಸಲಾಯಿತು. ಈ ವೇಳೆ ತಂಡದ ಗೋಕುಲ್ ಗೋವರ್ಧನ್, ಕಿರಣ್ ಜೈ ರಾಮ್ ಗೌಡ, ಹಿರಿಯಣ್ಣ, ಲಿಂಗರಾಜು, ಹರೀಶ್ (ಎಲೆಕ್ಟ್ರಿಕಲ್), ಮಂಜು (ಫಾರ್ಮ), ನವೀನ್, ಸುನಿಲ್, ಸ್ವಾಮಿ, ರಾಜಶೇಖರ್, ಮಂಜು (ಬಂಕ್) ಮತ್ತಿತರರು ಹಾಜರಿದ್ದರು.



ವಿಶ್ವ ಪ್ರಕೃತಿ ಸಂರಕ್ಷಣಾ ದಿನದ ಅಂಗವಾಗಿ ಗೋಕುಲಂನಲ್ಲಿ ಸಸಿ ನೆಡಲಾಯಿತು. ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುಂದರ್‌ಕುಮಾರ್, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಕುಂಬಾರಕೊಪ್ಪಲಿನ ಎನ್.ಸ್ವಾಮಿ, ರೈಲ್ವೆ ಶ್ರೀನಿವಾಸ್, ಲೋಕನಾಯಕನಗರದ ಶ್ರೀನಿವಾಸ್ ಗೌಡ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿಯ ಎಂ ರಾಮಕೃಷ್ಣ ಉಪಸ್ಥಿತರಿದ್ದರು.

ರೈತರ ಅನುಕೂಲಕ್ಕೆ ಅಲ್ಪಾವಧಿ ತಳಿಯ ಬಿತ್ತನೆ ಬೀಜ ವಿತರಣೆ

● ಕೃಷಿ ಸಚಿವ ಚಲುವರಾಯಸ್ವಾಮಿ ಮಾಹಿತಿ ● ಸದ್ಯಕ್ಕೆ ರಾಗಿ, ಹುರುಳಿ, ಜೋಳ ಇನ್ನಿತರೆ ಬಿತ್ತನೆ ಬೀಜ ವಿತರಿಸಲು ತೀರ್ಮಾನ





ಬೆಂಗಳೂರು, ಜು.28 (ಕೆಎಂಶಿ) –ಮುಂಗಾರು ಮಳೆ ವಿಳಂಬವಾದ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲವಾಗುವಂತೆ ಅಲ್ಪಾವಧಿ ತಳಿಗಳ ಬಿತ್ತನೆ ಬೀಜ ನೀಡಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು. ರಾಜ್ಯಾದ್ಯಂತ ಉತ್ತಮ ಮಳೆಯಾಗಿರುವ ಹಿನ್ನೆಲೆಯಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜ ಪೂರೈಕೆಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ದ್ವಿದಳ ಧಾನ್ಯ ಬೆಳೆಯಲು ಸಮಯ ಮೀರಿರುವುದರಿಂದ ಅಲ್ಪಾವಧಿಯಲ್ಲಿ ಬೆಳೆಯುವ ರಾಗಿ, ಹುರುಳಿ, ಜೋಳ ಸೇರಿದಂತೆ ಅಗತ್ಯ ಬಿತ್ತನೆ ಬೀಜ ಪೂರೈಸಲು ತೀರ್ಮಾನಿಸಲಾಗಿದೆ. ಸಭೆಯ ನಂತರ ಈ ವಿಷಯ ತಿಳಿಸಿದ ಚಲುವರಾಯಸ್ವಾಮಿ, 14 ಲಕ್ಷ ಟನ್ ರಸಗೊಬ್ಬರ, 1 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ಸಂಗ್ರಹವಿದೆ. ಯಾವುದಾದರೂ ಜಿಲ್ಲೆಯಲ್ಲಿ ಗೊಬ್ಬರ ಮತ್ತು ಬಿತ್ತನೆ ಬೀಜದ ಕೊರತೆ ಇದ್ದರೆ ನೆರೆಯ ಜಿಲ್ಲೆಯಿಂದ ಪೂರೈಕೆ ಮಾಡಲು ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಮಳೆ ಕೊರತೆಯಿಂದ ಶೇ.53ರಷ್ಟು ಬಿತ್ತನೆಯಾಗಿದೆ. ಒಟ್ಟಾರೆ 82 ಲಕ್ಷ ಹೆಕ್ಟೇರ್ ಪ್ರದೇಶದ ಪೈಕಿ 43 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಮುಂದಿನ 15 ದಿನದಲ್ಲಿ ಶೇ.100ರಷ್ಟು ಬಿತ್ತನೆಯಾಗಲಿದೆ ಎಂದರು.

ರೈತರು ತಮಗೆ ಅಗತ್ಯವಾಗಿರುವ ಬಿತ್ತನೆ ಬೀಜವನ್ನು ರೈತ ಕೇಂದ್ರ ಇಲ್ಲವೆ ಇಲಾಖೆಯಿಂದ ಪಡೆಯಬಹುದಾಗಿದೆ. ಅಲ್ಲದೆ, ಇಲಾಖೆಗೆ ಹೊರೆಯಾಗಿದ್ದ ಮೈಕ್ರೋ ಇರಿಗೇಷನ್ ಹಾಗೂ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಚ್ಚಲು ತೀರ್ಮಾನಿಸಿರುವುದಾಗಿ ಹೇಳಿದರು.

ಆಗ್ರೋ ಕಾರ್ಪೊರೇಷನ್ ಈಗಾಗಲೇ ಮುಚ್ಚಿದ್ದರೂ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ತ್ವರಿತ ಪ್ರಕರಣ ಇತ್ಯರ್ಥಕ್ಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಮೈಕ್ರೋ ಇರಿಗೇಷನ್‌ನಲ್ಲಿ ಯಾವುದೇ ಕೆಲಸವಾಗುತ್ತಿಲ್ಲ. ಹನಿ ಮತ್ತು ತುಂತುರು ನೀರಾವರಿ ಕಾರ್ಯವನ್ನು ತೋಟಗಾರಿಕೆ ಇಲಾಖೆ ನಿರ್ವಹಿಸಲಿದೆ. ಇವೆರಡನ್ನು ಮುಚ್ಚಿ ಅಲ್ಲಿನ ನೌಕರರನ್ನು ಇಲಾಖೆಯಲ್ಲಿ ವಿಲೀನ ಮಾಡಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದರು. ಕೃಷಿ ವಿಶ್ವ ವಿದ್ಯಾಲಯಗಳ ವ್ಯಾಪ್ತಿಯಲ್ಲಿ 167 ಕೋಟಿ ರೂ. ವೆಚ್ಚದ 37 ಕಾಮಗಾರಿಗಳು ನಡೆಯುತ್ತಿವೆ. ಅವುಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಹಾಗೂ ಕಾಮಗಾರಿ ಗುಣಮಟ್ಟ ಪರಿಶೀಲಿಸಲು ಕುಲಪತಿಗಳಿಗೆ ಸೂಚಿಸಲಾಗಿದೆ.

ವಿಶ್ವವಿದ್ಯಾನಿಲಯದ ಎಂಜಿನಿಯರ್ ವಿಭಾಗವನ್ನು ಇದಕ್ಕಾಗಿ ಬಳಸಿಕೊಳ್ಳಲು ನಿರ್ದೇಶನ ನೀಡಲಾಗಿದೆ ಎಂದರು.

ವೃತ್ತಿ ಪೂಜೆಯಲ್ಲಿ ದೇವರನ್ನು ಆರಾಧಿಸಿ: ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ



ಮೈಸೂರು,ಜು.28(ಎಂಟಿವೈ)– ಜನರು ದೇವಾಲಯದಲ್ಲಿ ಮಾತ್ರ ಪೂಜೆ ಮಾಡುವುದಕ್ಕೆ ಸೀಮಿತಗೊಳ್ಳದೆ ವೃತ್ತಿ ಪೂಜೆಯನ್ನೂ ಮಾಡಿ ದೇವರ ಅನುಗ್ರಹ ಮತ್ತು ಕೃಪೆಗೆ ಪಾತ್ರವಾಗಬೇಕು ಎಂದು ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳು ಸಲಹೆ ನೀಡಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆಯಲ್ಲಿ ನೂತನ ಚಿಹ್ನೆ ಬಿಡುಗಡೆ ಹಾಗೂ ಹೋಟೆಲ್ ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು. ಜೀವನ ನಿರ್ವಹಣೆಗಾಗಿ ಅವಲಂಬಿಸಿರುವ ವೃತ್ತಿಯನ್ನು ಆರಾಧಿಸುವ ಮೂಲಕ ದೇವರನ್ನು ಕಾಣಬೇಕು. ಜನರು ತಾವು ಮಾಡುವ ವೃತ್ತಿಯಲ್ಲಿ ಮೋಸ–ವಂಚನೆಗೆ ಅವಕಾಶ ನೀಡಬಾರದು. ವೃತ್ತಿಯಲ್ಲಿ ಚ್ಯುತಿ ಮಾಡಿದರೆ ದೇವರ ಆರಾಧನೆಯಲ್ಲಿ ಚ್ಯುತಿ ಮಾಡಿದಂತಾಗುತ್ತದೆ. ಆ ಕಾರಣದಿಂದ ಚ್ಯುತಿಗೆ ಅವಕಾಶ ನೀಡದೆ, ಸದಾ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಗ್ರಾಹಕರಲ್ಲಿ ದೇವರನ್ನು ಕಾಣಬೇಕು. ದೇವರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುವಂತೆ ಗ್ರಾಹಕರ ಸೇವೆಯನ್ನೂ ಮಾಡಬೇಕು. ನಾವು ಮಾಡುವ ಪ್ರತಿಯೊಂದು ಕೆಲಸವೂ ದೇವರ ಆರಾಧನೆಯೇ ಆಗಿರುತ್ತದೆ. ಶ್ರೀಕೃಷ್ಣ ಸಂದೇಶದಂತೆ "ಇಡೀ ಬದುಕೇ ದೇವರ ಆರಾಧನೆಯಾಗಬೇಕು' ಎಂದರು.

ಸಮಾಜದಲ್ಲಿ ರಾಮರಾಜ್ಯ ಕನಸು ನನಸಾಗಬೇಕು. ಸಮಾಜಮುಖಿ ಕೆಲಸದ ಮೂಲಕ ಪ್ರತಿಯೊಬ್ಬ ಪ್ರಜೆಯೂ ರಾಮನಾಗಬೇಕು. ರಾಮನ ಭಕ್ತಿ ಹಾಗೂ ದೇಶ ಭಕ್ತಿ ಬೇರೆಯಲ್ಲ. ದೇಶ ಸೇವೆ ಹಾಗೂ ರಾಮನ ಸೇವೆ ಬೇರೆಯಲ್ಲ. ಕಷ್ಟದಲ್ಲಿರುವ ಜನರಿಗೆ ಸಾಮರ್ಥ್ಯಕ್ಕೆ ಅನುಗುಣವಾಗಿ ಸಹಾಯ ಮಾಡಬೇಕು. ಜೀವನವಿಡೀ ಸಂಪಾದನೆ ಮಾಡಿದ ಹಣದಲ್ಲಿ ಒಂದು ಭಾಗವನ್ನು ಸಮಾಜ ಸೇವೆಗೆ ಮೀಸಲಿಡಬೇಕು. ಶಿಕ್ಷಕರು, ವೈದ್ಯರು ಸೇರಿದಂತೆ ವಿವಿಧ ವೃತ್ತಿಯಲ್ಲಿ ಇರುವವರು ದುರ್ಬಲರಿಗೆ ನೆರವಾಗಬೇಕು. ಫಲಾನುಭವಿಗಳನ್ನು ನೀವೇ ಗುರುತಿಸಿ, ನೀವೇ ಅವರಿಗೆ ಸೌಲಭ್ಯ ತಲುಪಿಸಬೇಕು. ಇದರಿಂದ ರಾಮರಾಜ್ಯದ ಕನಸು ನನಸಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಅಯೋಧ್ಯೆಯಲ್ಲಿ ನಿರ್ಮಿಸುತ್ತಿರುವ ಶ್ರೀರಾಮ ಮಂದಿರದ ಗರ್ಭಗುಡಿಯಲ್ಲಿ ಶ್ರೀರಾಮನ ಬಾಲ ರೂಪದ ವಿಗ್ರಹದ ಪ್ರತಿಷ್ಠಾಪನೆ ಮಕರ ಸಂಕ್ರಾತಿ ಬಳಿಕ ನೆರವೇರಲಿದೆ. ಇಲ್ಲಿ ದೇವರ ಸೇವಾ ಕಾರ್ಯಗಳಿಗೆ ಶುಲ್ಕ ನೀಡಬೇಕಾಗಿಲ್ಲ. ಸೇವಾ ಪಟ್ಟಿ ಸಹ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಇದೇ ವೇಳೆ ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರಿಗೆ 'ಹೋಟೆಲ್ ಸಹಕಾರ ಮಿತ್ರ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸಂಘದ ನೂತನ ಚಿಹ್ನೆಯನ್ನು ಅನಾವರಣಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಆರ್.ತಂತ್ರಿ, ಪಿ. ನಾರಾಯಣ ಕುಂದರ್, ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷ ರವಿಶಾಸ್ತ್ರಿ, ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ನಾರಾಯಣ ವಿ.ಹೆಗಡೆ, ಎಂ.ಆರ್.ಪುರಾಣಿಕ್, ಕೆ.ಸಿ. ವಿಶ್ವಾನಂದ ಭಟ್, ಬಿ.ಸಿದ್ದರಾಜು, ಎಂ.ಎಸ್.ಜಯಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಟನದಲ್ಲಿ ಜುಲೈ 30ರಂದು 'ರಂಗಶಿಕ್ಷಣ; ವರ್ತಮಾನ, ಭವಿಷ್ಯದ ಅವಕಾಶಗಳು' ರಂಗಚರ್ಚೆ

ಮೈಸೂರು, ಜು. 28– ಮಂಡ್ಯ ರಮೇಶ್ ನೇತೃತ್ವದ ನಟನ ರಂಗಶಾಲೆಯು ಕಳೆದ ಅನೇಕ ವರ್ಷಗಳಿಂದ ರಂಗಭೂಮಿಯಲ್ಲಿ ನಿರಂತರ ಕ್ರಿಯಾಶೀಲವಾಗಿದ್ದು, ರಂಗಭೂಮಿಯ ಅಧ್ಯಯನ, ಪ್ರಾತ್ಯಕ್ಷಿಕೆ, ಪ್ರಯೋಗ, ಪ್ರದರ್ಶನಗಳ ಮೂಲಕ ಶ್ರೇಷ್ಠತೆಯನ್ನು ಸಾಧಿಸುವುದರತ್ತ ಸತತವಾಗಿ ಪ್ರಯತ್ನಶೀಲವಾಗಿದೆ. ತನ್ನ ಚಟುವಟಿಕೆಯ ಭಾಗವಾಗಿ ಕನ್ನಡ ಆಧುನಿಕ ರಂಗಭೂಮಿಗೆ ವಿಶೇಷ ಕೊಡುಗೆ ನೀಡಿದ ರಂಗ ಸಂಘಟಕ, ಚಿಂತಕ ಕೆ.ವಿ.ಸುಬ್ಬಣ್ಣ ಅವರ ಸ್ಮರಣಾರ್ಥ 'ಸುಬ್ಬಣ್ಣ ಸ್ಮರಣೆ' ಕಾರ್ಯಕ್ರಮವನ್ನು ಪ್ರತಿವರ್ಷ ಜುಲೈ ತಿಂಗಳಲ್ಲಿ ನಡೆಸುತ್ತಾ ಬಂದಿದ್ದು, 2023ನೇ ಸಾಲಿನ ನಟನದ ಜುಲೈ ತಿಂಗಳ ಎಲ್ಲಾ ಕಾರ್ಯಕ್ರಮಗಳನ್ನು ಸುಬ್ಬಣ್ಣರ ಸ್ಮರಣೆಗೆ ಅರ್ಪಿಸಿದೆ. ಜುಲೈ 1ರಿಂದ ಆರಂಭವಾಗಿ ಪ್ರತಿ ವಾರಾಂತ್ಯಗಳಲ್ಲಿ ವಿವಿಧ ನಾಟಕಗಳ ಪ್ರದರ್ಶನ, ರಂಗ ಕಾರ್ಯಾಗಾರ ನಡೆದಿದ್ದು, 2023ರ ಸುಬ್ಬಣ್ಣ ಸ್ಮರಣೆಯ ಕಡೆಯ ಕಾರ್ಯಕ್ರಮವಾಗಿ ಜುಲೈ 30ರಂದು ಬೆಳಗ್ಗೆ 10ಕ್ಕೆ ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ 'ರಂಗಶಿಕ್ಷಣ; ವರ್ತಮಾನ ಮತ್ತು ಭವಿಷ್ಯದ ಅವಕಾಶಗಳು' ವಿಷಯದ ಕುರಿತು ರಂಗಚರ್ಚೆಯನ್ನು ಆಯೋಜನೆ ಮಾಡಲಾಗಿದೆ.

ರಂಗಚರ್ಚೆಯಲ್ಲಿ ಹಿರಿಯ ರಂಗಕರ್ಮಿ, ನಿವೃತ್ತ ಪ್ರಾಧ್ಯಾಪಕರಾದ ಡಾ.ರಾಜಪ್ಪ ದಳವಾಯಿ, ಬೆಂಗಳೂರಿನ ಪಿಇಎಸ್ ವಿವಿ ರಂಗಭೂಮಿ ವಿಭಾಗದ ಮುಖ್ಯಸ್ಥರಾದ ಡಾ. ಸುಷ್ಮಾ ಕಲಾವಿದರೂ ರಂಗ ಶಿಕ್ಷಕರೂ ಆದ ಸಂತೋಷ್ ಗುಡ್ಡಿಯಂಗಡಿ ವಿಷಯದ ಕುರಿತು ಮಾತನಾಡಲಿದ್ದು, ಪ್ರಖ್ಯಾತ ರಂಗತಜ್ಞರು, ರಂಗ ಶಿಕ್ಷಕರು, ಹೆಗ್ಗೋಡಿನ ನೀನಾಸಂನ ರಂಗ ಶಿಕ್ಷಣ ಕೇಂದ್ರದ ನಿವೃತ್ತ ಪ್ರಾಂಶುಪಾಲರಾದ ಬಿ.ಆರ್. ವೆಂಕಟರಮಣ ಐತಾಳ, ರಂಗಚರ್ಚೆಯನ್ನು ಸಮನ್ವಯಗೊಳಿಸಲಿದ್ದಾರೆ. ನಿರೂಪಣೆಯನ್ನು ಎನ್.ಧನಂಜಯ ನಡೆಸಿಕೊಡಲಿದ್ದು, ಮೇಘ ಸಮೀರ ಪ್ರಾಸ್ತಾವಿಕ ಮಾತನಾಡಲಿದ್ದಾರೆ. ಮಂಡ್ಯ ರಮೇಶ್ ಅವರು ಉಪಸ್ಥಿತರಿರುವರು. ಮಾಹಿತಿಗಾಗಿ 7259537777, 9480468327 ಸಂಪರ್ಕಿಸಿ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 28– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ, ಆರ್ಯ ಈಡಿಗ ನೌಕರರ ಸಂಘ, ಆರ್ಯ ಈಡಿಗ ಮಹಿಳಾ ಸಂಘವು 2022–23ನೇ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 80 ಕ್ಕಿಂತ ಹೆಚ್ಚು ಅಂಕ ಪಡೆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಈಡಿಗ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಸಂಘದ ಕಚೇರಿಯಲ್ಲಿ ಪಡೆದು, ಅಂಕಪಟ್ಟಿ, ವಿಳಾಸ ದೃಢೀಕರಣ, 2 ಭಾವಚಿತ್ರಗಳೊಂದಿಗೆ ಆ. 15 ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9341916963, 8553129129 ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು, ಜು. 28– ಡಾ. ಯು.ಬಿ. ಮಹದೇವಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎಂ.ಎನ್. ಗೀತಾ ಅವರು ಪರ್ಫಾಮೆನ್ಸ್ ಎವ್ಯಾಲ್ಯೇಷನ್ ಅಂಡ್ ಅನಾಲಿಸಿಸ್ ಆಫ್ ಪೀಕ್ ಟು ಆವರೇಜ್ ಪವರ್ ರಿಡಕ್ಷನ್ ಇನ್ ಆಫ್‌ಡಿಎಂ ಸಿಗ್ನಲ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯುನಿವರ್ಸಿಟಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಾರ್ಷಿಕ ಮಹಾಸಭೆ

ಮೈಸೂರು, ಜು. 28– ಮೈಸೂರಿನ ದಿವ್ಯ ಸಮಾಜ ನಿರ್ಮಾಣ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ವಾರ್ಷಿಕ ಮಹಾಸಭೆಯನ್ನು ಆ. 6 ರಂದು ಬೆಳಗ್ಗೆ 10 ಗಂಟೆಗೆ ಸೊಸೈಟಿ ಅಧ್ಯಕ್ಷ ಬಿ.ಎಸ್. ಶ್ರೀನಾಥ್ ಅವರ ಅಧ್ಯಕ್ಷತೆಯಲ್ಲಿ ತ್ಯಾಗರಾಜ ರಸ್ತೆಯಲ್ಲಿರುವ ಬ್ರಾಹ್ಮಣ ಧರ್ಮ ಸಹಾಯ ಸಭಾ ಕಲ್ಯಾಣ ಭವನದಲ್ಲಿ ಏರ್ಪಡಿಸಲಾಗಿದೆ.

ಸಮಯಕ್ಕೆ ಯಾರು ಗೌರವ ಕೊಡುತ್ತಾರೋ ಅಂಥವರಿಗೆ ಸಮಯವೇ ಗೌರವ ತಂದುಕೊಡುತ್ತದೆ

ಪದ್ಮಶ್ರೀ ಪುರಸ್ಕೃತೆ ಡಾ.ಮಾತಾ ಬಿ ಮಂಜಮ್ಮ ಜೋಗತಿ



ಮೈಸೂರು, ಜು. 28– ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಪದ್ಮಶ್ರೀ ಪುರಸ್ಕೃತರು ಮತ್ತು ಜಾನಪದ ಕಲಾವಿದರಾದ ಡಾ. ಮಾತಾ ಬಿ ಮಂಜಮ್ಮ ಜೋಗತಿ ಅವರು ಮಾತನಾಡಿ, ಸಮಯಕ್ಕೆ ಯಾರು ಗೌರವ ಕೊಡುತ್ತಾರೋ, ಅಂಥವರಿಗೆ ಸಮಯವೇ ಗೌರವ ತಂದುಕೊಡುತ್ತದೆ. ಅದಕ್ಕೆ ನಾನೇ ನಿದರ್ಶನ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಕೆಲಸದಲ್ಲಿ ಸಮಯ ಪ್ರಜ್ಞೆ, ಶ್ರದ್ಧೆ, ನಿಷ್ಠೆ ಹಾಗೂ ಪ್ರಾಮಾಣಿಕತೆ ಹೊಂದಿರಬೇಕು. ಅಲ್ಲದೇ ಯಾವುದೇ ಕೆಲಸವನ್ನಾದರೂ ಪ್ರೀತಿಯಿಂದ ಮಾಡಬೇಕು. ವಿದ್ಯಾರ್ಥಿಗಳು ಮೊಬೈಲನ್ನು ಅಗತ್ಯಕ್ಕನುಗುಣವಾಗಿ ಬಳಸಬೇಕು. ಮೊಬೈಲ್‌ಗೆ ಶರಣಾಗದೆ ಅದರ ಬದಲು ದಿನಪತ್ರಿಕೆ, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಹಾಗೂ ಬಸವಣ್ಣ, ಅಕ್ಕಮಹದೇವಿ, ಬುದ್ಧ, ಅಂಬೇಡ್ಕರ್, ಬೈಬಲ್, ಮಹಾಸಾಧಕರ ಆತ್ಮಚರಿತ್ರೆಯನ್ನು ಅಧ್ಯಯನ ಮಾಡಿ ಎಂದರು. ವಿದ್ಯಾರ್ಥಿ ಸಂಸತ್ ಸಮಾರೋಪ ಭಾಷಣ ಮಾಡಿದ ಕರ್ನಾಟಕ ಜಾನಪದ ಅಕಾಡೆಮಿ ಕುಲಸಚಿವರಾದ ಎನ್.ನಮ್ರತಾ, ವಿದ್ಯಾರ್ಥಿಗಳು ತಮ್ಮ ಸಂವಹನ ಕೌಶಲ್ಯವನ್ನು ವೃದ್ಧಿಸಿಕೊಳ್ಳಲು ದೇಶದ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳಲು ಸಂವಿಧಾನದ ಬಗ್ಗೆ ಅರಿವಿರಬೇಕೆಂದರು. ಉತ್ತಮ ಮಾತುಗಾರಿಕೆ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು. ದೇಶಸೇವೆ ಮಾಡಬೇಕು ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್.ತಿಮ್ಮೇಗೌಡ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ.ಎನ್. ವೆಂಕಟಲಕ್ಷ್ಮಿ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಪ್ರತಿಭಾ ವೇದಿಕೆಯ ಸಂಚಾಲಕ ನಾಗೇಶ ಎಂ, ವಿದ್ಯಾರ್ಥಿ ಸಂಸತ್‌ನ ಸಂಚಾಲಕ ಡಾ. ಎಂ.ಆರ್.ಇಂದ್ರಾಣಿ ಉಪಸ್ಥಿತರಿದ್ದರು.

ಮೈಸೂರು ಅಭಿವೃದ್ಧಿಗೆ ಸಾಫ್ಟ್‌ವೇರ್ ಉದ್ಯಮ ಬೆಳೆಯಬೇಕು

'ಎ ವಿಷನ್ ಬ್ರಾಂಡ್ ಮೈಸೂರು' ಸಂವಾದದಲ್ಲಿ ತಜ್ಞರ ಅಭಿಪ್ರಾಯ



ಮೈಸೂರು, ಜು.28(ಸಿಎನ್)–ನರೇಡ್ಕೋ ಮೈಸೂರು ಘಟಕದಿಂದ 'ಎ ವಿಷನ್ ಬ್ರಾಂಡ್ ಮೈಸೂರು' ಯೋಜನೆ ಕುರಿತ ಸಂವಾದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

ಪ್ರಾಸ್ತಾವಿಕವಾಗಿ ಆದಿಶೇಷನಗೌಡ ಮಾತನಾಡಿ, ಬೆಂಗಳೂರು ಇಲ್ಲಿಂದ ಕೇವಲ 140 ಕಿ.ಮೀ ದೂರದಲ್ಲಿದೆ, ಹಾಗಾಗಿ ಬೆಂಗಳೂರಿನ ರೀತಿ ಮೈಸೂರು ಬೆಳವಣಿಗೆ ಹೊಂದುವ ಕ್ಷಮತೆಯಿದೆ. ಜೊತೆಗೆ ನಮ್ಮ ಸಂಸ್ಥೆ ಕೂಡ ಸಾಥ್ ನೀಡುತ್ತಾ ಬಂದಿದ್ದು, ಮುಂದಿನ ದಿನಗಳಲ್ಲಿ ಹಲವು ಕ್ಷೇತ್ರಗಳಲ್ಲಿ ಅಭಿವೃದ್ಧಿ ಯೋಜನೆ ರೂಪಿಸಿದ್ದೇವೆ, ಮೈಸೂರಿನ ಸರ್ವತೋಮುಖ ಬೆಳವಣಿಗೆಗೆ ನಾವು ಎಲ್ಲಾ ರೀತಿಯಲ್ಲೂ ಮುನ್ನುಗ್ಗಲು ಸಿದ್ಧರಿದ್ದೇವೆ ಎಂದರು.

ಮೈಸೂರಿನ ರಿಂಗ್ ರಸ್ತೆಯ ಸುತ್ತಮುತ್ತ 8 ಯೋಜನೆಗಳ ನೀಲನಕ್ಷೆ ರೂಪಿಸಿದ್ದೇವೆ. ಪ್ರವಾಸೋದ್ಯಮ, ಕೈಗಾರಿಕೋದ್ಯಮ, ಅರೆವಾಹಕ, ರಿಯಲ್ ಎಸ್ಟೇಟ್ ಉದ್ಯಮಗಳಿಗೆ ಹೆಚ್ಚು ಒತ್ತು ನೀಡಿ, ಸರ್ಕಾರಕ್ಕೆ ಹಾಗೂ ಮೈಸೂರಿನ ಪ್ರಗತಿಗೆ ಸಹಕಾರಿಯಾದ ಜನಸ್ನೇಹಿ ಯೋಜನೆ ರೂಪಿಸಿದ್ದೇವೆ. ಈಗಾಗಲೇ 10 ಅಂಶಗಳ ಯೋಜನೆಯಲ್ಲಿ 2 ಯೋಜನೆಗಳು ಜಾರಿಯಲ್ಲಿವೆ ಎಂದರು. ಸಿಐಐ ಛೇರ್ಮನ್ ಸ್ಯಾಮ್ ಚೆರಿಯನ್ ಮಾತನಾಡಿ, ನರೇಡ್ಕೊ ಯೋಜನೆ ಅದ್ಭುತವಾಗಿದೆ. ಮೈಸೂರಿನಂಥ ನಗರ ಪ್ರಪಂಚದಲ್ಲೇ ಬೇರೆಲ್ಲೂ ಇಲ್ಲ. ಆದರೆ ಮೈಸೂರು ಮತ್ತಷ್ಟು ಅಭಿವೃದ್ಧಿ ಹೊಂದಬೇಕಾಗಿದೆ. ನಾವು ಮತ್ತಷ್ಟು ತ್ವರಿತವಾಗಿ ಬೆಳೆಯಬೇಕಾದರೆ, ಸಾಫ್ಟ್‌ವೇರ್ ಉದ್ಯಮ ಸ್ಥಾಪಿಸುವುದು ಮುಖ್ಯವಾಗುತ್ತದೆ. ಸಾಫ್ಟ್‌ವೇರ್ ಉದ್ಯಮಿಗಳನ್ನು ಇಲ್ಲಿ ಬಂಡವಾಳ ಹಾಕುವಂತೆ ಸೆಳೆಯಬೇಕಿದೆ. ಇಲ್ಲಿ ಸಾಫ್ಟ್‌ವೇರ್ ಕಂಪನಿಗಳು ಸ್ಥಾಪಿತವಾದಲ್ಲಿ ಸ್ಥಳೀಯ ಯುವ ಜನರು ಇಲ್ಲಿಯೇ ಉಳಿಯುತ್ತಾರೆ. ಟೆಕ್ಕಿಗಳು ಹೆಚ್ಚಾದಷ್ಟು ಮೈಸೂರು ಅಭಿವೃದ್ಧಿಯತ್ತ ಸಾಗುತ್ತದೆ. ಅಲ್ಲದೇ ಯುವ ಜನರು ಉದ್ಯೋಗ ಅರಸಿ ಬೆಂಗಳೂರಿನ ಕಡೆಗೆ ಹೋಗುತ್ತಿದ್ದಾರೆ. ಅವರು ಇಲ್ಲಿಯೇ ಉಳಿದು ಸಾಫ್ಟ್‌ವೇರ್ ಉದ್ಯಮ ಬೆಳೆಯುವಂತೆ ನೋಡಿಕೊಳ್ಳಬೇಕು ಎಂದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ ಮಾತನಾಡಿ, ಕೆಆರ್‌ಎಸ್ ಹಿನ್ನೀರಿನಲ್ಲಿ ಕ್ಯಾಸಿನೋ ನಿರ್ಮಾಣ ಮಾಡಬೇಕು. ಪ್ರವಾಸೋದ್ಯಮದಿಂದ ಬರುವ 70% ಆದಾಯದಿಂದಲೇ ಮೈಸೂರು ನಿರ್ವಹಣೆಯಾಗುತ್ತಿದೆ. ಇಲ್ಲಿ ನೈಟ್‌ಕ್ಲಬ್ ನಿರ್ವಹಿಸಲು ಅನೇಕ ಬಾರಿ ಮನವಿ ಮಾಡಿದ್ದೇನೆ. ಆದರೇ ಯಾರೊಬ್ಬರೂ ಮನಸ್ಸು ಮಾಡುತ್ತಿಲ್ಲ. ವಿದೇಶಗಳಲ್ಲಿರುವ ನೈಟ್ ಕ್ಲಬ್‌ಗಳು ಆಯಾ ದೇಶದ ಆದಾಯ ಮೂಲವಾಗಿವೆ. ಈ ನಿಟ್ಟಿನಲ್ಲಿ ಮೈಸೂರಿಗೆ ವಿನೂತನವಾದ ಯೋಜನೆ ತಂದು ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿ ಪೂರಕವಾಗಿ ನಿರ್ಮಾಣವಾಗಬೇಕು ಎಂದರು.

ಮೈಸೂರು ಕ್ರೆಡೈ (CREDAI) ಅಧ್ಯಕ್ಷ ಶ್ರೀಹರಿ ದ್ವಾರಕನಾಥ್ ಮಾತನಾಡಿ, ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಗ ಮಾನ್ಯತೆ ಪಡೆದಿದೆ. ಅರ್ಧಗಂಟೆ ಯೋಗ ಮಾಡಿದರೆ ಸಾಕು, ರೋಗ ಮುಕ್ತ ಜೀವನ ನಡೆಸಬಹುದು ಎಂಬ ನಂಬಿಕೆ ನಮ್ಮಲ್ಲಿದೆ. ಮೈಸೂರು ವಿವಿಗಳಿಗೆ ಉತ್ತಮ ಹೆಸರಿದೆ, ಹಾಗಾಗಿ ಒಂದು ಯೋಗ ಯುನಿವರ್ಸಿಟಿ ಇಲ್ಲೇ ನಿರ್ಮಾಣವಾಗಬೇಕು. ಯೋಗಕ್ಕೆ ಸ್ವಾಭಾವಿಕವಾಗಿ ಯುವ ಸಮೂಹ, ವಿದ್ಯಾರ್ಥಿಗಳು ಒಗ್ಗಿಕೊಳ್ಳುತ್ತಾರೆ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಎಂಎಸ್ಎಂಇ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್, ನರೇಡ್ಕೋ ಮೈಸೂರು ಘಟಕದ ಛೇರ್ಮನ್ ಎನ್.ದಿವ್ಯೇಶ್, ನರೇಡ್ಕೋ ಕಾರ್ಯದರ್ಶಿ ಎಂ.ಎಲ್. ನಾಗೇಂದ್ರ, ಉಪಾಧ್ಯಕ್ಷ ವಿ.ಸಿ ರವಿಕುಮಾರ್, ಖಜಾಂಚಿ ಫಣಿರಾಜ್, ನರೇಡ್ಕೋ ಜಂಟಿ ಕಾರ್ಯದರ್ಶಿ ಸುಧೀಂದ್ರ ಜಿ.ಕೆ. ಮತ್ತಿತರರಿದ್ದರು.

ಕೊಡಗಿಗೆ ಕ್ರಿಟಿಕಲ್ ಕೇರ್ ಸೆಂಟರ್, 4ಜಿ ಸೇವೆಯ 62 ಟವರ್‌ಗಳ ಕೊಡುಗೆ

ಸಂಸದ ಪ್ರತಾಪ್‌ಸಿಂಹ ಪ್ರಕಟ



ಮಡಿಕೇರಿ, ಜು.28– ಕೇಂದ್ರದ ನರೇಂದ್ರ ಮೋದಿ ಸರಕಾರ ಕೊಡಗು ಜಿಲ್ಲೆಗೆ ಅತ್ಯಗತ್ಯವಾಗಿರುವ 'ಕ್ರಿಟಿಕಲ್ ಕೇರ್ ಸೆಂಟರ್' ಮತ್ತು '4ಜಿ' ಸೇವೆ ಒದಗಿಸುವ 62 ಬಿಎಸ್ಎನ್ಎಲ್ ಟವರ್‌ಗಳನ್ನು ಒದಗಿಸಿದೆ ಎಂದು ಕೊಡಗು–ಮೈಸೂರು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ಬಿಜೆಪಿ ಶಾಸಕರ ಪರಿಶ್ರಮದ ಫಲವಾಗಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಅವಧಿಯಲ್ಲಿ ಜಿಲ್ಲಾಸ್ಪತ್ರೆಯನ್ನು ಮೆಡಿಕಲ್ ಕಾಲೇಜು ನಿಂಯುವುದಂತೆ 750 ಹಾಸಿಗೆಗಳಿಗೆ ಏರಿಕೆ ಮಾಡಲಾಗಿದೆ. 100 ಕೋಟಿ ರೂ. ವೆಚ್ಚದಲ್ಲಿ 2 ಹೊಸ ಆಸ್ಪತ್ರೆ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಒಂದು ಕಟ್ಟಡ ಮುಂದಿನ ತಿಂಗಳು ಹಸ್ತಾಂತರವಾಗಲಿದೆ. ಮತ್ತೊಂದು ಕಟ್ಟಡ ಪೂರ್ಣವಾಗಲು ಹೆಚ್ಚುವರಿ 72 ಕೋಟಿ ರೂ.ಗಳ ಅಗತ್ಯವಿದ್ದು, ಈಗಿನ ಸಿದ್ದರಾಮಯ್ಯ ಅವರ ಸರಕಾರ ಅನುದಾನ ನೀಡುವ ಭರವಸೆ ಇದೆ ಎಂದರು.

ಕ್ರಿಟಿಕಲ್ ಕೇರ್ ಸೆಂಟರ್: ಕೇಂದ್ರದ ಮೋದಿ ಸರಕಾರ ಕೊಡಗು ಜಿಲ್ಲೆಗೆ ಒಂದು ಕ್ರಿಟಿಕಲ್ ಕೇರ್ ಸೆಂಟರ್‌ಗೆ ಅನು ಮೋದನೆ ನೀಡಿದ್ದು, 23.75 ಕೋಟಿ ಅನುದಾನ ಒದಗಿ ಸಿದೆ. ಕೇರ್ ಸೆಂಟರ್ ನಿರ್ಮಾಣಕ್ಕೆ ಈಗಾಗಲೇ ಜಾಗ ಗುರುತು ಮಾಡಲಾಗಿದೆ. ವೈದ್ಯಕೀಯ ಪರಿಕರಗಳನ್ನು ಖರೀದಿಸಲು 7.12 ಕೋಟಿ ರೂ. ನೀಡಿದ್ದು, ಆಗಸ್ಟ್ ತಿಂಗಳ ಅಂತ್ಯದಲ್ಲಿ ಕಾಮಗಾರಿ ಪ್ರಾರಂಭಿಸಲಾಗುತ್ತದೆ. ಮುಂದಿನ 15 ತಿಂಗಳ ಅವಧಿಯಲ್ಲಿ ಕ್ರಿಟಿಕಲ್ ಕೇರ್ ಸೆಂಟರ್ ಕಾಮಗಾರಿ ಮುಕ್ತಾಯಕ್ಕೆ ಗಡುವು ನೀಡ ಲಾಗಿದ್ದು, ಗುಣಮಟ್ಟದ ಕಾಮಗಾರಿಗೂ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಹೇಳಿದರು. ಕ್ರಿಟಿಕಲ್ ಕೇರ್ ಸೆಂಟರ್‌ನಲ್ಲಿ ನ್ಯೂರೋ, ಕಾರ್ಡಿಯಾಲಿಕ್ ಸೇರಿದಂತೆ ಗಂಭೀರ ಅಪಘಾತ ಪ್ರಕರಣಗಳಲ್ಲಿ ಗಾಯಗೊಂಡ ವರಿಗೂ ಚಿಕಿತ್ಸೆ ನೀಡಬಹುದಾಗಿದೆ. ಇದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮಾದರಿಯಲ್ಲಿ ಸೇವೆ ನೀಡಲಿದೆ ಎಂದು ಮಾಹಿತಿ ನೀಡಿದರು.

62 ಹೊಸ ಟವರ್‌ಗಳು: ಜಿಲ್ಲೆಯ ಜನರ ಬೇಡಿಕೆಗೆ ಸ್ಪಂದಿಸಿರುವ ಕೇಂದ್ರ ಸರಕಾರ 4ಜಿ ಸೇವೆ ನೀಡುವ 62 ಬಿಎಸ್ಎನ್ಎಲ್ ಟವರ್‌ಗಳನ್ನು ನೀಡಿದ್ದು, ಪ್ರಧಾನಿ ಮೋದಿ ಮತ್ತು ದೂರ ಸಂಪರ್ಕ ಸಚಿವ ಅಶ್ವಿನ್ ವೈಷ್ಣವ್ ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ಸಂಸದ ಪ್ರತಾಪ್ ಸಿಂಹ ಹೇಳಿದರು. ಮಡಿಕೇರಿಗೆ 15, ಸೋಮವಾರಪೇಟೆ 30 ಮತ್ತು ವಿರಾಜಪೇಟೆಗೆ 15 ಹೊಸ ಬಿಎಸ್ಎನ್ಎಲ್ ಟವರ್ ಹಂಚಿಕೆ ಮಾಡಲಾಗಿದೆ. ಇದಲ್ಲದೇ ಹೆಚ್ಚುವರಿಯಾಗಿ ಈಗಾಗಲೇ 8 ಟವರ್‌ಗಳಿಗೆ ಬೇಡಿಕೆ ಬಂದಿದೆ. ಈ ಹಿನ್ನೆಲೆಯಲ್ಲಿ ತಾಪಂ ಇಓಗಳಿಗೆ ಬೇಡಿಕೆಗಳ ಪಟ್ಟಿ ನೀಡುವಂತೆ ಸೂಚಿಸಲಾಗಿದೆ ಎಂದರು.

ಜಿಲ್ಲಾಡಳಿತದ ವತಿಯಿಂದ ಟವರ್ ಅಳವಡಿಕೆಗೆ ಜಾಗ ಕೇಳಲಾಗಿತ್ತು. ಅದರಂತೆ 16 ಕಡೆಗಳಲ್ಲಿ ಅರಣ್ಯ ಇಲಾಖೆ ಅನುಮತಿ ನೀಡಬೇಕಿರುವ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನೂ ಸಲ್ಲಿಸಲಾಗಿದೆ. ಮುಂದಿನ 3 ತಿಂಗಳಲ್ಲಿ ಟವರ್ ಅಳವಡಿಕೆ ಕಾರ್ಯವೂ ನಡೆಯಲಿದೆ. ಟವರ್‌ಗಳಿಗೆ 39 ಬ್ಯಾಟರಿಗಳ ಕೊರತೆ ಇತ್ತು. ಈ ಪೈಕಿ 13 ಬ್ಯಾಟರಿಗಳು ಬಂದಿದ್ದು, 26 ಬ್ಯಾಟರಿಗಳನ್ನು ಒದಗಿಸಲಾಗುತ್ತದೆ ಎಂದು ಭರವಸೆ ನೀಡಿದರು. ನ.1ರ ಒಳಗಾಗಿ ಎಲ್ಲಾ ಟವರ್‌ಗಳನ್ನು ಅಳವಡಿಸುವ ಗುರಿ ಹೊಂದಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ವಕ್ತಾರ ಸುಬ್ರಹ್ಮಣ್ಯ ಉಪಾಧ್ಯಾಯ ಹಾಜರಿದ್ದರು.

ಆನೆಗಳನ್ನು ಕಾಡಿಗೆ ಓಡಿಸುವ ಕಾರ್ಯಾಚರಣೆ

ಗುಡ್ಡೆಹೊಸೂರು, ಜು.28– ಶನಿವಾರ ಮತ್ತು ಭಾನುವಾರ ಎರಡು ದಿನಗಳ ಕಾಲ ತೋಟಗಳಲ್ಲಿ ಬೀಡು ಬಿಟ್ಟಿರುವ ಆನೆಗಳನ್ನು ಮರಳಿ ಕಾಡಿಗೆ ಓಡಿಸುವ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ. ಅತ್ತೂರು ನಲ್ಲೂರು, ಕೊಡಗರಹಳ್ಳಿ, ಮೊದುರು, ಹೋರುರೂ, ಕೇದಕ್ಕಲ್, ಸುಂಠಿಕೊಪ್ಪ, ಪೋನ್ನತ್‌ಮೋಟ್ಟೆ, ಇರಳೆಒಳಮುಡಿ, ಕಂಡೇಕೇರೆ ಗ್ರಾಮದ ಕಾಡಾನೆಗಳನ್ನು ಕಾಡಿಗೆ ಓಡಿಸಲಾಗುತ್ತಿದೆ. ಈ ಸಂದರ್ಭ ತೋಟದ ಮಾಲೀಕರು ಸಹಕರಿಸುವಂತೆ, ಅಲ್ಲದೇ ಸ್ಥಳೀಯರು, ಮಕ್ಕಳು, ಮಹಿಳೆಯರು ಕಾರ್ಮಿಕರು ಎಚ್ಚರವಾಗಿರಲು ಕುಶಾಲನಗರ ವಲಯ ಅರಣ್ಯಾಧಿಕಾರಿಗಳು ಕೋರಿಕೊಂಡಿದ್ದಾರೆ.


ಗಾಂಜಾ ಮಾರಾಟ; ಆರೋಪಿ ಬಂಧನ

ಗೋಣಿಕೊಪ್ಪ ಜು.28– ಪೊನ್ನಂಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿದ್ದಾರೆ.



ಅರ್ವತೊಕ್ಕಲು ಮೈಸೂರಮ್ಮ ನಗರದ ವಿ.ಎಸ್.ಗುರುದತ್ (31) ಬಂಧಿತ ಆರೋಪಿ. ಗೋಣಿ ಕೊಪ್ಪ ಕಡೆಯಿಂದ ಗೂಡ್ಸ್ ಆಟೋದಲ್ಲಿ ಬೆಕ್ಕೆಸೊ ಡ್ಲೂರು, ಕಾನೂರು ಕಡೆಗೆ ಗಾಂಜಾ ಮಾರಾಟ ಮಾಡಲು ತೆರಳುತ್ತಿದ್ದ ಸಂದರ್ಭ ದಾಳಿ ಮಾಡಲಾಗಿದೆ. ಬೆಳಗ್ಗೆ 9.30ರ ಸಮಯದಲ್ಲಿ ಮುಗಟಗೇರಿ ಜಂಕ್ಷನ್ ಬಳಿ ಗೂಡ್ಸ್ ಆಟೋ ಬಂದಾಗ ಪೊಲೀಸರು ಆಟೋ ನಿಲ್ಲಿಸು ವಂತೆ ಕೈ ತೋರಿದ್ದಾರೆ. ಆರೋಪಿ ಆಟೋ ನಿಲ್ಲಿಸದೇ ವೇಗದಿಂದ ಪರಾರಿಯಾಗಲು ಯತ್ನಿಸಿದಾಗ, ಪೊಲೀಸರು ಬೆನ್ನತ್ತಿ ಸೆರೆ ಹಿಡಿದಿದ್ದಾರೆ. ಗೂಡ್ಸ್ ಆಟೋದಲಿದ್ದ 10ಗ್ರಾಂ ತೂಕದ 17 ಗಾಂಜಾ ಪ್ಯಾಕೇಟ್ ಗಳನ್ನು ವಶಪಡಿಸಿ ಕೊಳ್ಳಲಾಗಿದೆ. ಆರೋಪಿಯನ್ನು ಪೊನ್ನಂಪೇಟೆ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಇವರನ್ನು ಗಾಂಜಾ ಮಾರಾಟ ಆರೋಪದಲ್ಲಿ ಗೋಣಿಕೊಪ್ಪ ಪೊಲೀಸರು ಈತನನ್ನು ಈ ಹಿಂದೆ 2 ಬಾರಿ ಬಂಧಿಸಿದ್ದರು. ಎಸ್ಪಿ ರಾಮ ರಾಜನ್, ಅಡಿಷನಲ್ ಎಸ್ಪಿ ಸುಂದರ್‌ರಾಜ್ ನಿರ್ದೇಶನದ ಮೇರೆಗೆ ಡಿವೈಎಸ್ಪಿ ಮೋಹನ್‌ಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಗೋವಿಂದರಾಜು ಮಾರ್ಗದರ್ಶನದಲ್ಲಿ ಪೊನ್ನಂಪೇಟೆ ಉಪನಿರೀಕ್ಷಕ ಲಕ್ಷ್ಮಣ ಕಾಮಣ್ಣವರ್, ಕ್ರೈಮ್ ಸಬ್ ಇನ್ಸ್‌ಪೆಕ್ಟರ್ ಹೆಚ್.ಸಿ.ಸುಬ್ರಮಣ್ಯ, ಸಿಬ್ಬಂದಿ ಮಹದೇಶ್ವರ ಸ್ವಾಮಿ, ಹರೀಶ್, ಪ್ರವೀಣ್, ಗಣೇಶ್, ಪ್ರಮೀಳ, ಭಾಗವಹಿಸಿದ್ದರು.

ಮನೆ ಮೇಲೆ ಭಾರೀ ಗಾತ್ರದ ಮರ ಬಿದ್ದು ಹಾನಿ



ಮಡಿಕೇರಿ, ಜು.28– ನಾಪೋಕ್ಲು ಗ್ರಾಪಂಗೆ ಒಳಪಟ್ಟ ಕೂರುಳಿ ಸುಭಾಷ್ ನಗರಕ್ಕೆ ತೆರಳುವ ರಸ್ತೆಯಲ್ಲಿರುವ ಅರಮನೆ ಪಾಲೆ ಅಪ್ಪು ಹಾಗೂ ಭೀಮಯ್ಯ ಎಂಬುವವರ ವಾಸದ ಮನೆಯ ಮೇಲೆ ಗುರುವಾರ ಬೆಳಗ್ಗೆ ಭಾರೀ ಗಾತ್ರದ ಮರ ಬಿದ್ದು ಮನೆಯ ಚಾವಣಿಗೆ ಅಳವಡಿಸಿದ್ದ ಶೀಟ್‌ಗಳಿಗೆ ಹಾನಿಯಾಗಿ ಅಪಾರ ನಷ್ಟ ಸಂಭವಿಸಿದೆ.

ಬೆಳಗ್ಗೆ ಭೀಮಯ್ಯ ಅವರು ಮಕ್ಕಳನ್ನು ಶಾಲೆಗೆ ಕಳುಹಿಸಲು ತಯಾರಿ ನಡೆಸುವ ಸಂದರ್ಭ ಮನೆಯ ಮೇಲೆ ಏಕಾ ಏಕಿ ಮರ ಬಿದ್ದಿದೆ. ಇದರಿಂದ ಗಾಬರಿಗೊಂಡ ಮನೆ ಮಂದಿ ಮನೆಯಿಂದ ಹೊರ ಗೋಡಿ ಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನಾ ಸ್ಥಳಕ್ಕೆ ನಾಪೋಕ್ಲು ಕಂದಾಯ ಪರಿವೀಕ್ಷಕ ರವಿಕುಮಾರ್, ಗ್ರಾಮ ಲೆಕ್ಕಿಗೆ ಅಮೃತ, ಗ್ರಾಪಂ ಅಧ್ಯಕ್ಷೆ ಎಚ್.ಎಸ್ ಪಾರ್ವತಿ, ಅಭಿವೃದ್ಧಿ ಅಧಿಕಾರಿ ಚೋಂದಕ್ಕಿ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಗ್ರಾಪಂ ಸದಸ್ಯ ಪ್ರತೀಪ್ ಹಾಗೂ ಶಿವಕಾಳಿಯಂಡ ಜಗದೀಶ್ ಅವರುಗಳು ಮನೆಯ ಮೇಲೆ ಬಿದ್ದ ಮರವನ್ನು ಯಂತ್ರೋಪಕರಣಗಳನ್ನು ಬಳಸಿ ತೆರವುಗೊಳಿಸಿದರು. ಬಳಿಕ ಮನೆಯೊಳಗೆ ಮಳೆ ನೀರು ಸೇರದಂತೆ ಟಾರ್ಪಲ್ ಹೊದಿಸಿ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಿದರು. ಬಡ ಕುಟುಂಬದವರಿಗೆ ಸರ್ಕಾರ ಕೂಡಲೇ ಇದರ ನಷ್ಟ ಪರಿಹಾರ ಒದಗಿಸಬೇಕೆಂದು ಪಂಚಾಯತ್ ಸದಸ್ಯ ಪ್ರತೀಪ್ ಮನವಿ ಮಾಡಿದ್ದಾರೆ.

ಮನೆ ಗೋಡೆ ಕುಸಿತ: ನಾಪೋಕ್ಲು ಬಳಿಯ ನರಿಯಂದಡ ಗ್ರಾಪಂ ವ್ಯಾಪ್ತಿಯ ಎಡಪಾಲ ಗ್ರಾಮದಲ್ಲಿ ಬುಧವಾರ ರಾತ್ರಿ ಸುರಿದ ಭಾರಿ ಗಾಳಿ ಮಳೆಗೆ ಗ್ರಾಮದ ನಿವಾಸಿ ಕೆ.ಎ. ಜುನೈದ್ ಎಂಬವರ ಮನೆಯ ಗೋಡೆ ಕುಸಿದು ಬಿದ್ದು, ಮನೆ ಒಳಗೆ ಇದ್ದ ಗೃಹೋಪಯೋಗಿ ವಸ್ತುಗಳಿಗೆ ಹಾನಿ ಸಂಭವಿಸಿ ನಷ್ಟ ಉಂಟಾಗಿದೆ. ಸ್ಥಳಕ್ಕೆ ನಾಪೋಕ್ಲು ಕಂದಾಯ ಪರಿವೀಕ್ಷಕ ರವಿಕುಮಾರ್, ಉಪ ತಹಶೀಲ್ದಾರ್ ಸುನಿಲ್ ಕುಮಾರ್, ಗ್ರಾಮ ಲೆಕ್ಕಿಗ ಜನಾರ್ಧನ, ಪಿಡಿಓ ಆಶಾ ಕುಮಾರಿ, ಸದಸ್ಯ ಮಹಮ್ಮದ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸರ್ಕಾರಿ ದಾಖಲೆಗಳಲ್ಲಿ 'ಕೊಡವ' ಎಂದು ನಮೂದಿಸಲು ಕ್ಯಾಬಿನೆಟ್ ಅಸ್ತು

15 ವರ್ಷಗಳ ಸಿಎನ್‌ಸಿ ಹೋರಾಟಕ್ಕೆ ಸಂದ ಜಯ

ಮಡಿಕೇರಿ, ಜು.28– ಸರ್ಕಾರಿ ದಾಖಲೆಗಳಲ್ಲಿ ಕೊಡವರನ್ನು 'ಕೊಡವ' ಎಂದು ನಮೂದಿಸುವ ಕುರಿತು ಕ್ಯಾಬಿನೆಟ್ ಅನುಮೋದನೆ ನೀಡಿದ್ದು, ಸರ್ಕಾರದ ಈ ಕ್ರಮಕ್ಕೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಶ್ಲಾಘನೆ ವ್ಯಕ್ತಪಡಿಸಿದೆ. ಕಳೆದ 15 ವರ್ಷಗಳ ಸಿಎನ್‌ಸಿಯ ಸತತ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ ಎಂದು ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.

ಕೊಡವರ ಕುಲ ಸಮಸ್ಯೆಗೆ ಸಂಬಂಧಿಸಿದ ಅತಿ ಪ್ರಧಾನ ಬೇಡಿಕೆಗಳಲ್ಲಿ ಒಂದಾದ 'ಕೊಡವ' ಪದವನ್ನು ಕ್ಯಾಬಿನೆಟ್ ನಿರ್ಣಯದ ಮೂಲಕ ಅಧಿಕೃತಗೊಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದಂತೆ ನಡೆದಿದ್ದಾರೆ. 'ಕೊಡವ' ಎನ್ನುವ ಉಜ್ವಲ ಶಾಸ್ತ್ರೀಯ ನಾಮಕ್ಕೆ ಶಾಸನ ಬದ್ಧ ಸ್ಥಿರೀಕರಣ ದೊರೆತ್ತಿದ್ದು, ಇದು ಸಿಎನ್‌ಸಿ ಹೋರಾಟದ ಮಹತ್ವದ ಮೈಲುಗಲ್ಲಾಗಿದೆ.

ಕೊಡವರನ್ನು 'ಕೊಡವ' ಎಂದು ನಮೂದಿಸದೆ 'ಕೊಡಗರು' ಎಂದು ನಮೂದಿಸುವ ಮೂಲಕ ಕೊಡವ ಬುಡಕಟ್ಟು ಆದಿಮ ಸಂಜಾತ ಮೂಲ ನಿವಾಸಿಗಳ ಅಸ್ತಿತ್ವದ ಬಗ್ಗೆ ಆತಂಕ ಮೂಡಿಸಲಾಗುತ್ತಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಸಿಎನ್‌ಸಿ ಸಂಘಟನೆ 2008ರಿಂದಲೇ ಹೋರಾಟವನ್ನು ಆರಂಭಿಸಿತು. ಕೊಡವರ ಭಾವನೆಯನ್ನು ಅರ್ಥ ಮಾಡಿಕೊಂಡು ನಮ್ಮ ಬೇಡಿಕೆಯನ್ನು ಈಡೇರಿಸುವ ಮೂಲಕ ನ್ಯಾಯ ಒದಗಿಸುವ ಕೆಲಸವನ್ನು ಆಡಳಿತ ವ್ಯವಸ್ಥೆಗಳು ಇಲ್ಲಿಯವರೆಗೆ ಮಾಡಿರಲಿಲ್ಲ.

ಆದರೆ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಅವರು ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ ಮುಖ್ಯಮಂತ್ರಿಗಳನ್ನು ಭೇಟಿಯಾದ ನಂತರ ನಡೆದ ಮೊದಲ ಕ್ಯಾಬಿನೆಟ್ ಸಭೆಯಲ್ಲಿ ಕೊಡವರನ್ನು 'ಕೊಡವ' ಎಂದು ನಮೂದಿಸುವ ಕುರಿತು ಅನುಮೋದನೆ ನೀಡಿದೆ. ಇದು ನಮಗೆ ಸಿಕ್ಕ ದೊಡ್ಡ ಜಯವಾಗಿದ್ದು, ಇದಕ್ಕೆ

ಸಿಎಂ, ಶಾಸಕ ಪೊನ್ನಣ್ಣ ಸೇರಿ ಹಲವರಿಗೆ ಸಿಎನ್‌ಸಿ ಅಭಿನಂದನೆ



ತಮ್ಮ ಬೇಡಿಕೆ ಈಡೇರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಅಭಿನಂದಿಸುತ್ತಿರುವ ಸಿಎನ್‌ಸಿಯ ಎನ್.ಯು. ನಾಚಪ್ಪ

ಕಾರಣಕರ್ತರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಎ.ಎಸ್.ಪೊನ್ನಣ್ಣ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರುಗಳಾಗಿದ್ದ ಡಾ.ದ್ವಾರಕನಾಥ್, ಡಾ.ಜಯಪ್ರಕಾಶ್ ಹೆಗ್ಡೆ, ಹೈಕೋರ್ಟ್‌ನ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್, ನ್ಯಾಯವಾದಿ ಬಲ್ಲಚಂಡ ಬೆಳ್ಳಿಯಪ್ಪ ಹಾಗೂ ತಮ್ಮ ಸುದೀರ್ಘ ಹೋರಾಟದಲ್ಲಿ ತಾಳ್ಮೆಯಿಂದ ನಿರಂತರವಾಗಿ ಕೈಜೋಡಿಸಿದ ಸಿಎನ್‌ಸಿ ಸ್ವಯಂ ಸೇವಕರು, ಅಭಿಮಾನಿಗಳು, ಪರೋಕ್ಷ ಮತ್ತು ನೇರವಾಗಿ ಬೆಂಬಲಿಸಿದವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಹೋರಾಟದ ಹಾದಿ: 2008ರಲ್ಲಿ ಡಾ.ದ್ವಾರಕಾನಾಥ್ ನೇತೃತ್ವದ ಆಯೋಗಕ್ಕೆ ಸಿಎನ್‌ಸಿ ಮನವಿ ಸಲ್ಲಿಸಿದ್ದು, 2009ರಲ್ಲಿ ಆಯೋಗವು ಕೊಡಗಿಗೆ ಭೇಟಿ ನೀಡಿತ್ತು. ಆಯೋಗದ ಕರೆಯ ಮೇರೆಗೆ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮತ್ತವರ ತಂಡ ಬೆಂಗಳೂರಿನಲ್ಲಿರುವ ಆಯೋಗದ ಕಚೇರಿಯಲ್ಲಿನ ನ್ಯಾಯಾಲಯದಲ್ಲಿ ಕೊಡವ ಪದ ಬಳಕೆಯ ಸಮಗ್ರ ಚಾರಿತ್ರಿಕ ಹಿನ್ನೆಲೆ ಮತ್ತು ದಾಖಲಾತಿಯೊಂದಿಗೆ ಜ್ಞಾಪನಾ ಪತ್ರ ಸಲ್ಲಿಸಿತ್ತು. 2010ರಲ್ಲಿ ಡಾ.ದ್ವಾರಕಾನಾಥ್ ಆಯೋಗ ಎಲ್ಲಾ ಸರ್ಕಾರಿ ದಾಖಲೆಗಳಲ್ಲಿ 'ಕೊಡಗರು' ಬದಲಿಗೆ 'ಕೊಡವ' ಪದ ಬಳಕೆಗೆ ಶಿಫಾರಸ್ಸು ಮಾಡಿತ್ತು ಇದಕ್ಕೆ ಸ್ಪಂದನೆ ಸಿಗದೆ ಇದ್ದಾಗ 2014ರಲ್ಲಿ ಸಿಎನ್‌ಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. 2016ರಲ್ಲಿ ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆಯನ್ನು ಸಲ್ಲಿಸಿತಾದರೂ ಯಾವುದೇ ಸ್ಪಂದನೆ ದೊರೆಯದೆ ಆದೇಶದ ಪ್ರತಿ ಕಸದ ಬುಟ್ಟಿ ಸೇರಿತ್ತು. 2018ರಲ್ಲಿ ಮತ್ತೆ ಕೊಡವ ನ್ಯಾಷನಲ್ ಕೌನ್ಸಿಲ್ ಕೋರ್ಟ್ ಮೊರೆ ಹೋಯಿತು. 2021 ಡಿ.8ರಂದು ಹೈಕೋರ್ಟ್‌ನ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಪೀಠವು 'ಕೊಡಗರು' ಬದಲಿಗೆ 'ಕೊಡವ' ಪದ ಬಳಸುವಂತೆ ಮಹತ್ವದ ತೀರ್ಪು ನೀಡಿತ್ತು. 2022 ರಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರಿಗೆ ನ್ಯಾಯಾಲಯದ ಆದೇಶದೊಂದಿಗೆ ಜ್ಞಾಪನಾ ಪತ್ರವನ್ನು ಸಲ್ಲಿಸಲಾಯಿತು. ನಂತರ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರ ಮೂಲಕ ಅಂದಿನ ಸಿ.ಎಂ. ಬೊಮ್ಮಾಯಿ ಅವರಿಗೆ ಪತ್ರ ತಲುಪಿತು. ಆದರೂ ಆಗಿನ ಕೊಡವ ಸ್ನೇಹಿ ಎಂದು ಕರೆಸಿಕೊಳ್ಳುತ್ತಿದ್ದ ಸರ್ಕಾರ ಬದ್ಧತೆ ತೋರದೆ ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಿತ್ತು. ಈ ಬೆಳವಣಿಗೆ ಕೊಡವರ ಭಾವನೆಗೆ ಧಕ್ಕೆಯನ್ನುಂಟು ಮಾಡಿತ್ತು ಎಂದು ನಾಚಪ್ಪ ಉಲ್ಲೇಖಿಸಿದ್ದಾರೆ. ಸಂವಿಧಾನದ ಚೌಕಟ್ಟಿನಲ್ಲಿರುವ ಸಿಎನ್‌ಸಿಯ ನ್ಯಾಯ ಸಮ್ಮತವಾದ ಇತರ ಬೇಡಿಕೆಗಳನ್ನು ಕೂಡ ಮುಂದಿನ ದಿನಗಳಲ್ಲಿ ಸರ್ಕಾರ ಈಡೇರಿಸುತ್ತದೆ ಎನ್ನುವ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.

ಮಾದಾಪುರ ಗ್ರಾಪಂ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ರೂಪೇಶ್, ಉಪಾಧ್ಯಕ್ಷೆಯಾಗಿ ತಾಯಮ್ಮ ಆಯ್ಕೆ



ಚಾಮರಾಜನಗರ, ಜು.28– ತಾಲೂಕಿನ ಮಾದಾಪುರ ಗ್ರಾಪಂ ಅಧಿಕಾರ ಕಾಂಗ್ರೆಸ್ ತೆಕ್ಕೆಗೆ ಬಂದಿದ್ದು, ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಮುಖಂಡ ಕಾಡಹಳ್ಳಿ ರೂಪೇಶ್ ಆಯ್ಕೆಯಾದರೆ, ಉಪಾಧ್ಯಕ್ಷೆಯಾಗಿ ತಾಯಮ್ಮ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ರೂಪೇಶ್, ಜಿ. ಮಂಜುನಾಥ್ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ತಾಯಮ್ಮ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ಬಳಿಕ ನಡೆದ ಚುನಾವಣೆಯಲ್ಲಿ 13 ಮತ ಪಡೆದ ರೂಪೇಶ್ ಅಧ್ಯಕ್ಷರಾದರೇ, 3 ಮತ ಪಡೆದ ಮಂಜುನಾಥ್ ಪರಾಭವಗೊಂಡರು. ತಾಯಮ್ಮ ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಚುನಾವಣಾಧಿಕಾರಿ ಟಿ.ಎಂ.ಜಯಶೀಲ ಘೋಷಿಸಿದರು.

ನೂತನ ಅಧ್ಯಕ್ಷ ರೂಪೇಶ್ ಮಾತನಾಡಿ, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಮಾರ್ಗದರ್ಶನದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸರ್ವ ಸದಸ್ಯರ ಬೆಂಬಲದೊಂದಿಗೆ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು. ಈ ವೇಳೆ ಮಾಜಿ ಉಪಾಧ್ಯಕ್ಷ ಮೋಹನ್ ಕುಮಾರ್, ಸದಸ್ಯರಾದ ಲಿಂಗರಾಜು, ಸಿದ್ದರಾಜಮ್ಮ, ರಾಜೇಗೌಡ, ಪುಟ್ಟಣ್ಣ, ಸಿದ್ದರಾಜು, ಭುವನೇಶ್ವರಿ, ಸೈಯದ್ ನಸ್ರುಲ್ಲಾ, ಶಿವಮ್ಮ, ಜ್ಯೋತಿ, ಮಹದೇವಮ್ಮ ಪಿಡಿಓ ಹನುಮಂತರಾಯ ಇದ್ದರು.

ವಿಜಯೋತ್ಸವ: ಗ್ರಾಪಂ ಅಧ್ಯಕ್ಷ–ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಸದಸ್ಯರಾದ ರೂಪೇಶ್ ಮತ್ತು ತಾಯಮ್ಮ ಆಯ್ಕೆಯಾಗುತ್ತಿದ್ದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಮುಖಂಡರಾದ ತಾಪಂ ಮಾಜಿ ಸದಸ್ಯ ಎಸ್.ರಾಜು, ಗ್ರಾಪಂ ಮಾಜಿ ಅಧ್ಯಕ್ಷ ಸುಬ್ಬೇಗೌಡ, ಮಹದೇವಸ್ವಾಮಿ, ಮರಿಸ್ವಾಮಿ, ಗುರುಸ್ವಾಮಿ, ಮಹದೇವು, ರಾಜಶೇಖರ್, ಸ್ಟೀಫನ್, ಮಹದೇವಶೆಟ್ಟಿ, ನಂಜುಂಡಯ್ಯ, ಪ್ರಕಾಶ್ ಇತರರಿದ್ದರು.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜು.28– ತೋಟಗಾರಿಕೆ ಇಲಾಖೆ ಪ್ರಸಕ್ತ ಸಾಲಿನ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಎಲ್ಲಾ ವರ್ಗದ ರೈತರಿಗೆ ಸಹಾಯಧನ ನೀಡಲು ಅರ್ಜಿ ಆಹ್ವಾನಿಸಿದೆ.

ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಅಂಗಾಂಶ ಕೃಷಿ ಬಾಳೆ, ಹೈಬ್ರಿಡ್ ತರಕಾರಿ, ಬೆಣ್ಣೆ ಹಣ್ಣು, ಸೇವಂತಿಗೆ ಮತ್ತು ಚೆಂಡು ಹೂ ಬೆಳೆಗಳ ಬೇಸಾಯ ಕೈಗೊಳ್ಳಲು ಪ್ರೋತ್ಸಾಹಧನ, ಕೃಷಿ ಹೊಂಡಾ ಯೋಜನೆಯಡಿ 20*20*3 ಮೀ ಅಳತೆಯ ನೀರು ಸಂಗ್ರಹಣಾ ಘಟಕ ನಿರ್ಮಿಸಲು 75 ಸಾವಿರ ರೂ. ಸಹಾಯಧನ ನೀಡಲಾಗುವುದು.

ಪ್ಲಾಸ್ಟಿಕ್ ಹೊದಿಕೆ ಕಾರ್ಯಕ್ರಮದಡಿ ತರಕಾರಿ ಹಾಗೂ ಇತರೆ ತೋಟಗಾರಿಕೆ ಬೆಳೆಗಳಿಗೆ ಸಂರಕ್ಷಿತ ಬೇಸಾಯದಡಿ ಪ್ಲಾಸ್ಟಿಕ್ ಹೊದಿಕೆ ಅಳವಡಿಸಲು ಪ್ರತಿ ಹೆಕ್ಟೇರ್‌ಗೆ 16 ಸಾವಿರ ರೂ. ಸಹಾಯಧನ, ಪ್ಯಾಕ್ ಹೌಸ್ ಘಟಕ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಕಟಾವಿನ ನಂತರ ಹೊಲದಲ್ಲಿ ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆಗಾಗಿ 9*6*3 ಮೀ ಅಳತೆಯ ಪ್ಯಾಕ್ ಹೌಸ್ ಘಟಕ ನಿರ್ಮಿಸಲು 2 ಲಕ್ಷ ರೂ. ಸಹಾಯಧನ, ತೋಟಗಾರಿಕೆ ಬೆಳೆಯಾದ ಈರುಳ್ಳಿ ಬೆಳೆಯನ್ನು ಕಟಾವಿನ ನಂತರ ಹೊಲದಲ್ಲಿ ಶೇಖರಣೆ ಮಾಡಲು ಹಾಗೂ ಕೊಯ್ಲೋತ್ತರ ಚಟುವಟಿಕೆ ಕೈಗೊಳ್ಳಲು 12*3.60*2.10 ಮೀ ಅಳತೆಯ ಈರುಳ್ಳಿ ಶೇಖರಣಾ ಘಟಕ ನಿರ್ಮಿಸಲು 87,500 ರೂ. ಸಹಾಯಧನ ನೀಡಲಾಗುವುದು.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಎಲ್ಲಾ ವರ್ಗದ ರೈತರಿಗೂ ಶೇ.50 ರಂತೆ ಸಹಾಯಧನ ನೀಡಲಾಗುವುದು. ಆಸಕ್ತ ರೈತರು ಕೂಡಲೇ ಆಯಾ ತಾಲೂಕಿನ ತೋಟಗಾರಿಕೆ ಇಲಾಖೆಗಳಿಗೆ ಅರ್ಜಿ ಸಲ್ಲಿಸಿ ಯೋಜನೆ ಸದುಪಯೋಗ ಪಡೆದುಕೊಳ್ಳುವಂತೆ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಕ್ಕಳ ಹಕ್ಕುಗಳ ಬಗ್ಗೆ ಶಾಲಾ ಮಟ್ಟದಲ್ಲೇ ಅರಿವು ಅಗತ್ಯ

ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್.ಭಾರತಿ



ಚಾಮರಾಜನಗರ, ಜು.28– ಮಕ್ಕಳ ಹಕ್ಕುಗಳ ಬಗ್ಗೆ ಶಾಲಾ ಮಟ್ಟದಲ್ಲೇ ತಿಳುವಳಿಕೆ ನೀಡುವುದರಿಂದ ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಸಾಧ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವಕೀಲರ ಸಂಘ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಮಾನವ ಕಳ್ಳ ಸಾಗಾಣೆ ತಡೆ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಕಂಡುಬರುವ ಮಾನವ ಕಳ್ಳ ಸಾಗಾಣೆ, ಬಾಲ್ಯ ವಿವಾಹ, ಪೋಕ್ಸೋ ಪ್ರಕರಣಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಜಾಗೃತರಾಗಬೇಕು. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಮಾನವ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು. ಶಿಕ್ಷಕರು ಸಹ ಮಕ್ಕಳ ಮೇಲಿನ ಹಕ್ಕುಗಳ ಬಗ್ಗೆ ಸಂಪೂರ್ಣ ತಿಳಿದಾಗ ಬಾಲ್ಯವಿವಾಹ ಪ್ರಕರಣ ತಡೆಯಬಹುದು ಎಂದರು.

> ಬಾಲ್ಯವಿವಾಹ, ಪೋಕ್ಸೋ ಪ್ರಕರಣ ಹಾಗೂ ಮಾನವ ಕಳ್ಳ ಸಾಗಾಣಿಕೆಯಲ್ಲಿ ಹೆಚ್ಚಾಗಿ ಮಹಿಳೆಯರು, ಮಕ್ಕಳೇ ಬಲಿಪಶುಗಳಾಗುತ್ತಿದ್ದಾರೆ. ವಿದ್ಯಾರ್ಥಿಗಳು ಶಾಲಾ ರಾಯಭಾರಿಗಳಾಗಿ ಸಮಾಜದಲ್ಲಿ ನಡೆಯುವ ಬಾಲ್ಯವಿವಾಹದಂತಹ ಪ್ರಕರಣಗಳ ಬಗ್ಗೆ ಧ್ವನಿ ಎತ್ತಬೇಕು. ಶಿಕ್ಷಕರು ಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಮಕ್ಕಳ ಮೇಲೆ ನಡೆಯುವ ಗಂಭೀರ ಪ್ರಕರಣಗಳ ಕುರಿತು ಮನವರಿಕೆ ಮಾಡಿಕೊಡಬೇಕು. ಶಿಕ್ಷಣದಿಂದ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಪ್ಪಿಸಬಹುದು. - **ಎಂ.ಶ್ರೀಧರ್,** ಹಿರಿಯ ಸಿವಿಲ್ ನ್ಯಾಯಾಧೀಶ.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತನಾಡಿ, ಮಕ್ಕಳ ರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿ. ಸಮಾಜದಲ್ಲಿ ಮಕ್ಕಳ ಮೇಲೆ ನಡೆಯುವ ಹೀನ ಕೃತ್ಯಗಳನ್ನು ತಡೆಯಲು ಎಲ್ಲರೂ ಶ್ರಮಿಸಬೇಕು. ಬಾಲ್ಯವಿವಾಹ ಸಮಾಜದಲ್ಲಿ ಕಂಡುಬರುವ ಒಂದು ಅನಿಷ್ಟ ಪದ್ಧತಿಯಾಗಿದೆ. ಮಕ್ಕಳ ಹಕ್ಕುಗಳು, ಮಕ್ಕಳ ಕಾನೂನುಗಳನ್ನು ಗೌರವಿಸಬೇಕು ಎಂದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ. ಸವಿತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಗೀತಾಲಕ್ಷ್ಮಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಸರಸ್ವತಿ, ಪಿಎಂಎಸ್‌ಆರ್ ಸಂಸ್ಥೆ ಆಡಿಸ್ ಅರ್ನಾಲ್ಡ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್. ಚೆಲುವರಾಜು, ಕಾನೂನು ಸಲಹೆಗಾರರಾದ ರೂಪಶ್ರೀ, ಮಂಜುಳಾ, ಕಾರ್ಮಿಕ ಇಲಾಖೆ ಮಹೇಶ್ ಇತರರಿದ್ದರು.

ಕಾರ್ಯಕ್ರಮಕ್ಕೂ ಮುನ್ನಾ ಜಿಲ್ಲಾಡಳಿತ ಭವನದ ಆವರಣದಲ್ಲಿ ಮಾನವ ಕಳ್ಳ ಸಾಗಾಣಿಕೆ ತಡೆ ಕುರಿತ ಅರಿವು ಜಾಥಾಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಇಂದು ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ

ಚಾಮರಾಜನಗರ, ಜು.28– ಬೆಳ್ಳಿ ಮಹೋತ್ಸವ ಸಂಭ್ರಮದಲ್ಲಿರುವ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಗರದಲ್ಲಿ ಶನಿವಾರ ಪತ್ರಿಕಾ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ನಗರದ ವರ್ತಕರ ಭವನದಲ್ಲಿ ಬೆಳಗ್ಗೆ 9.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು ಡಿವಿಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಿದ್ದು, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಹೆಚ್.ಎಂ.ಗಣೇಶಪ್ರಸಾದ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ವಿವಿಧ ಕ್ರೀಡಾಕೂಟಗಳಲ್ಲಿ ಜಯಗಳಿಸಿದ ಪತ್ರಕರ್ತರು, ಅವರ ಕುಟುಂಬದ ಸದಸ್ಯರು ಹಾಗೂ ಕ್ರೀಡಾಪಟುಗಳಿಗೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಬಹುಮಾನ ವಿತರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ವರ್ತಕರ ಸಂಘದ ಅಧ್ಯಕ್ಷ ರಾಜಶೇಖರ್ ಭಾಗವಹಿಸಲಿದ್ದಾರೆ.

ಬೈಲೂರು ಗ್ರಾಪಂಗೆ ಸದಾನಂದಮೂರ್ತಿ ಅಧ್ಯಕ್ಷ



ಉಪಾಧ್ಯಕ್ಷೆಯಾಗಿ ಸಿದ್ದಮ್ಮ ಅವಿರೋಧ ಆಯ್ಕೆ

ಹನೂರು, ಜು.28– ತಾಲೂಕಿನ ಬೈಲೂರು ಗ್ರಾಪಂ ಅಧ್ಯಕ್ಷರಾಗಿ ಸದಾನಂದ ಮೂರ್ತಿ, ಉಪಾಧ್ಯಕ್ಷೆಯಾಗಿ ಸಿದ್ದಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸದಾನಂದಮೂರ್ತಿ, ಉಪಾಧ್ಯಕ್ಷ ಸ್ಥಾನಕ್ಕೆ ಸಿದ್ದಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಲೋಕೋಪಯೋಗಿ ಇಲಾಖೆ ಸಹಾಯಕ ಇಂಜಿನಿಯರ್ ಮಹೇಶ್ ಘೋಷಿಸಿದರು. ನೂತನ ಅಧ್ಯಕ್ಷ, ಉಪಾಧ್ಯಕ್ಷೆ ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಹಾಗೂ ಗ್ರಾಮಸ್ಥರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ಈ ವೇಳೆ ಒಡೆಯರಪಾಳ್ಯ ಗ್ರಾಮದ ಸೋಮಣ್ಣ, ಕಣ್ಣಪ್ಪ, ಚೇತನ್ ಸೇರಿದಂತೆ ಹಾಜರಿದ್ದರು.

ನಗದು ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಚಾಮರಾಜನಗರ, ಜು.28– ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ ನೀಡಲಾಗುವ ಜನರಲ್ ಕೆ.ಎಸ್.ತಿಮ್ಮಯ್ಯ ನಗದು ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿ ಮೈಸೂರು ಇವರಿಂದ ಉಚಿತವಾಗಿ ಪಡೆದು ಭರ್ತಿ ಮಾಡಿ ಅ.30 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮೈಸೂರಿನ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಕಚೇರಿ ದೂ: 08212–2425240 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜು.28– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಸೋಮವಾರಪೇಟೆ ಮತ್ತು ರಾಮಸಮುದ್ರ ಫೀಡರ್‌ಗಳಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಜು.30ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಚಾಮರಾಜ ನಗರ ಪಟ್ಟಣ, ರಾಮಸಮುದ್ರ, ಹೌಸಿಂಗ್ ಬೋರ್ಡ್, ನ್ಯಾಯಾಲಯ ಸುತ್ತಮುತ್ತಲ ಪ್ರದೇಶ ಮತ್ತು ಉತ್ತುವಳ್ಳಿ ಕೈಗಾರಿಕಾ ಪ್ರದೇಶ, ಯಡಪುರ ಮೆಡಿಕಲ್ ಕಾಲೇಜು ಆಸ್ಪತ್ರೆ ಮತ್ತು ಕಾಲೇಜು, ಗಾಳಿಪುರ, ಸತ್ತಿ ರಸ್ತೆ, ಸೋಮವಾರ ಪೇಟೆ ಭಾಗದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಮ್ಸ್ ನಿರ್ದೇಶಕರಾಗಿ ಡಾ.ಮಂಜುನಾಥ್ ಅಧಿಕಾರ ಸ್ವೀಕಾರ



ಚಾಮರಾಜನಗರ, ಜು.28– ಚಾಮರಾಜನಗರ ವೈದ್ಯಕೀಯ ವಿಜ್ಞಾನ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಬೋಧನಾ ಆಸ್ಪತ್ರೆ ನೂತನ ನಿರ್ದೇಶಕರಾಗಿ ಡಾ.ಹೆಚ್.ಜಿ. ಮಂಜುನಾಥ್ ಅಧಿಕಾರ ಸ್ವೀಕರಿಸಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅರವಳಿಕೆ ವಿಭಾಗದ ಮುಖ್ಯಸ್ಥ ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ಹೆಚ್.ಜಿ. ಮಂಜುನಾಥ್ ಅವರನ್ನು ಸಿಮ್ಸ್ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದ್ದು, ಗುರುವಾರ ನಿರ್ಗಮಿತ ನಿರ್ದೇಶಕ ಡಾ.ಸಂಜೀವ್ ಅವರಿಂದ ಅಧಿಕಾರ ವಹಿಸಿಕೊಂಡರು.

ಇನ್ನೂ ಡಾ.ಸಂಜೀವ್ ಅವರನ್ನು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ. ಡಾ.ಸಂಜೀವ್ ಅವರನ್ನು ವರ್ಗಾವಣೆ ಮಾಡುವಂತೆ ಈ ಹಿಂದೆ ಸಿಮ್ಸ್‌ನಲ್ಲಿ ಪ್ರತಿಭಟನೆಗಳು ನಡೆದಿದ್ದವು. ಅಲ್ಲದೇ ಇತ್ತೀಚೆಗೆ ಡಾ.ಸಂಜೀವ್ ವೈದ್ಯರ ಜೊತೆ ಮಾತನಾಡುತ್ತಾ ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ್ದಾರೆ ಎಂದು ದಲಿತ ಸಂಘಟನೆಗಳು ಬೃಹತ್ ಪ್ರತಿಭಟನೆ ನಡೆಸಿ ಡಾ.ಸಂಜೀವ್ ಅವರನ್ನು ವಜಾ ಮಾಡಬೇಕು ಎಂದು ಆಗ್ರಹಿಸಿದ್ದರು.

ಈ ವಿಚಾರ ಸ್ಥಳೀಯ ಶಾಸಕರ ಮೂಲಕ ಮುಖ್ಯಮಂತ್ರಿಗಳಿಗೆ ತಲುಪಿ ಡಾ.ಸಂಜೀವ್ ಅವರನ್ನು ಸಿಮ್ಸ್ ನಿರ್ದೇಶಕ ಸ್ಥಾನದಿಂದ ವರ್ಗಾವಣೆ ಮಾಡುವಂತೆ ಒತ್ತಡ ಹಾಕಲಾಗಿತ್ತು. ಅದರಂತೆ ಡಾ. ಸಂಜೀವ್ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಆ ಸ್ಥಾನಕ್ಕೆ ನಿರೀಕ್ಷೆಯಂತೆ ಡಾ.ಹೆಚ್.ಜಿ.ಮಂಜುನಾಥ್ ಬಂದಿದ್ದಾರೆ.

ಮಧುಮೇಹ ನಿಯಂತ್ರಣಕ್ಕೆ ಆಹಾರ, ಜೀವನ ಪದ್ಧತಿ ಬದಲಿಸಿಕೊಳ್ಳಿ



ಮೈಸೂರು, ಜು.28(ಎಸ್‌ಪಿಎನ್)– ಮಧುಮೇಹ ನಿಯಂತ್ರಣಕ್ಕೆ ಮಾತ್ರೆಗಳೇ ಮದ್ದಲ್ಲ. ಬದಲಾಗಿ, ಶಿಸ್ತುಬದ್ಧ ಆಹಾರ ಕ್ರಮ, ವ್ಯಾಯಾಮ ಹಾಗೂ ಒತ್ತಡ ರಹಿತ ಬದುಕು ರೂಪಿಸಿಕೊಂಡರೆ ಮಧುಮೇಹವನ್ನು ಮಣಿಸಲು ಸಾಧ್ಯವಿದೆ ಎಂದು ಮಧುಮೇಹ ತಜ್ಞ ಡಾ.ಮಲ್ಹಾರ್ ಗನ್ಲಾ ಅಭಿಪ್ರಾಯಪಟ್ಟರು. ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಕ್ಲಬ್ ಆಫ್ ಮೈಸೂರು ಸೌತ್–ಈಸ್ಟ್ ವತಿಯಿಂದ ಆಯೋಜಿಸಲಾಗಿದ್ದ 'ಮಧುಮೇಹ ಮತ್ತು ಸ್ಥೂಲಕಾಯತೆಯ ಹಿಮ್ಮುಖ' ಕಾರ್ಯಾಗಾರದಲ್ಲಿ ಮಾತನಾಡಿದರು.

ಮಧುಮೇಹ ನಿಯಂತ್ರಣಕ್ಕೆ ನಾಲ್ಕು ಪ್ರಮುಖ ಸೂತ್ರಗಳನ್ನು ಅನುಸರಿಸಬೇಕು. ಆಹಾರ ಕ್ರಮ ಮತ್ತು ಜೀವನ ಕ್ರಮ ಬದಲಾವಣೆ ಮಾಡಿಕೊಳ್ಳದಿದ್ದರೆ, ಘೋರ ಪರಿಣಾಮ ಎದುರಿಸಬೇಕು. ಇದು ಕಾಯಿಲೆ ಅಲ್ಲದಿದ್ದರೂ ಅಡಿಯಿಂದ ಮುಡಿಯವರೆಗೂ ದುಷ್ಪರಿಣಾಮ ಬೀರುತ್ತದೆ. ಒಮ್ಮೆ ಮಧುಮೇಹ ಬಂದರೆ ಅದು ಜೀವನ ಸಂಗಾತಿ ಇದ್ದಂತೆ ಇರುತ್ತದೆ. ನಮ್ಮ ಕೊನೆಯ ಉಸಿರಿರುವ ಜೊತೆಯಲ್ಲೇ ಇರುತ್ತದೆ. ಅದರ ಜೊತೆ ಬದುಕುವುದನ್ನು ಕಲಿಯಬೇಕು ಎಂದು ಕಿವಿಮಾತು ಹೇಳಿದರು. ವಿಶೇಷವಾಗಿ ನಾವು ಸೇವಿಸುವ ಆಹಾರದಲ್ಲಿ ಸಕ್ಕರೆ ಅಂಶ, ಪ್ರೊಟೀನ್, ಕೊಬ್ಬಿನ ಅಂಶ, ವಿಟಮಿನ್ (ಖನಿಜ ಲವಣಗಳು), ನೀರು ಮತ್ತು ನಾರಿನ ಅಂಶಗಳು ಇರಬೇಕು ಎಂದು ತಿಳಿಸಿದರು. ಈ ವೇಳೆ ರೋಟರಿ ಕ್ಲಬ್ ಆಫ್ ಮೈಸೂರು ಸೌತ್–ಈಸ್ಟ್ ಅಧ್ಯಕ್ಷ ಕೆ.ಎನ್.ಮುರುಳಿಧರ ಮತ್ತು ಕಾರ್ಯದರ್ಶಿ ರೊ.ಎನ್.ಟಿ.ಗಿರೀಶ್ ಉಪಸ್ಥಿತರಿದ್ದರು.

ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ಪರಿಚಯ ಕಾರ್ಯಕ್ರಮ



ಮೈಸೂರು. ಜು.28(ಸಿಎನ್)– ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ಡಿಪ್ಲೊಮಾ ಕಾಲೇಜಿನಲ್ಲಿ ಆ.5ವರೆಗೆ ನಡೆಯುತ್ತಿರುವ 'ಪ್ರಥಮ ವರ್ಗದ ವಿದ್ಯಾರ್ಥಿಗಳ ಪರಿಚಯಾತ್ಮಕ' ಕಾರ್ಯಕ್ರಮ ಅಂಗವಾಗಿ ಶುಕ್ರವಾರದಂದು, ವಿಶೇಷ ಚೇತನ ವಿದ್ಯಾರ್ಥಿಗಳು ವಿವಿಧ ಚಟುವಟಿಕೆಗಳಲ್ಲಿ ಭಾಗಿಯಾಗುವ ಮೂಲಕ ತಮ್ಮಲ್ಲಿನ ಪ್ರತಿಭೆ ಪ್ರದರ್ಶಿಸಿದರು. ವಿಶೇಷ ಚೇತನ ಹಿರಿಯ ವಿದ್ಯಾರ್ಥಿಗಳ ಸಂಘದಿಂದ, ನೂತನವಾಗಿ ಆಗಮಿಸಿರುವ ಡಿಪ್ಲೊಮಾ ಪ್ರಥಮ ವರ್ಗದ ವಿದ್ಯಾರ್ಥಿಗಳಿಗೆ, ಕಾಲೇಜಿನ ಬಗ್ಗೆ ಪರಿಚಯಾತ್ಮಕ ಕಾರ್ಯಕ್ರಮ ನೆರವೇರಿಸಿದರು. ಪ್ರಥಮ ವರ್ಗದ ವಿದ್ಯಾರ್ಥಿಗಳು ಲಡಾಕ್, ಉತ್ತರಾಖಂಡ, ಕೇರಳ, ತಮಿಳುನಾಡು, ಉತ್ತರ ಕರ್ನಾಟಕ ಭಾಗಗಳಿಂದ ಬಂದಿರುವುದು ವಿಶೇಷವಾಗಿದೆ.

ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿಗಳು ತಮ್ಮ ಅನುಭವ, ಕಲಿಕಾ ಕೌಶಲ್ಯಾತ್ಮಕ ವಿಚಾರಗಳ ಬಗ್ಗೆ ಹಂಚಿಕೊಂಡರು.

ಪ್ರತಿಭೆಗಳ ಆವಿಷ್ಕಾರ: ನೂತನ ವಿದ್ಯಾರ್ಥಿಗಳು ರಂಗೋಲಿ, ಮೆಹಂದಿ, ಚಿತ್ರಕಲೆ, ಸಂಗೀತ, ಗಾಯನ, ನೃತ್ಯ, ಏಕಪಾತ್ರಾಭಿನಯ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

ಯೋಗಾ ಮತ್ತು ದೈಹಿಕ ಚಟುವಟಿಕೆ: ಯೋಗ ಮತ್ತು ಕರಾಟೆ ನಿರ್ದೇಶಕ ಕೆ.ವಿ.ಉಮೇಶ್ ಅವರು, ಯೋಗ, ಕರಾಟೆ ಮತ್ತು ಕಥಾ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಟ್ಟರು. ಅಲ್ಲದೇ ವಿದ್ಯಾರ್ಥಿನಿಯರು ಆಪತ್ತಿನಲ್ಲಿದ್ದಾಗ ಆತ್ಮ ರಕ್ಷಣೆ (ಸೆಲ್ಫ್ ಡಿಫೆನ್ಸ್) ಬಗ್ಗೆ ತಿಳಿಸಿದರು.

12 ದಿನಗಳ ಕಾಲ ನಡೆಯುವ ಕಾರ್ಯಕ್ರಮವು ಆ.4ರಂದು ಕೊನೆಗೊಂಡು, ಆ.5ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಈ ವೇಳೆ ಪ್ರಾಂಶುಪಾಲ ಬಿ.ಇಳಂಗೋವನ್, ಬಸವರಾಜು ಹಾಗೂ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಇದ್ದರು.

ಮೂರನೇ ಪುಟದಿಂದ

ಕರ್ನಾಟಕ ಶಿಕ್ಷಣ ನೀತಿ ಜಾರಿ

ನಮ್ಮ ಒಕ್ಕೂಟ ವ್ಯವಸ್ಥೆ, ಪ್ರಜಾ ತಾಂತ್ರಿಕ, ವೈಜ್ಞಾನಿಕ, ಧರ್ಮನಿರಪೇಕ್ಷ ಶಿಕ್ಷಣದ ಮೇಲಿನ ದಾಳಿಯಾಗಿದೆ ಎಂದು ಕಾಂಗ್ರೆಸ್ ಹಾಗೂ ಅದರ ಅಂಗ ಸಂಸ್ಥೆಗಳು ಅಭಿಪ್ರಾಯಪಟ್ಟಿದ್ದವು. 2020ರ ಈ ನೀತಿಯು ಪೂರ್ವ ಪ್ರಾಥಮಿಕ ಹಂತದಿಂದಲೇ ಇಡೀ ಶಿಕ್ಷಣ ವ್ಯವಸ್ಥೆಯ ವ್ಯಾಪಾರೀಕರಣ ಮತ್ತು ಕೋಮುವಾದಿಕರಣ ಹೊಂದಿದೆ ಎಂಬುದನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರ ರದ್ದುಪಡಿಸಿ, ಹೊಸ ನೀತಿ ರೂಪಿಸಿ ಜಾರಿಗೊಳಿಸಲು ಮುಂದಾಗಿದೆ. ಹಿಂದಿನ ಸರ್ಕಾರ ಪಠ್ಯಪುಸ್ತಕ ಮರು ಪರಿಷ್ಕರಣೆ ಹೆಸರಿನಲ್ಲಿ ಅಸಹಿಷ್ಣುತೆ, ಪ್ರತಿಗಾಮಿ ಚಿಂತನೆ ಹಾಗೂ ಕೋಮುವಾದಿ ಚಿಂತನೆಗಳನ್ನು ಸೇರಿಸಿದ್ದಾರೆ ಎಂಬ ವಾದವನ್ನು ಅಂದು ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಮಾಡಿತ್ತು. ಅಧಿಕಾರಕ್ಕೆ ಬರುತ್ತಿದ್ದಂತೆ ಬಿಜೆಪಿ ಆಡಳಿತದಲ್ಲಿ ತೆಗೆದುಕೊಂಡಿದ್ದ ಕೆಲವು ಪ್ರಮುಖ ನಿರ್ಧಾರಗಳಿಗೆ ಬಜೆಟ್ ಅಧಿವೇಶನದಲ್ಲಿ ತಿದ್ದುಪಡಿ ತಂದು ಕಾಯ್ದೆಗಳನ್ನು ಜಾರಿಗೊಳಿಸಿದೆ. ಇದೀಗ ಉನ್ನತ ಶಿಕ್ಷಣದಲ್ಲಿ ಮಹತ್ತರ ಬದಲಾವಣೆಗೆ ಸರ್ಕಾರ ಹೆಜ್ಜೆ ಇಟ್ಟಿದೆ.

ಇಬ್ಬರು ವಿದ್ಯುತ್ ಸ್ಪರ್ಶದಿಂದ ಸಾವು

ಕರೆತಂದು ಸುಟ್ಟ ಗಾಯಗಳ ಚಿಕಿತ್ಸಾ ವಿಭಾಗದಲ್ಲಿ ದಾಖಲಿಸಿದರು. ರವಿಕುಮಾರ್ ಮತ್ತು ಕಿರಣ್ ಅವರ ದೇಹಗಳನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿದ ಪೊಲೀಸರು, ಇಂದು ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಹಸ್ತಾಂತರಿಸಿದರು. ವಿದ್ಯುತ್ ಸ್ಪರ್ಶದಿಂದ ಇಬ್ಬರು ಸಾವನ್ನಪ್ಪಿ ನಾಲ್ವರು ಗಾಯ ಗೊಂಡಿರುವ ಬಗ್ಗೆ ಅಶೋಕಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರೆ, ವಿದ್ಯುತ್ ಕಂಬ ಮತ್ತು ಕಾಂಪೌಂಡ್ ಗೋಡೆಗೆ ಕಾರು ಡಿಕ್ಕಿ ಹೊಡೆದಿರುವ ಸಂಬಂಧ ಕೆ.ಆರ್. ಸಂಚಾರ ಠಾಣೆ ಪೊಲೀಸರು ಕೇಸು ದಾಖಲಿಸಿ, ವಾಹನವನ್ನು ವಶಕ್ಕೆ ಪಡೆದಿದ್ದಾರೆ. ಕಾರು ಅಪಘಾತಕ್ಕೀಡಾಗಿದರೂ ಚಾಲಕ ಸೇರಿದಂತೆ ಅದರಲ್ಲಿದ್ದವರು ಸುರಕ್ಷಿತವಾಗಿದ್ದರೂ, ವಾಹನವನ್ನು ಹೊರ ತೆಗೆಯಲೆತ್ನಿಸಿದಾಗ ವಿದ್ಯುತ್ ಸ್ಪರ್ಶಿಸಿ ಈ ಅವಘಡ ಸಂಭವಿಸಿದೆ.

ಮಧ್ಯರಾತ್ರಿ ಕೆ.ಆರ್.ಉಪ ವಿಭಾಗದ ಎಸಿಪಿ ಎಸ್.ಇ. ಗಂಗಾಧರಸ್ವಾಮಿ, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ಚೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿ, ನಂತರ ವಾಹನ ವನ್ನು ಸುರಕ್ಷಿತವಾಗಿ ಹೊರತೆಗೆದರು.

ಪರಾರಿಯಾದ ದುಷ್ಕರ್ಮಿಗಳು

ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕಾರಿನ ಗಾಜನ್ನು ಪುಡಿಪುಡಿ ಮಾಡಿ, ಒಂದು ಮೊಬೈಲ್ ಮತ್ತು ಜಯಶ್ರೀ ಅವರ ಮಾಂಗಲ್ಯ ಸರವನ್ನು ಕಿತ್ತುಕೊಂಡಿದ್ದಾರೆ. ಅಷ್ಟರಲ್ಲಾಗಲೇ ಗ್ರಾಮಸ್ಥರು ಜಮಾಯಿಸಲಾರಂಭಿಸಿದಾಗ ದುಷ್ಕರ್ಮಿಗಳು ತಾವು ಬಂದ ಕಾರುಗಳಲ್ಲಿ ಪರಾರಿಯಾಗಿದ್ದಾರೆ. ಒಂದು ವೇಳೆ ಗ್ರಾಮಸ್ಥರು ಸಕಾಲಕ್ಕೆ ಬಾರದಿದ್ದಲ್ಲಿ ದೊಡ್ಡ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು ಎಂದು ಹೇಳಲಾಗಿದೆ. ಜಯಶ್ರೀ ಅವರಿಂದ ಕಿತ್ತುಕೊಂಡಿರುವ ಮೊಬೈಲನ್ನು ಆಫ್ ಮಾಡಿಲ್ಲ. ಅದರ ಲೊಕೇಷನ್ ಘಟನೆ ನಡೆದ ಆಜುಬಾಜಿನಲ್ಲೇ ಕಂಡುಬರುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದುಷ್ಕರ್ಮಿಗಳು ಮೊಬೈಲ್ ಅನ್ನು ತಾವಾಗಿಯೇ ಬಿಸಾಕಿ ಹೋಗಿದ್ದಾರೆಯೇ? ಅಥವಾ ಗ್ರಾಮಸ್ಥರನ್ನು ಕಂಡು ಭಯಭೀತರಾಗಿ ಪರಾರಿಯಾಗುವ ವೇಳೆ ಅವರ ಕೈಯ್ಯಿಂದ ಮೊಬೈಲ್ ಬಿದ್ದು ಹೋಗಿದೆಯೇ ಎಂಬುದು ತಿಳಿಯಬೇಕಾಗಿದೆ.

ಘಟನಾ ಸ್ಥಳಕ್ಕೆ ಮೈಸೂರು ಜಿಲ್ಲಾ ಅಡಿಷನಲ್ ಎಸ್ಪಿ ನಂದಿನಿ, ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ಗೋವಿಂದರಾಜು, ನಂಜನಗೂಡು ಗ್ರಾಮಾಂತರ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜ ಶೆಟ್ಟಿ ಹಾಗೂ ಸಿಬ್ಬಂದಿ ಭೇಟಿ ನೀಡಿದ್ದರು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣದ ದಾಖಲಾಗಿದೆ.


ವರ್ಗಾವರ್ಗಿಗೆ ಸಿಎಂ ಮತ್ತೆ ಚಾಲನೆ

ಆದರೆ, ತಮ್ಮ ಶಾಸಕರು ತಮ್ಮ ಕ್ಷೇತ್ರದ ವ್ಯಾಪ್ತಿಗೆ ಅಧಿಕಾರಿಗಳ ವರ್ಗಾವಣೆಯ ಮಹಾಪೂರದ ಪಟ್ಟಿಯನ್ನೇ ನೀಡಿದ್ದಾರೆ. ಗೃಹ, ಕಂದಾಯ, ಗ್ರಾಮೀಣಾಭಿವೃದ್ಧಿ ಸೇರಿದಂತೆ ಜನರಿಗೆ ಹತ್ತಿರವಾಗಿರುವ ಇಲಾಖೆಗಳ ಅಧಿಕಾರಿ ನೌಕರರನ್ನು, ಶಾಸಕರ ಅಪೇಕ್ಷೆಯಂತೆ ನಿಯೋಜನೆ ಇಲ್ಲವೆ ಬದಲಾವಣೆ ಮಾಡುವ ತೀರ್ಮಾನ ಕೈಗೊಂಡಿದ್ದಾರೆ. ಇದಕ್ಕೆ ಪೂರಕವಾಗಿ 84 ತಹಸೀಲ್ದಾರ್‌ಗಳನ್ನು ಇಂದು ವರ್ಗಾವಣೆ ಮಾಡಲಾಗಿದೆ.

ಮೈಸೂರು ಸರ್ಕಾರಿ ಅತಿಥಿ ಗೃಹದ ಪಾರಂಪರಿಕ ಆರ್ಚ್ ಸಂರಕ್ಷಣೆಗೆ ಮಹಾನಗರ ಪಾಲಿಕೆ ನಿರ್ಧಾರ

● ಪಾರಂಪರಿಕ ತಜ್ಞ ಪ್ರೊ. ರಂಗರಾಜು, ಇತರರೊಂದಿಗೆ ಮೇಯರ್ ಶಿವಕುಮಾರ್ ಪರಿಶೀಲನೆ ● ಗಿಡ-ಗಂಟಿ ಬೆಳೆದು ಶಿಥಿಲಗೊಂಡಿರುವ ಸುಂದರ ನಿರ್ಮಾಣ ಸಂರಕ್ಷಣೆಗೆ ಕ್ರಮ





ಮೈಸೂರು, ಜು.28–ಮೈಸೂರಿನ ಸರ್ಕಾರಿ ಅತಿಥಿ ಗೃಹದ ಮುಂಭಾಗವಿರುವ ಪಾರಂಪರಿಕ ಆರ್ಚ್(ಕಮಾನು) ಸಂರಕ್ಷಣೆಗೆ ನಗರ ಪಾಲಿಕೆ ಮುಂದಾಗಿದ್ದು, ಪಾರಂಪರಿಕ ತಜ್ಞರಾದ ಪ್ರೊ. ಎಸ್.ಎನ್. ರಂಗರಾಜು, ಮೇಯರ್ ಶಿವಕುಮಾರ್ ಇತರರು ಸ್ಥಳ ಪರಿಶೀಲಿಸಿದರು.

ಮೇಯರ್ ಶಿವಕುಮಾರ್ ಕೋರಿಕೆಯ ಮೇರೆಗೆ ಪಾರಂಪರಿಕ ತಜ್ಞ ಎಸ್.ಎನ್.ರಂಗರಾಜು, ನಮ್ಮ ಮೈಸೂರು ಫೌಂಡೇಷನ್‌ನ ದಶರಥ್, ಪಾಲಿಕೆಯ ಇಬ್ಬರು ಇಂಜಿನಿಯರ್‌ಗಳು ಪರಿಶೀಲನೆ ನಡೆಸಿ, ಸಂರಕ್ಷಣೆ ಸಂಬಂಧ ಚರ್ಚಿಸಿದರು.


ಈ ಪಾರಂಪರಿಕ ಆರ್ಚ್ ಹಲವೆಡೆ ಶಿಥಿಲಗೊಂಡಿದ್ದು, ಗಿಡ–ಗಂಟಿಗಳು ಬೆಳೆದಿವೆ. ಕೆಲವೆಡೆ ಆರ್ಚ್‌ನ ಗಾರೆ ಕಿತ್ತು ಬಂದಿದೆ. ಆರ್ಚ್‌ನ ಇಂದಿನ ಪರಿಸ್ಥಿತಿ ಬಗ್ಗೆ ಸಮಗ್ರವಾಗಿ ಪರಿಶೀಲನೆ ನಡೆಸಿದ ಪ್ರೊ. ರಂಗರಾಜು ಅವರು, ಇದನ್ನು ಸಂರಕ್ಷಿಸಬೇಕಾದ ಅವಶ್ಯಕತೆ ಹಾಗೂ ಕೈಗೊಳ್ಳಬೇಕಾದ ಕಾಮಗಾರಿ ಬಗ್ಗೆ ಮೇಯರ್ ಹಾಗೂ ಅಧಿಕಾರಿಗಳಿಗೆ ವಿವರಿಸಿದರು.

ಆರ್ಚ್‌ಗೆ ಧಕ್ಕೆಯಾಗದಿರಲು ಅದರ ಸುತ್ತ ಗಾರ್ಡನ್ ನಿರ್ಮಿಸಬೇಕು. ಅಥವಾ ಅಡಿಪಾಯಕ್ಕೆ ನೀರು ಸೇರದಂತೆ ಟೈಲ್ಸ್‌ಗಳನ್ನು ಅಳವಡಿಸಬೇಕು ಎಂದು ಚರ್ಚಿಸಲಾಯಿತು. ಈ ಕಾಮಗಾರಿಗೆ ಸಂಬಂಧಪಟ್ಟಂತೆ ಶೀಘ್ರವೇ ಡಿಪಿಆರ್ ತಯಾರಿಸುವಂತೆ ಮೇಯರ್ ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.


ಪಾಲಿಕೆ ಇಂಜಿನಿಯರ್‌ಗಳು ಮತ್ತು ನಮ್ಮ ಮೈಸೂರು ಫೌಂಡೇಷನ್ ಸೇರಿ ಡಿಪಿಆರ್ ತಯಾರಿಸಲಿದ್ದು, ಶೀಘ್ರದಲ್ಲೇ ಈ ಆರ್ಚ್‌ನ ಸಂರಕ್ಷಣೆ ಕಾರ್ಯ ಆರಂಭವಾಗಲಿದೆ. ಅದಕ್ಕೆ ತಗಲುವ ವೆಚ್ಚವನ್ನು ಪಾಲಿಕೆಯಿಂದ ನೀಡಲಾಗುವುದು ಎಂದು ಮೇಯರ್ ಶಿವಕುಮಾರ್ ಹೇಳಿರುವುದಾಗಿ ಪ್ರೊ. ರಂಗರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ನಗರವನ್ನು ಪಾರಂಪರಿಕ ನಗರ ಎಂದೂ ಕೂಡ ಕರೆಯಲಾಗುತ್ತದೆ. ದೇಶ–ವಿದೇಶದಿಂದ ಇಲ್ಲಿಗೆ ಬರುವ ಪ್ರವಾಸಿಗರು ಇಲ್ಲಿನ ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸುತ್ತಾರೆ. ಮೈಸೂರು ದಸರೆ ಸಂದರ್ಭದಲ್ಲಿ 'ಪಾರಂಪರಿಕ ನಡಿಗೆ' ಮೂಲಕ ಪ್ರವಾಸಿಗರಿಗೆ ಇಲ್ಲಿನ ಅದ್ಭುತವಾದ ಪಾರಂಪರಿಕ ಕಟ್ಟಡಗಳನ್ನು ತೋರಿಸಲಾಗುತ್ತದೆ. ಆದರೆ ಈ ಕಟ್ಟಡಗಳ ಸಂರಕ್ಷಣೆ ಬಗ್ಗೆ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಮೈಸೂರಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಒತ್ತು ಕೊಡಲಾಗುತ್ತದೆ ಎಂಬ ನಿರೀಕ್ಷೆ ಮೈಸೂರಿಗರಿಗೆ ಇತ್ತು. ಆದರೆ ಬಜೆಟ್‌ನಲ್ಲಿ ಅದರ ಪ್ರಸ್ತಾಪವೇ ಇರಲಿಲ್ಲ. ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಗುರುವಾರವಷ್ಟೇ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಕುರಿತು ಸಭೆಯೊಂದನ್ನು ನಡೆಸಿದ್ದಾರೆ. ಈ ಮಧ್ಯೆ ಮೇಯರ್ ಶಿವಕುಮಾರ್ ಕಾಳಜಿ ವಹಿಸಿ, ಒಂದು ಪಾರಂಪರಿಕ ಆರ್ಚ್ ಸಂರಕ್ಷಣೆಗೆ ಮುಂದಾಗಿರುವ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿದೆ.





ರತನ್ ಟಾಟಾಗೆ 'ಉದ್ಯೋಗ ರತ್ನ' ಪ್ರಶಸ್ತಿ



ಮುಂಬೈ, ಜು.28– ಹಿರಿಯ ಕೈಗಾರಿಕೋದ್ಯಮಿ ಮತ್ತು ಟಾಟಾ ಸನ್ಸ್‌ನ ಅಧ್ಯಕ್ಷ ರತನ್ ಟಾಟಾ ಅವರಿಗೆ ಮೊದಲ 'ಉದ್ಯೋಗ ರತ್ನ' ಪ್ರಶಸ್ತಿಯನ್ನು ನೀಡಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ ಎಂದು ರಾಜ್ಯ ಕೈಗಾರಿಕಾ ಸಚಿವ ಉದಯ್ ಸಾಮಂತ್ ಹೇಳಿದ್ದಾರೆ.

ಯುವ ಉದ್ಯಮಿ, ಮಹಿಳಾ ಉದ್ಯಮಿ ಮತ್ತು ಮರಾಠಿ ಉದ್ಯಮಿಗಳಿಗೆ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಸಾಮಂತ್ ರಾಜ್ಯ ವಿಧಾನ ಪರಿಷತ್ತಿನಲ್ಲಿ ಘೋಷಿಸಿದರು. ಗಣ್ಯರಿಗೆ ನೀಡಲಾಗುವ ಮಹಾರಾಷ್ಟ್ರ ಭೂಷಣ ಪ್ರಶಸ್ತಿಯಂತೆಯೇ, ರತನ್ ಟಾಟಾ ಅವರಿಗೆ ಉದ್ಯೋಗ ರತ್ನ ಪ್ರಶಸ್ತಿಯನ್ನು ನೀಡಲು ಸರ್ಕಾರ ನಿರ್ಧರಿಸಿದೆ. ಈ ಕುರಿತು ಮುಖ್ಯಮಂತ್ರಿ ಏಕನಾಥ್ ಶಿಂಧೆ, ಉಪಮುಖ್ಯಮಂತ್ರಿಗಳಾದ ದೇವೇಂದ್ರ ಫಡ್ನವೀಸ್ ಮತ್ತು ಅಜಿತ್ ಪವಾರ್ ಮತ್ತು ಕೈಗಾರಿಕೆ ಸಚಿವರನ್ನು ಒಳಗೊಂಡ ಸಮಿತಿ ಸಭೆ ನಡೆಸಿದೆ ಎಂದು ಅವರು ಹೇಳಿದ್ದಾರೆ.

ಪೈಪ್ ಒಡೆದು ನೀರು ಪೋಲು



ಮೈಸೂರು, ಜು.28(ಎಸ್‌ಪಿಎನ್)– ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಪೈಪ್ ಒಡೆದು ಅಪಾರ ಪ್ರಮಾಣದ ನೀರು ಪೋಲಾದ ಘಟನೆ ಮೈಸೂರು ವಿವಿ ಪುರಂ ಶ್ರೀ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನ ಮುಂಭಾಗ ಶುಕ್ರವಾರ ನಡೆದಿದೆ.

ನೀರಿನ ರಭಸಕ್ಕೆ ಕಾರಂಜಿಯಂತೆ ರಸ್ತೆಯೆಲ್ಲಾ ಚಿಮ್ಮಿದೆ. ಒಂದು ಗಂಟೆಗೂ ಹೆಚ್ಚು ಕಾಲ ನೀರು ಪೋಲಾಯಿತು. ಈ ಸಂಬಂಧ ದೂರು ಸಲ್ಲಿಸಿದರೂ ವಾಣಿವಿಲಾಸ ನೀರು ಸರಬರಾಜು ಕೇಂದ್ರದ ಅಧಿಕಾರಿಗಳು ಇತ್ತ ಸುಳಿಯಲಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸಿಲ್ಕ್ ಇಂಡಿಯಾ' ಸೀರೆ ಮೇಳ ಆರಂಭ



ಮೈಸೂರು,ಜು.28(ಎಂಟಿವೈ)– ಅಭಿವೃದ್ಧಿ ಸಂಸ್ಥೆ ಮೈಸೂರಿನ ನಂಜರಾಜ ಬಹದ್ದೂರು ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ 'ಸಿಲ್ಕ್ ಇಂಡಿಯಾ' ಸೀರೆ ಮೇಳಕ್ಕೆ ಮೇಯರ್ ಶಿವಕುಮಾರ್ ಚಾಲನೆ ನೀಡಿದರು.

ನಂಜರಾಜ ಕಲ್ಯಾಣಮಂಟಪದಲ್ಲಿ ಸಿಲ್ಕ್ ಇಂಡಿಯಾ ಸೀರೆ ಮೇಳದ ಅಂಗವಾಗಿ 55 ಮಳಿಗೆ ತೆರೆಯಲಾಗಿದ್ದು, ಕರ್ನಾಟಕ ಸೇರಿದಂತೆ 19 ರಾಜ್ಯಗಳಿಂದ 77 ಸೀರೆ ತಯಾರಕರು ಮೇಳದಲ್ಲಿ ವಿವಿಧ ಬಗೆಯ ಸೀರೆಗಳ ಪ್ರದರ್ಶನ ಹಾಗೂ ಮಾರಾಟ ಮಾಡಲಿದ್ದಾರೆ. ಆ.6ರವರೆಗೆ ನಡೆಯಲಿರುವ ಈ ಮೇಳದಲ್ಲಿ ಮೈಸೂರಿಗರಿಗೆ ಹಬ್ಬಕ್ಕೆ ಅತ್ಯುತ್ತಮವಾದ ವಿನ್ಯಾಸದ ಸೀರೆ ಖರೀದಿಗೆ ಅವಕಾಶ ದೊರೆಯಲಿದೆ.

ಮೇಳಕ್ಕೆ ಚಾಲನೆ ನೀಡಿದ ಬಳಿಕ ಮೇಯರ್ ಶಿವಕುಮಾರ್ ಮಾತನಾಡಿ, ಅಭಿವೃದ್ಧಿ ಸಂಸ್ಥೆ ವತಿಯಿಂದ ಆಯೋಜಿಸಿರುವ ಸಿಲ್ಕ್ ಇಂಡಿಯಾ ಸೀರೆ ಮೇಳದಲ್ಲಿ ದೇಶದ ವಿವಿಧ ರಾಜ್ಯಗಳ ಸಾಂಪ್ರದಾಯಿಕ ರೇಷ್ಮೆ ಸೀರೆಗಳನ್ನು ನಾಡಿನ ಜನರಿಗೆ ಪರಿಚಯಿಸಲಾಗುತ್ತಿದೆ. ನಮ್ಮ ಮೈಸೂರು ಸಿಲ್ಕ್‌ನಷ್ಟೇ ಜಾಗತಿಕ ಮನ್ನಣೆ ಪಡೆದಿರುವ ವಿವಿಧ ರಾಜ್ಯಗಳ ರೇಷ್ಮೆ ಸೀರೆಗಳು ಒಂದೇ ಸ್ಥಳದಲ್ಲಿ ನಗರದ ಜನತೆಗೆ ದೊರೆಯುತ್ತಿರುವುದು ಶ್ಲಾಘನೀಯ ಎಂದರು.

ಉಪಮೇಯರ್ ಡಾ.ರೂಪಾ ಮಾತನಾಡಿ, ಪ್ರದರ್ಶನದಲ್ಲಿ ರೇಷ್ಮೆ ಸೀರೆಗಳಲ್ಲಿ ಇಷ್ಟು ಮಾದರಿಯ ಆಯ್ಕೆಗಳು ಸಿಗುತ್ತಿರುವುದರಿಂದ ಸದಭಿರುಚಿಯ ಸೀರೆ ಕೊಳ್ಳುವವರಿಗೆ ಇದೊಂದು ಉತ್ತಮ ವೇದಿಕೆಯಾಗಿದೆ. ಭಾರತದಲ್ಲಿ ಸೀರೆಗೆ ಹೆಚ್ಚಿನ ಮಹತ್ವವಿದೆ. ಇಲ್ಲಿನ ರೇಷ್ಮೆ ಮತ್ತು ಇಳಕಲ್ ಸೀರೆಗಳು ಜಗತ್ತಿನಾದ್ಯಂತಹ ಹೆಚ್ಚು ಪ್ರಸಿದ್ಧಿ ಪಡೆದುಕೊಂಡಿವೆ ಆ ರೀತಿಯ ನಾನಾ ಬಗೆ ವಿಶಿಷ್ಟವಾದ ಮತ್ತು ವಿಭಿನ್ನ ಶೈಲಿಯಿಂದ ಸೀರೆಗಳು ಮೇಳದಲ್ಲಿ ಹೆಚ್ಚು ಆಕರ್ಷಿಸುತ್ತಿವೆ ಎಂದರು.

ನಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ನಿತ್ಯವೂ ಬೆಳಗ್ಗೆ 10.30 ರಿಂದ ರಾತ್ರಿ 8.30 ರವರೆಗೆ ಲಭ್ಯವಿದೆ. ಮೇಳದಲ್ಲಿ ಬನಾರಸ್, ಮೈಸೂರು ಸಿಲ್ಕ್, ವಾರಣಾಸಿ, ಅಸ್ಸಾಂ, ಜೈಪುರ ಸಿಲ್ಕ್, ತಸ್ಸರ್ ರೇಷ್ಮೆ, ಕ್ರೇಪ್, ಜಾರ್ಜೆಟ್, ಅರಿಣಿ, ಧರ್ಮಾವರಂ, ಕಾಂಚಿಪುರಂ, ರಾ ಸಿಲ್ಕ್, ಕೋಸಾ, ಕೋಲ್ಕತ್ತಾ, ಢಾಕಾ ಸೇರಿದಂತೆ ಎಲ್ಲಾ ರೀತಿಯ ರೇಷ್ಮೆ ಸೀರೆ ಪ್ರದರ್ಶನಕ್ಕಿಡಲಾಗಿದೆ. ಈ ಸಂದರ್ಭದಲ್ಲಿ ಅಭಿವೃದ್ಧಿ ಸಂಸ್ಥೆ ಸಂಸ್ಥಾಪಕ ಅಭಿನಂದನ್ ಸೇರಿದಂತೆ ಇನ್ನಿತರರು ಇದ್ದರು.

ಮೈಸೂರು ತಾಲೂಕು ಆನಂದೂರು ಗ್ರಾಮ ಪಂಚಾಯ್ತಿ ಜೆಡಿಎಸ್ ತೆಕ್ಕೆಗೆ



ಆನಂದೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಶ್ರೀನಿವಾಸ್, ಉಪಾಧ್ಯಕ್ಷರಾಗಿ ಶ್ರೀಮತಿ ಅನುರಾಧ ಆಯ್ಕೆಯಾದರು. ಇವರು ಶಾಸಕರಾದ ಜಿ.ಟಿ.ದೇವೇಗೌಡರು ಹಾಗೂ ಸಹಕಾರ ಪತ್ತಿನ ಮಹಾ ಮಂಡಳದ ಅಧ್ಯಕ್ಷರಾದ ಶ್ರೀಮತಿ ಲಲಿತ ಜಿ.ಟಿ.ದೇವೇಗೌಡರನ್ನು ಅಭಿನಂದಿಸಿದರು. ಈ ವೇಳೆ ಶೋಭ ಪ್ರಭಾಕರ್, ಕಲಾವತಿ, ರೇಣುಕಾ, ಭವ್ಯಾ, ಪ್ರೇಮ, ಸ್ವಾಮಿ, ಚಂದ್ರಶೇಖರಚಾರಿ, ಈರಮ್ಮ, ಮುಖಂಡರಾದ ಆನಂದೂರು ಚಂದ್ರ, ಎಡಹಳ್ಳಿ ಸ್ವಾಮಿ, ಉಂಡವಾಡಿ ರಮೇಶ್, ಉಮೇಶ್ ಇತರರು ಉಪಸ್ಥಿತರಿದ್ದರು.

ಮೈಸೂರಿನ ಕಲಾಮಂದಿರದ ಪಕ್ಕ ಅತ್ಯಾಕರ್ಷಕ ಉದ್ಯಾನವನ

ವಲಸಿಗರ ಗುಡಿಸಲು, ಕಲಾಕೃತಿಗಳ ಮಾರಾಟ ಎತ್ತಂಗಡಿ





ಮೈಸೂರು, ಜು.28(ಬಿಎಲ್‌ಯು)– ಮೈಸೂರಿನ ಕಲಾಮಂದಿರದ ಪಕ್ಕದ ರಸ್ತೆ ಬದಿಯ ಖಾಲಿ ಜಾಗದಲ್ಲಿ (ರೈಲ್ವೆ ಹಳಿ ಪಕ್ಕ) ಸುಂದರ ಉದ್ಯಾನವನ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಕಲಾಮಂದಿರದ ವೃತ್ತ ಅಂದದಿಂದ ಕಂಗೊಳಿಸಲಿದೆ. ನಗರ ಪಾಲಿಕೆ ಈ ಉದ್ಯಾನ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ.

ಕಲಾಮಂದಿರದ ಬಲಗಡೆ ಸಿಗ್ನಲ್ ಲೈಟ್ ಬಳಿಯ ರೈಲ್ವೆ ಹಳಿ ಪಕ್ಕ ಖಾಲಿ ಜಾಗದಲ್ಲಿ ಅನೇಕ ವರ್ಷದಿಂದ ಬಿಹಾರದ ವಲಸಿಗರು ಗುಡಿಸಲು ನಿರ್ಮಾಣ ಮಾಡಿ, ಅಲ್ಲೇ ವಾಸ ಮಾಡುವುದರೊಂದಿಗೆ ಮಣ್ಣಿನ ಕಲಾಕೃತಿಗಳನ್ನು ಮಾಡಿ, ಮಾರಾಟ ಮಾಡಿ, ಜೀವನ ಸಾಗಿಸುತ್ತಿದ್ದರು. ಕಲಾಮಂದಿರ ಪಕ್ಕದಲ್ಲೇ ತಲೆ ಎತ್ತಿದ್ದ ಈ ಮೂರ್ನಾಲ್ಕು ಗುಡಿಸಲುಗಳಿಂದ ಸಂಚಾರವು ಸೇರಿದಂತೆ ನಾನಾ ಸಮಸ್ಯೆ ಉಂಟಾಗಿತ್ತು.

ರಸ್ತೆ ಬದಿಯಲ್ಲಿ ಮಣ್ಣಿನ ಕಲಾಕೃತಿಗಳನ್ನು ಇವರು ಮಾರಾಟ ಮಾಡುತ್ತಿದ್ದರಿಂದ ಕಲಾಕೃತಿಗಳನ್ನು ಖರೀದಿ ಮಾಡಲು ಬರುವ ಜನರು ರಸ್ತೆ ಪಕ್ಕದಲ್ಲೇ ವಾಹನ ನಿಲ್ಲಿಸಿ ವ್ಯಾಪಾರದಲ್ಲಿ ತೊಡಗುತ್ತಿದ್ದರು. ಪಕ್ಕದಲ್ಲೇ ಇರುವ ಸಿಗ್ನಲ್‌ನಲ್ಲಿ ವಾಹನಗಳು ಸರಾಗವಾಗಿ ಸಾಗಲು ಅಡ್ಡಿ ಆಗುತ್ತಿತ್ತು. ಹಾಗಾಗಿ ಕೆಲವು ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿದ್ದವು.

ಈ ಹಿನ್ನೆಲೆಯಲ್ಲಿ ಗುಡಿಸಲುಗಳನ್ನು ತೆರವು ಮಾಡಿ, ಅಲ್ಲಿ ಉದ್ಯಾನವನ ನಿರ್ಮಾಣ ಮಾಡಲು ನಗರ ಪಾಲಿಕೆ ತೀರ್ಮಾನ ಮಾಡಿದೆ. ಆದರೆ ಕಳೆದ 35 ವರ್ಷಗಳಿಂದ ನಾವು ಇಲ್ಲೇ ವಾಸ ಮಾಡುತ್ತಿದ್ದು, ಯಾವುದೇ ಕಾರಣಕ್ಕೂ ಗುಡಿಸಲುಗಳನ್ನು ತೆರವು ಮಾಡುವುದಿಲ್ಲ ಎಂದು ವಲಸಿಗರು ಪಟ್ಟುಹಿಡಿದರು. ಇಲ್ಲಿಯೇ ನೆಲೆ ನಿಲ್ಲಲು ತಮಗೆ ಅವಕಾಶ ಮಾಡಿಕೊಡುವಂತೆ ವಲಸಿಗರು ಜಿಲ್ಲಾಧಿಕಾರಿಗಳಿಗೆ ಮನವಿ ಕೂಡ ಮಾಡಿದ್ದರು.

ಆದರೆ ನಗರಪಾಲಿಕೆಯವರು ಈಗ ಗುಡಿಸಲುಗಳನ್ನು ತೆರವು ಮಾಡಿ ಅಲ್ಲಿ ಅತ್ಯಾಕರ್ಷಕ ಉದ್ಯಾನವನ ನಿರ್ಮಾಣ ಮಾಡುತ್ತಿದ್ದಾರೆ. 120 ಮೀಟರ್ ಉದ್ದ ಹಾಗೂ 46 ಮೀಟರ್ ಅಗಲದ ಜಾಗದಲ್ಲಿ ಸುಮಾರು 30 ಲಕ್ಷ ರೂಪಾಯಿ ವೆಚ್ಚದಲ್ಲಿ ಉದ್ಯಾನವನ ನಿರ್ಮಾಣ ಮಾಡಲಾಗುತ್ತಿದೆ.

ಉದ್ಯಾನವನದ ಸುತ್ತ ಕಬ್ಬಿಣದ ಗ್ರಿಲ್‌ಗಳನ್ನು ಅಳವಡಿಸಲಾಗಿದ್ದು, ಜನ ವಿಹಾರಕ್ಕೆ ವಾಕಿಂಗ್ ಪಥ ಸಹ ನಿರ್ಮಾಣ ಮಾಡಲಾಗಿದೆ. ಸುತ್ತಲು ಹಸಿರು ಹುಲ್ಲು ಬೆಳೆಸಿ, ಹೂವಿನ ಗಿಡಗಳನ್ನು ನೆಡಲಾಗುತ್ತಿದೆ. ಉದ್ಯಾನವನ ನಿರ್ಮಾಣ ಮಾಡಿದ ತರುವಾಯ ದಿನದ 24 ಗಂಟೆ ರಕ್ಷಣಾ ಸಿಬ್ಬಂದಿಯನ್ನು ನಿಯೋಜಿಸಿ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲು ನಗರಪಾಲಿಕೆ ನಿರ್ಧರಿಸಿದೆ.

ಉದ್ಯಾನವನದ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಮುಂದಿನ ಕೌನ್ಸಿಲ್ ಸಭೆಯಲ್ಲಿ ಈ ಉದ್ಯಾನವನಕ್ಕೆ ಹೆಸರೊಂದನ್ನು ನಾಮಕರಣ ಮಾಡಿ ನಂತರ ಉದ್ಘಾಟನೆ ಮಾಡಲು ನಗರ ಪಾಲಿಕೆ ತೀರ್ಮಾನಿಸಿದೆ.

ಬಿಹಾರಿ ವಲಸಿಗರನ್ನು ಅಲ್ಲಿಂದ ತೆರವುಗೊಳಿಸಿದ್ದರೂ ಅವರು ಮಾತ್ರ ಆ ಸ್ಥಳದಿಂದ ಕದಲದೆ ಪಕ್ಕದಲ್ಲೆ ಮತ್ತೆ ಹೊಸದಾಗಿ ಗುಡಿಸಲು ನಿರ್ಮಿಸಿದ್ದಾರೆ. ಎಂದಿನಂತೆ ಅಲ್ಲೇ ಮಣ್ಣಿನ ಕಲಾಕೃತಿಗಳನ್ನು ತಯಾರು ಮಾಡಿ, ಮಾರಾಟ ಮಾಡುತ್ತಿದ್ದಾರೆ. ನಮ್ಮ ತಂದೆ ಬನಾರಾಮ್ ಅವರು ಕಳೆದ 35 ವರ್ಷದ ಹಿಂದೆ ಇಲ್ಲಿ ಗುಡಿಸಲು ಹಾಕಿ ವಾಸ ಮಾಡಲು ಆರಂಭಿಸಿದ್ದರು. ಈಗ ಇಲ್ಲಿ ಮೂರು ಕುಟುಂಬ ವಾಸ ಮಾಡುತ್ತಿವೆ ಇಲ್ಲಿಂದಲೂ ತೆರವು ಮಾಡಿದರೆ ಬದುಕಲು ನಮಗೆ ಬೇರೆ ಜಾಗವಿಲ್ಲ. ಆದ ಕಾರಣ ನಾವು ಈ ಸ್ಥಳ ಬಿಡಲ್ಲ ಎಂದು ಅಲ್ಲಿನ ವಾಸಿ ಬಾಬು ಲಾಲ್ ತಿಳಿಸಿದ್ದಾರೆ.

ಸರ್ಕಾರಿ ಯೋಜನೆ, ಲಾಭದ ಆಸೆ ತೋರಿಸಿ ಇಬ್ಬರು ರೈತರಿಗೆ ವಂಚನೆ



ಮಡಿಕೇರಿ, ಜು.28–ಒಂದೆಡೆ ಸರ್ಕಾರಿ ಯೋಜನೆಯ ನಕಲಿ ಆ್ಯಪ್ ಮೂಲಕ ರೈತನಿಂದ 28,150 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಘಟನೆ ವರದಿಯಾಗಿದೆ. ಹಾಗೆಯೇ ಮತ್ತೊಂದು ಪ್ರಕರಣದಲ್ಲಿ ಷೇರು ಮಾರುಕಟ್ಟೆಗೆ ಸಂಬಂಧಿಸಿದಂತೆ ಮತ್ತೊಬ್ಬ ರೈತನಿಗೆ 33.03 ಲಕ್ಷ ರೂ. ಮೋಸ ಮಾಡಲಾಗಿದೆ.

ಮೊದಲ ಪ್ರಕರಣ: ಮಡಿಕೇರಿ ತಾಲೂಕು ಕರಿಕೆ ಗ್ರಾಮದ ರೈತ ಕೆ.ಆರ್.ಅಜಯ್ (35) ವಂಚನೆಗೊಳಗಾದವರಾಗಿದ್ದು, ಜು.18ರಂದು ಇವರ ಫೇಸ್‌ಬುಕ್ ಖಾತೆಯಲ್ಲಿ ಪ್ರಧಾನ ಮಂತ್ರಿ ಕುಸುಮ ಯೋಜನೆಯಡಿ ಸೋಲಾರ್ ಪಂಪ್‌ಸೆಟ್‌ಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಲಿಂಕ್ ಗೋಚರಿಸಿದೆ.

ಅಜಯ್ ಅವರು ಈ ಲಿಂಕ್ ಮೂಲಕ ಸೋಲಾರ್ ಪಂಪ್‌ಸೆಟ್‌ಗಾಗಿ ಅರ್ಜಿ ಸಲ್ಲಿಸಿದ್ದರು. ಜು.19ರಂದು 90885 53298 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಯೋಜನೆಗೆ ಸಂಬಂಧಿಸಿದ ಖಾತೆ ತೆರೆಯಲು 5,600 ರೂ. ಮತ್ತು ಜಿಎಸ್‌ಟಿ ತೆರಿಗೆಯ ಮೊತ್ತ 22,550 ರೂ. ಗೂಗಲ್ ಪೇ ಮೂಲಕ ಪಾವತಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ರೈತ ಅಜಯ್ ಹಣವನ್ನು ವರ್ಗಾವಣೆ ಮಾಡಿದ್ದಾರೆ. ಇದಾದ ನಂತರವೂ ಮತ್ತೆ ಮತ್ತೆ ಕರೆ ಮಾಡಿ ಹಣ ವರ್ಗಾವಣೆ ಮಾಡುವಂತೆ ಕೇಳುತ್ತಿದ್ದರಿಂದ ತಾನು ವಂಚನೆಗೊಳಗಾಗಿರುವುದನ್ನು ಮನವರಿಕೆ ಮಾಡಿಕೊಂಡ ಅಜಯ್ ಅವರು ಭಾಗಮಂಡಲ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಮತ್ತೊಂದು ಮಹಾ ಮೋಸ: ಷೇರು ಮಾರುಕಟ್ಟೆಗೆ ಸಂಬಂಧಿಸಿದಂತೆ ಟೆಲಿಗ್ರಾಂ ಆ್ಯಪ್‌ನಲ್ಲಿ ನಕಲಿ ಗ್ರೂಪ್ ಸೃಷ್ಟಿಸಿ ರೈತನಿಂದ 33.03 ಲಕ್ಷ ರೂ. ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದೆ.

ಚಟ್ಟಳ್ಳಿ ಗ್ರಾಮದ ಬಿ.ಎಸ್.ಕೌಶಿಕ್(46) ವಂಚನೆಗೊಳಗಾದ ರೈತನಾಗಿದ್ದು, ಇವರ ಟೆಲಿಗ್ರಾಂ ಆ್ಯಪ್‌ಗೆ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಲಾಭ ಗಳಿಸುವ ಬಗ್ಗೆ ಜಾಹೀರಾತು ಬಂದಿದ್ದು, ಅದರಲ್ಲಿದ್ದ ಲಿಂಕ್ ಅನ್ನು ಕೌಶಿಕ್ ಕ್ಲಿಕ್ ಮಾಡಿದಾಗ ಷೇರು ಮಾರುಕಟ್ಟೆಗೆ ಸಂಬಂಧಿಸಿದ ಗ್ರೂಪ್‌ವೊಂದು ಗೋಚರಿಸಿದೆ. ಅದರ ಮೂಲಕ ಕೌಶಿಕ್ ಜು.24 ಮತ್ತು 25ರಂದು ಒಟ್ಟು 33.03 ಲಕ್ಷ ರೂ.ಗಳನ್ನು ಹೂಡಿಕೆ ಮಾಡಿದ ನಂತರ ವಂಚಕರು ಸದರಿ ಟೆಲಿಗ್ರಾಂ ಗ್ರೂಪ್ ಅನ್ನು ಡಿಲೀಟ್ ಮಾಡಿದ್ದಾರೆ. ಅದು ಮಾತ್ರವಲ್ಲದೆ ಇವರೊಂದಿಗೆ ಆನ್‌ಲೈನ್ ಮೂಲಕ ವ್ಯವಹರಿಸಿದ ವ್ಯಕ್ತಿಗಳೂ ಕೂಡ ಸಂಪರ್ಕಕ್ಕೆ ಸಿಗುತ್ತಿಲ್ಲ. ಈ ಸಂಬಂಧ ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಡಿಕ್ಕಿ: ಪಾದಚಾರಿ ಸಾವು

ಮೈಸೂರು, ಜು. 28(ಆರ್‌ಕೆ)– ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ವ್ಯಕ್ತಿ ಸಾವನ್ನಪ್ಪಿದ ಘಟನೆ ಮೈಸೂರಿನ ವಿಜಯನಗರ 1ನೇ ಹಂತದಲ್ಲಿ ಗುರುವಾರ ಸಂಭವಿಸಿದೆ. ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಬಸವರಾಜು(52) ಸಾವನ್ನಪ್ಪಿದವರು. ವಿಜಯನಗರ 1ನೇ ಹಂತದ ಕೊಡವ ಸಮಾಜದಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಅವರು ಗುರುವಾರ ರಾತ್ರಿ ಸುಮಾರು 8.30 ಗಂಟೆ ವೇಳೆಗೆ ಕರ್ತವ್ಯ ಮುಗಿಸಿ ಹಿಂದಿರುಗುತ್ತಿದ್ದಾಗ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಕಡೆಯಿಂದ ಬಂದ ಮಾರುತಿ ಸ್ವಿಫ್ಟ್ ಕಾರೊಂದು ಡಿಕ್ಕಿ ಹೊಡೆಯಿತು. ನೆಲಕ್ಕಪ್ಪಳಿಸಿದ ಬಸವರಾಜು ಅವರ ತಲೆಗೆ ತೀವ್ರ ಗಾಯಗಳಾದ ಕಾರಣ ಅವರು ಸಾವನ್ನಪ್ಪಿದರು ಎಂದು ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹೊಸ ಬ್ರಾಂಡೆಡ್ ಮನೆ ಮಾರಾಟಕ್ಕಿದೆ
20x30 ಡಬಲ್ ಫ್ಲೋರ್ ಹೊಸ ಮನೆ 55 ಲಕ್ಷ ಮಾತ್ರ ಶ್ರೀನಿಧಿ ಎನ್‌ಕ್ಲೇವ್‌ನಲ್ಲಿ ಬೆಳವಾಡಿ ಹುಂಡಾಯಿ ಶೋರೂಮ್ ಹತ್ತಿರ ನಾವೇ ಲೋನ್ ಸಹಿತ ಮಾಡಿಕೊಡುತ್ತೇವೆ.
S.K. CONSTRUCTION 9844239850

EXCELLENT TRAINING FOR DOGS ALL BREEDS



- Obedience • Nature
- Home Manners
- Guarding (Security)
- Show Training & also Boarding Dogs.

Vinod, Dog Trainer Mob: 9148512354

We Build Your DREAM HOME
The moment you feel that you want to build a Dream home. Contact us
2D working Plans, 3D Elevations with complete constructions.
EAST 2 WEST CONSTRUCTIONS Call : 98444 96152 / 87922 26002

ಮನೆ ಮಾರಾಟಕ್ಕಿದೆ
30x40 ಡ್ಯೂಪ್ಲೆಕ್ಸ್ ಮನೆ 3 ಬಿಹೆಚ್‌ಕೆ ಹಾಲ್, ಅಟ್ಯಾಚ್ ಎಲ್ಲಾ ಫರ್ನಿಚರ್ ಟೀಕ್ ವುಡ್ ಕಿಚನ್, ಡೈನಿಂಗ್ ಹಾಲ್, ಸ್ಥಳ: ಶಾರದಾ ಪಬ್ಲಿಕ್ ಸ್ಕೂಲ್ ಹತ್ತಿರ, ದಟ್ಟಗಳ್ಳಿ, ಮೈಸೂರು
9845623058

100% TEAK WOOD FACTORY FINISH DOORS @ DEPOT RATES



10 YEARS WARRANTY www.ssbuildmart.com 9901291267 9845426862

RS CONSTRUCTIONS
20% ಮುಂಗಡ ಹಣವಿದ್ದರೆ ಸಾಕು ನಿಮ್ಮ ಕನಸಿನ ಮನೆಯನ್ನು ಕಟ್ಟಿಕೊಡಲಾಗುವುದು
ಬಾಕಿ 80% ಬ್ಯಾಂಕ್ ಸಾಲದ ವ್ಯವಸ್ಥೆಯನ್ನು ಮಾಡಿಕೊಡಲಾಗುವುದು
ಕೂಡಲೇ ಸಂಪರ್ಕಿಸಿ 7022211622

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

NAMMANE CONSTRUCTIONS
Construction Cost Starts From Rs. 1899/- per sqft
One Stop Solution For All Your Construction Needs.
CALL US NOW - 7899559090 9535216060
* T&C Applicable

ಶಕ್ತಿ ಗುಜರಾತ್ ಬಾಯ್ಲರ್



Shakthi
Commercial & Domestic Boilers available.
* 2 Year Guarantee
Contact: 8296053533 7899806033

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

HOUSE FOR SALE
20x30 Ground & First Floor House, N/F, 4th Stage, 2nd Phase, Vijayanagar, Near Sankalp Appartment Contact owner
9731966134, 9945900167

ಬೇಕಾಗಿದ್ದಾರೆ
ಡ್ರೈವರ್ 10 ಜನ (Bolero Pickups, ಆಕರ್ಷಕ ಸಂಬಳ) + ಊಟದ ಭತ್ಯೆ. ಮಾರ್ಕೆಟಿಂಗ್ ಮ್ಯಾನೇಜರ್ 1 (5 ವರ್ಷ Logistics ಅನುಭವ ಹೊಂದಿರಬೇಕು). ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ 1 (2 ವರ್ಷ Logistics ಹೊಂದಿರಬೇಕು). ಟೆಲಿಕಾಲರ್ (2 ಜನ) (ಕನ್ನಡ, ಇಂಗ್ಲೀಷ್, ಹಿಂದಿ ಮಾತನಾಡಲು ಬರಬೇಕು). ಡಿಜಿಟಲ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ 1 (5 ವರ್ಷ ಅನುಭವ ಹೊಂದಿರಬೇಕು.). ಸಂಪರ್ಕಿಸಿ:
MOVE MY GOODS (ಮೂವ್ ಮೈ ಗೂಡ್ಸ್)
Mob: 9019029036
ಆದರ್ಶರಾಜ್: 6362568155 (Whats app No.)

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194, 9606783264

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ: 8861612486

ಶ್ರೀ ಗೌರಿಶಂಕರ ಟ್ರಾವೆಲ್ಸ್
30–7–2023 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಶನ್, ಕೋಟಿಲಿಂಗ.
28–8–2023 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬಾಬಾಬೈದ್ಯನಾಥ್ ಇತ್ಯಾದಿ.
24–9–2023 (13 ದಿನ): ಹರಿದ್ವಾರ, ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಇತ್ಯಾದಿ.
ವಿಮಾನ / ಬಸ್ / ಊಟ / ರೂಂ.
Mob: 9620002114

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ: 6364079244

ಸಾಲ / LONS
- HOUSE / SITE PURCHASE LOAN
- CONSTRUCTION LOAN
- MORTGAGE LOAN

(Muda, Corporation & Revenue Properties)
7760598705

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9902914891

Sudarshan Saur SOLAR WATER HEATER



ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM Vishwamanava Double Road, Kuvempunagar, Mysuru
9845175443

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER Mob: 9036984793
ಪಂಡಿತ್ ಕೆ.ಎಸ್. ಪಣಿಕ್ಕರ್ (ಕೇರಳ) ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕುಳ್ಳಚೌಡಿ ಅಘೋಚರ ಶಕ್ತಿಯಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ. ಪರಿಹಾರ ತಿಳಿಸುತ್ತಾರೆ.
ಖಾಯಂ ವಿಳಾಸ: ಪಡುವಾರಹಳ್ಳಿ ಸಿಗ್ನಲ್, ಭೂದೇವಿ ಫಾರ್ಮ್ ಎದುರು, ವಿನೋಬ ರಸ್ತೆ, ಮೈಸೂರು–570006

HOUSE FOR RENT
Independent Duplex House with Garage, 4 BHK attached, 23000/- Rent (Negotiable) 3rd Main, Jayalakshmipuram
9945024710

ಜಮೀನು ಮಾರಾಟಕ್ಕಿದೆ
ಒಂದು ಎಕರೆ, 24 ಗುಂಟೆ ಹುಣಸೂರು, ಬೇಗೂರು ಹೆದ್ದಾರಿಯಲ್ಲಿರುವ ತುಂಬಸೋಗೆ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು ಸರ್ವೆ ನಂ. 88, ಸರ್ಕಾರಿ ಪ್ರೌಢಶಾಲೆಗೆ ಹೊಂದಿಕೊಂಡಂತೆ ಜಮೀನು ಮಾರಾಟಕ್ಕಿದೆ
9986992040

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸುಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಹೊಸ ಮನೆ ಮಾರಾಟಕ್ಕಿದೆ (3BHK)
102, ವಿನಾಯಕ ಎನ್‌ಕ್ಲೇವ್, ಉತ್ತರ ದಿಕ್ಕು ನಂತರ ಪಾರ್ಕ್ – ಪೂರ್ವ ಬಾಗಿಲು.
20x35 - 15 ಚದರ ಡ್ಯೂಪ್ಲೆಕ್ಸ್, ವಿಜಯನಗರ 4ನೇ ಹಂತದ ಹತ್ತಿರ ಹಾಗೂ ಹೂಟಗಳ್ಳಿ ವೃತ್ತದಿಂದ 1 ಕಿ.ಮೀ.
9449181735 / 9663816466

ಸೈಟ್ ಮಾರಾಟಕ್ಕಿದೆ
30x40 North Facing, 43 ಲಕ್ಷ, ವಿಜಯನಗರ, 4ನೇ ಹಂತ ಪಕ್ಕ
20x40 North Facing 35 ಲಕ್ಷ, ಪಟ್ಟಣ ಪಂಚಾಯಿತಿ, ವಿಜಯನಗರ
30x40, South Facing 57 ಲಕ್ಷ ರೂಪನಗರ, ಮೈಸೂರು
9986856999

JOB VACANCY
For Reputed Construction Company, Mysore.
Sales Manager - 4yrs To 6yrs Experience in Civil Field.
Share your Resume to nammanehr@gmail.com
9972825343

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹೆಂಗಸರು/ಗಂಡಸರು ಬೇಕಾಗಿದ್ದಾರೆ. 35 ರಿಂದ 50 ವರ್ಷದವರಿಗೆ ಮೊದಲ ಆದ್ಯತೆ
ವೇತನ : 12,000 ರೂ.
7899754149

ಬೇಕಾಗಿದ್ದಾರೆ
ಮನೆಯಲ್ಲೇ ಕುಳಿತುಕೊಂಡು, ಮನೆ ಕೆಲಸ, ಅಡುಗೆ ಮತ್ತು ವೃದ್ಧ ದಂಪತಿಗಳ ಆರೈಕೆ ಮಾಡಲು ಮಹಿಳೆ ಬೇಕಾಗಿದ್ದಾರೆ. ಗ್ರಾಮೀಣ ಮಹಿಳೆಯರಿಗೆ ಮೊದಲ ಆದ್ಯತೆ. ಜಾತಿಭೇದವಿಲ್ಲ. ತಿಂಗಳಿಗೆ 2 ದಿನ ರಜೆ ಸಂಬಳ: 10000/– ಸಂಪರ್ಕಿಸಿ:
9980733384

FOR SALE
Sites measuring 50x30 feet and 25x30 feet with some old property and located in Mysore City Centre. No business with brokers. Interested buyers directly contact.
Bank loan available.
Mob: 6364026397

ಮನೆ ಭೋಗ್ಯಕ್ಕೆ ಲಭ್ಯವಿದೆ
ಅಗ್ರಹಾರ, ಕಲ್ಯಾಣ ಭವನದ ಬಳಿ, ವಠಾರದಲ್ಲಿ (Veg. only).
ಸಂಪರ್ಕಿಸಿ: 9008485845, 9380111424

ಶಿಕ್ಷಣ ಕ್ರಾಂತಿ ಮಕ್ಕಳ ಕಿರು ಚಲನಚಿತ್ರ ಆಡಿಷನ್
ದಿನಾಂಕ 30/7/23, ಭಾನುವಾರ 11 ಗಂಟೆಗೆ ಆಂದೋಲನ ಸರ್ಕಲ್ ಹತ್ತಿರ, ರಾಮಕೃಷ್ಣನಗರ, ಮೈಸೂರಿನಲ್ಲಿ. ಮಕ್ಕಳ ಪಾತ್ರ, ಶಿಕ್ಷಕರ ಪಾತ್ರಕ್ಕೆ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ: ಡಾ|| ಕಸ್ತೂರಿಚಂದ್ರು
Mob: 88676-88676

HOUSE FOR SALE
20x30 Ground Floor & 1st Floor, Duplex. Rs. 67 Lakhs. Negotiable. #21, 2nd Stage, Srirampura, Mysuru.
9538123494, 9632392367

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
40 ವರ್ಷದೊಳಗಿನ ಮಹಿಳಾ ಅಡುಗೆ ಕೆಲಸದವರು ಬೇಕಾಗಿದ್ದಾರೆ. ರಾಮಾನುಜ ರಸ್ತೆ, ಸೆಂಟ್ ಮೇರಿಸ್ ಸ್ಕೂಲ್ ಹತ್ತಿರ, ಚಾಮುಂಡಿಪುರಂ, ಮೈಸೂರು
7349689765

ST.PAUL ENGLISH SCHOOL Bannimantapa, Mysore
WALK IN INTERVIEW ON Monday, 31th July 2023 between 10.30am to 3.30pm
Wanted Teachers
Qualified, Experience with Command in English
1. BEd (PCM) Teachers for High School (English Medium)
7349732300 / 9243526260
Admission are open from LKG to 10th Standard

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
87490 98879

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ಲರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ಲರ ದೈವ ಚೌಡ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ತಿಳಿಸುತ್ತಾರೆ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಗಳು, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು.

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409 ಮೈಸೂರು ಅಗ್ರಹಾರ.
9449774835 ಚಾಮರಾಜನಗರ

2 ಮನೆ ಮಾರಾಟಕ್ಕಿದೆ (ನೇರ ಮಾಲೀಕರು)
20x30 ಡ್ಯೂಪ್ಲೆಕ್ಸ್ S/F (68 ಲಕ್ಷ)
20x30, 3 ಮಹಡಿ N/F (80 ಲಕ್ಷ)
ರಾಮಕೃಷ್ಣನಗರ 'ಜಿ' ಬ್ಲಾಕ್, ವಿವೇಕಾನಂದ ವೃತ್ತದ ಸಮೀಪ ಮಾರಾಟಕ್ಕಿದೆ.
9945761885

Life Partner ಆಗಲು Govt Job ಇರುವ ವರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ
ಒಕ್ಕಲಿಗ ಗೌಡ / Age 40 / 5.5 / BE Govt Engineer Salary 65000, Independent & Well Setteld ಆಗಿರುವಂತಹ ವಿಚ್ಛೇದಿತ ವರನಿಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ 2ನೇ ಸಂಬಂಧಕ್ಕೆ ನೌಕರಸ್ಥ, ವಿಧವೆ, ವಿಚ್ಛೇದಿತ, ವಧು ಬೇಕಾಗಿದ್ದಾರೆ. (ಬಡವರಾದರೂ ಪರವಾಗಿಲ್ಲ) ಮಕ್ಕಳಿದ್ದರೂ ಪರವಾಗಿಲ್ಲ
ಮೈಸೂರು: 9480385742

100% NEEM WOOD PLYWOOD & DOORS @ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267 98454 26862

ಬೇಕಾಗಿದ್ದಾರೆ
ಕಾರ್‌ವಾಷ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಬಳ: 12,000/–. ಊಟ, ತಿಂಡಿ, ವಸತಿ ಸೌಲಭ್ಯವಿದೆ. ಸಂಪರ್ಕಿಸಿ:
9036614475, 8904460083

30x40 E/F ಸೈಟು @ Rs.15 ಲಕ್ಷ
DTCP APPROVED SITE
ತಕ್ಷಣ ನೋಂದಣಿ/ಬ್ಯಾಂಕ್ ಲೋನ್ ಲಭ್ಯ. ಲಲಿತಾದ್ರಿಪುರ ರಿಂಗ್ ರಸ್ತೆ ನಿಂದ 6 KMS ಮೈಸೂರು ಸಿಟಿ ಇಂದ 15 KMS
9538583377

ತಿ.ನರಸೀಪುರದಲ್ಲಿ
ವಾಣಿಜ್ಯ ಕಟ್ಟಡ ಬಾಡಿಗೆಗೆ/ಭೋಗ್ಯಕ್ಕೆ 60x30 = 1800 ಚ.ಅಡಿ 2ನೇ ಅಂತಸ್ತು ಸಾರ್ವಜನಿಕ ಆಸ್ಪತ್ರೆ ಮುಖ್ಯ ರಸ್ತೆ, ಬಿ.ಟಿ ಸೂಪರ್ ಮಾರ್ಕೆಟ್ ಬಿಲ್ಡಿಂಗ್, ಪ್ರೈವೇಟ್ ಬಸ್ ಸ್ಟಾಂಡ್ ಹತ್ತಿರ, Suitable for Gym, Financial Small Bank, Offices, Coaching Classes Etc...
9448390643 9663961971

40x60 N/F ಸೈಟು @ Rs.25 ಲಕ್ಷ
DTCP APPROVED SITE
Brahmins Layout 'E' Block ಸಪ್ತಋಷಿ ನಗರ, ಹೆಚ್.ಡಿ.ಕೋಟೆ ರಸ್ತೆ ದೇವಗಳ್ಳಿ ಗ್ರಾಮ, ಮೈಸೂರು ನಿಂದ 6 KMS ರಿಂಗ್ ರೋಡ್‌ನಿಂದ
9538583377

SHOP FOR RENT
Shop No.25, Muda Complex, New Kalidasa Road,
HOUSE FOR SALE
30X40, East Facing, 3BHK Ground Floor, Vijayanagar 2nd Stage
9341414144 9343666777

Independent House HOUSE FOR RENT
HIG 20, 2BHK, Dining Room. Car Parking, On 40×60 Site Near A R Hospital, New Kantaraja Urs Road, Sharada Devi Nagar
99641 39978

ಸೈಟುಗಳು ಮಾರಾಟಕ್ಕಿವೆ
30x40 S/F, ಎಸ್.ಬಿ.ಎಂ. ಬೋಗಾದಿ, ಡಿ.ಬ್ಲಾಕ್
30x40 W/F ವಿಜಯನಗರ, 2ನೇ ಹಂತ, 20x30, 30x40 E/F ವಿಜಯನಗರ 4ನೇ ಹಂತ, 2ನೇ ಘಟ್ಟ
9731870126

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ, ವಿದ್ಯಾರ್ಹತೆ : 7 ರಿಂದ PUC ಮತ್ತು ITI (Fitter)
9480404036

WANTED
A Reputed Lodge in the heart of the city is looking for a receptionist role, those having previous Experience & Freshers also can apply (Having Computer & Hotel industry knowledge Preferred)
9663747452 9663427888

ಮೈಸೂರು ಮ್ಯಾರೇಜ್ ಬ್ಯೂರೋ
ವಿಶ್ವಕರ್ಮ ಸುಂದರ ಶ್ರೀಮಂತ ಒಬ್ಬನೇ ವಿಧುರನಿಗೆ ಸುಂದರ ವಿದ್ಯಾವಂತ ವಿಶ್ವಕರ್ಮ ಅಥವಾ ಯಾವುದೇ ಜಾತಿಯ ಸಸ್ಯಾಹಾರಿ ವಧು–ವಿಧವೆ ವಿಚ್ಛೇದಿತರು ನೇರ ಸಂಪರ್ಕಿಸಿ
ಡಾ. ಗುರೂಜಿ 9448229184 7899625268

FOR SALE
40x60 site for sale in old RT Nagar 45x60 old house for sale in Vidyaranyapuram 28x41 site for sale in Kuvempu Layout
9880344263

ಮನೆ ಬಾಡಿಗೆಗೆ ಇದೆ
2BHK, 2ನೇ ಮಹಡಿ, 30x40 ಸೂರ್ಯ ಬೇಕರಿ ಸರ್ಕಲ್ ಹತ್ತಿರ, ಹೆಬ್ಬಾಳ್, ಚಾಮುಂಡೇಶ್ವರಿ ದೇವಸ್ಥಾನದ ಮುಂದೆ ಅಟ್ಯಾಚ್ಡ್ ಬಾತ್ ರೂಂವುಳ್ಳ ಸೋಲಾರ್ ಇದೆ
9845480493 7204789481

ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
BSE-BED- 01
NST - 01
DPEd/BEPEd- 01
6360942194 8147472526

ಮನೆ ಮಾರಾಟಕ್ಕಿದೆ
3 ಬೆಡ್ ರೂಮ್‌ನ ಹೊಸ ಮನೆ ಮಾರಾಟಕ್ಕಿದೆ 20x30 ದಟ್ಟಗಳ್ಳಿ ಮೈಸೂರು ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ Price: 79 Lakhs
ಮಾಲೀಕರು ಸಂಪರ್ಕಿಸಿ: 6361295132

ಬೇಕಾಗಿದ್ದಾರೆ
ಷೇರು ಮಾರುಕಟ್ಟೆ ಬಗ್ಗೆ (ಕನ್ನಡ ಭಾಷೆಯಲ್ಲಿ) ತರಬೇತಿ ನೀಡಲಾಗುತ್ತದೆ
9036212332

SITE FOR IMMEDIATE SALE
40X60 West Facing Site with Clear Titles, Opposite to JSS Layout, Varuna, Mysore
7676797073

ಮನೆ ಮಾರಾಟಕ್ಕಿದೆ
ಹೂಟಗಳ್ಳಿ KHB Colonyಯ ಹತ್ತಿರ ಚಾಮುಂಡೇಶ್ವರಿ ನಗರ ರಸ್ತೆ, ಬೆಳವಾಡಿ R.M.P.R Layout ವಿನಾಯಕ ಎನ್‌ಕ್ಲೇವ್ ಹತ್ತಿರ 20x40 ಅಳತೆಯ ನಿವೇಶನ ಸಂಖ್ಯೆ 42ರಲ್ಲಿ ಸ್ವಂತ ವಾಸಕ್ಕೆ ನಿರ್ಮಿಸಿದ Duplex 3BHK ಬೋರ್‌ವೆಲ್ Water Purifier ಅಳವಡಿಸಿರುವ ಸುಸಜ್ಜಿತ ಮನೆ ಮಾರಾಟಕ್ಕಿದೆ. ಬೆಲೆ: 65 ಲಕ್ಷ (Negotiable) ನಗರ ಸಭೆ ಹೂಟಗಳ್ಳಿಗೆ ಸೇರಿದೆ. D.C.Convertion, 11B ಖಾತಾ ಹೊಂದಿದೆ. ನಮೂನೆ 3 ಪಡೆದು ನೀಡುತ್ತೇವೆ. (ನೇರ ಖರೀದಿದಾರರಿಗೆ ಆದ್ಯತೆ)
9980735441

WANTED
Sales Boys Girls for Sports Shop Partime & Full Time Contact Immediatly
7760109047 8105368325

WORK FROM HOME
ಮನೆಯಿಂದಲೇ ಮೊಬೈಲ್ ಮತ್ತು ಲ್ಯಾಪ್‌ಟಾಪ್‌ನಲ್ಲಿ Form Filling (Data Entry ಡೇಟಾ ಎಂಟ್ರಿ ಮಾಡಿ ತಿಂಗಳಿಗೆ 15000/– ರಿಂದ 18500/– ಸಂಪಾದಿಸಿ
8073439137

3BHK ಹೊಸ ಮನೆ ಬಾಡಿಗೆಗೆ/ ಭೋಗ್ಯಕ್ಕೆ ಇದೆ
ಹಾಗೂ 3 ಮಳಿಗೆಗಳು ಬಾಡಿಗೆ – ಭೋಗ್ಯಕ್ಕಿದೆ SBM ಲೇಔಟ್ ಭೋಗಾದಿ ಪಕ್ಕ ಮೈಸೂರು
9483051207

CO-OP SOCIETY
- Accounts Maintenance
- Income Tax Returns
- GST Returns
- TDS Filing
- Year End A/cs Finalising

9901807052

ಶ್ರೀ ವಿಶ್ವಕರ್ಮ ಪತ್ತಿನ ಸಹಕಾರ ಸಂಘ (ನಿ.)
ನಂ.744, 1ನೇ ಮಹಡಿ, ಕಾಮಟಗೇರಿ ಕಾಳಮ್ಮ ದೇವಸ್ಥಾನ ರಸ್ತೆ, ಮೈಸೂರು–21
ದಿನಾಂಕ: 06–08–2023 ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸಂಘದ 19ನೇ ವಾರ್ಷಿಕ ಮಹಾಸಭೆಗೆ ಸದಸ್ಯರು ಆಗಮಿಸಬೇಕಾಗಿ ವಿನಂತಿ.
ಸ್ಥಳ: ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಮುಡಾ ಕಚೇರಿ ಪಕ್ಕ, ಮೈಸೂರು
ಅಧ್ಯಕ್ಷರು– ಎಸ್.ವಿಜಯಕುಮಾರ್

ಮನೆ ಬಾಡಿಗೆಗೆ ಇದೆ
1 ರೂಂ ಅಥವಾ 2 ರೂಂಗೆ ಅವಕಾಶವಿರುವ (G.F) ಮನೆ ಅಕ್ಷಯ ಭಂಡಾರ ಹತ್ತಿರ, ನ್ಯೂ ಕಾಂತರಾಜ್ ಅರಸು ರಸ್ತೆ, ಸರಸ್ವತಿಪುರಂ ಸಸ್ಯಾಹಾರಿಗಳಿಗೆ ಮಾತ್ರ
7760923685

MUDA APPROVED SITES FOR SALE @ SAPTHAMATHRUKA LAYOUT
40 X 60 - 38 Lakhs *(Nego)*
30 X 40 - 21 Lakhs *(Nego)*
88927 48934 78923 28320

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಹಾಡಿಗಳಿಗೆ ಸುಪ್ರೀಂಕೋರ್ಟ್ ಸತ್ಯಶೋಧನಾ ಸಮಿತಿ ಭೇಟಿ

ಅರಣ್ಯ ಹಕ್ಕುಗಳ ಉಲ್ಲಂಘನೆ ಕುರಿತು ಪರಿಶೀಲನೆ, ಮಾಹಿತಿ ಸಂಗ್ರಹ



ಹುಣಸೂರು.ಜು.28– ಆದಿವಾಸಿಗಳ ಹಕ್ಕು ಉಲ್ಲಂಘನೆ ಪ್ರಕರಣಗಳ ಕುರಿತು ಪರಿಶೀಲಿಸಿ, ಅಧ್ಯಯನ ನಡೆಸಲು ರಚಿಸಲಾಗಿರುವ ಸುಪ್ರೀಂ ಕೋರ್ಟ್ ಸತ್ಯಶೋಧನಾ ಸಮಿತಿ ತಾಲೂಕಿನ ಚಿಕ್ಕಹೆಜ್ಜೂರು ಮತ್ತು ಕೊಳವಿ ಹಾಡಿಗಳಿಗೆ ಭೇಟಿ ನೀಡಿತು.

ಸತ್ಯಶೋಧನಾ ಸಮಿತಿಯ ಸದಸ್ಯ, ಪರಿಸರ ತಜ್ಞ ವಿ.ಕೆ.ಬಹುಗುಣ, ಸರ್ವೋಚ್ಚ ನ್ಯಾಯಾಲಯದ ಹೆಸರಾಂತ ವಕೀಲರು ಸತ್ಯ ಶೋಧನಾ ಸಮಿತಿಯ ಸದಸ್ಯರೂ ಅದ ರಿತ್ವಿಕ್‌ದತ್ತ ಮತ್ತು ಮತ್ತೋರ್ವ ಸದಸ್ಯರಾದ ಸಂಜಯ್ ಕುಲಕರ್ಣಿ ಅವರು ಅರಣ್ಯ ಹಕ್ಕು ಮಾನ್ಯ ಮಾಡುವಲ್ಲಿ ಆಗಿರುವ ಲೋಪಗಳನ್ನು ಹಾಡಿ ಅರಣ್ಯ ಹಕ್ಕು ಸಮಿತಿಗಳ ಪದಾಧಿಕಾರಿಗಳಿಂದ ಆಲಿಸಿದರು.

ಅಯ್ಯನಕೆರೆ ಹಾಡಿ ಅರಣ್ಯ ಹಕ್ಕು ಸಮಿತಿಯ ಶಿವಣ್ಣ, ಶೆಟ್ಟಳ್ಳಿ ಹಾಡಿ ಅರಣ್ಯ ಹಕ್ಕು ಸಮಿತಿಯ ಪಿ.ಕೆ.ರಾಮು, ಕೊಳವಿಗೆ ಹಾಡಿಯ ಅರಣ್ಯ ಹಕ್ಕು ಸಮಿತಿಯ ನಾಗೇಶ ಮಾಹಿತಿ ನೀಡಿದರು. 2009–10ರಲ್ಲಿ ನಿಯಮಾನುಸಾರ ಅರ್ಜಿ ಸಲ್ಲಿಸಲಾಗಿತ್ತು. ನಮ್ಮ ಅರ್ಜಿಗಳನ್ನು ಮಾನ್ಯ ಮಾಡದೆ ವನ್ಯಜೀವಿ ಅರಣ್ಯ ಪ್ರದೇಶವೆಂದು ಕಾರಣವೊಡ್ಡಿ ವೈಯಕ್ತಿಕ ಹಕ್ಕುಗಳನ್ನು ತಿರಸ್ಕರಿಸಲಾಗಿದೆ ಎಂದರು.

ಇದರಿಂದಾಗಿ ಕಳೆದ 50 ವರ್ಷಗಳಿಂದ ಸಂಕಷ್ಟದ ಬದುಕನ್ನು ಸಾಗಿಸುತ್ತಿದ್ದೇನೆ. ಅರಣ್ಯ ಹಕ್ಕು ಕಾಯ್ದೆ ಅನ್ವಯ ನಮಗೆ ವೈಯಕ್ತಿಕ ಅರಣ್ಯ ಭೂಮಿ ಹಕ್ಕು ಹಾಗೂ ಸಾಮೂಹಿಕ ಅರಣ್ಯ ಹಕ್ಕು ಮಾನ್ಯ ಮಾಡಲು ಸಂಬಂಧಪಟ್ಟ ಜಿಲ್ಲಾ ಅರಣ್ಯ ಹಕ್ಕು ಸಮಿತಿಗೆ ರಾಜ್ಯ ಸರ್ಕಾರ ಮಾರ್ಗದರ್ಶನ ನೀಡುವಂತೆ ಸತ್ಯ ಶೋಧನಾ ಸಮಿತಿಯು ಸರ್ವೋಚ್ಚ ನ್ಯಾಯಾಲಯ, ರಾಷ್ಟ್ರಪತಿ ಹಾಗೂ ಪರಿಶಿಷ್ಟ ವರ್ಗಗಳ ಆಯೋಗಕ್ಕೆ ಮನವರಿಕೆ ಮಾಡಿಕೊಡಬೇಕೆಂದು ವಿನಂತಿಸಿದರು.

ಇದೇ ಸಂದರ್ಭದಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನ ರಾಣಿಗೇಟ್ ಹಾಡಿಯ ಅರಣ್ಯ ಹಕ್ಕು ಸಮಿತಿಯ ಪ್ರತಿನಿಧಿ ಜೆ.ಡಿ.ಜಯಪ್ಪ ಮಾತನಾಡಿ, ಪಿರಿಯಾಪಟ್ಟಣ ತಾಲೂಕಿನ 38 ಹಾಡಿಗಳಿಂದ 987 ಅರ್ಜಿ ಸಲ್ಲಿಸಿದ್ದು ಈ ಪೈಕಿ 115 ಕುಟುಂಬಗಳಿಗೆ ಮಾತ್ರ 5 ಗುಂಟೆ, 10 ಗುಂಟೆ ಹಕ್ಕು ಪತ್ರ ನೀಡಲಾಗಿದೆ. ಒಟ್ಟಾರೆಯಾಗಿ ಅನ್ಯಾಯ ಮಾಡಲಾಗಿದೆ ಎಂದರು. ಡೀಡ್ ಸಂಸ್ಥೆಯ ನಿರ್ದೇಶಕ ಡಾ.ಎಸ್.ಶ್ರೀಕಾಂತ್ ಸತ್ಯ ಶೋಧನಾ ಸಮಿತಿಗೆ ಹುಣಸೂರು ತಾಲೂಕಿನಲ್ಲಿ ಅರಣ್ಯ ಹಕ್ಕು ಮಾನ್ಯ ಮಾಡುವಲ್ಲಿ ಆಗಿರುವ ಅನ್ಯಾಯವನ್ನು ವಿವರಿಸಿದರು.

ವನವಾಸಿ ಕಲ್ಯಾಣದ ಮೈಸೂರು ಸಂಯೋಜಕರಾದ ಶ್ರೀನಿವಾಸ್‌ರವರು ಭಾಷಾಂತರಿಸಿದರು. ವಿಧಾನಪರಿಷತ್ ಸದಸ್ಯರಾದ ಸೀತರಾಮ್ ಸಿದ್ದಿಯವರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಮೈಸೂರಿನ ಐಟಿಡಿಪಿ ಕಚೇರಿಯಲ್ಲಿ ಅಧಿಕಾರಿಗಳ ಜೊತೆ ನಡೆಯುವ ಸಂವಾದದಲ್ಲಿ ಆದಿವಾಸಿ ಪ್ರತಿನಿಧಿಗಳು ಪಾಲ್ಗೊಳ್ಳಬೇಕೆಂದರು. ವನವಾಸಿ ಕಲ್ಯಾಣದ ರಾಷ್ಟ್ರೀಯ ನಾಯಕರಾದ ಗಿರೀಶ್ ಕುಬೇರ್ ಎಲ್ಲ ಮಾಹಿತಿಗಳನ್ನು ಆಲಿಸಿದರು.

ತಾಲೂಕು ಪರಿಶಿಷ್ಟ ಕಲ್ಯಾಣ ಅಧಿಕಾರಿ ಬಸವರಾಜು, ವೀರನಹೊಸಳ್ಳಿ ವಲಯ ಅರಣ್ಯ ಅಧಿಕಾರಿಗಳು, ಮೈಸೂರಿನ ವಕೀಲ ತಮ್ಮಯ್ಯ, ಬುಡಕಟ್ಟು ಕೃಷಿಕರ ಸಂಘದ ಪಿ.ಕೆ.ರಾಮು, ಜಯಪ್ಪ, ಶಿವಣ್ಣ, ವಿಠಲ್ ಹಾಗೂ ವನವಾಸಿ ಕಲ್ಯಾಣದ ಕಾರ್ಯಕರ್ತರಾದ ಪಾಟೀಲ್, ಮಣಿಕಂಠ, ಗಣೇಶ್, ಶಿವಣ್ಣ, ಡೀಡ್ ಸಂಸ್ಥೆಯ ಸಂಯೋಜಕ ಎ.ಪ್ರಕಾಶ್, ವಿವಿಧ ಅರಣ್ಯ ಹಕ್ಕು ಸಮಿತಿಯ ಪ್ರತಿನಿಧಿಗಳು ಮತ್ತು ಆದಿವಾಸಿಗಳ ಸ್ಥಿತಿಗತಿ ಅಧ್ಯಯನಕ್ಕಾಗಿ ಆಗಮಿಸಿರುವ ಪುತ್ತೂರಿನ ಸೇಂಟ್ ಫಿಲೋಮಿನ ಕಾಲೇಜಿನ ಸಮಾಜ ಕಾರ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರಾದ ಪ್ರತಿಭಾ ಮತ್ತು ಶೀತಲ್ ಹಾಜರಿದ್ದರು.

ರಾಂಪುರ ಗ್ರಾಪಂ ಬಿಜೆಪಿ ತೆಕ್ಕೆಗೆ

ಮಲ್ಕುಂಡಿ: ನಂಜನಗೂಡು ತಾಲೂಕಿನ ರಾಂಪುರ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಹೆಚ್.ಎಸ್.ರಾಣಿ, ಉಪಾಧ್ಯಕ್ಷರಾಗಿ ಸಿದ್ದನಾಯಕ ಆಯ್ಕೆಯಾಗಿದ್ದಾರೆ.

ಬಿಜೆಪಿ ಬೆಂಬಲಿತ ಅಭ್ಯರ್ಥಿ ಹೆಚ್.ಎಸ್.ರಾಣಿ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಶಿವಮ್ಮ ಅವರು ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು.

ಹೆಚ್.ಎಸ್.ರಾಣಿ 12 ಮತ ಪಡೆದು ಜಯಶೀಲರಾದರೆ ಶಿವಮ್ಮ 9 ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಸಿದ್ದನಾಯಕ ಒಬ್ಬರೆ ನಾಮಪತ್ರ ಸಲ್ಲಿಸಿದ್ದು ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಇವರಿಬ್ಬರ ಆಯ್ಕೆಯನ್ನು ಚುನಾವಣಾಧಿಕಾರಿ ಮಲ್ಲಿಕಾರ್ಜುನ ಸ್ವಾಮಿ ಘೋಷಣೆ ಮಾಡಿದರು.

ಗ್ರಾಪಂ ಸದಸ್ಯರುಗಳಾದ ನಾಗರಾಜು, ರಾಜಶೇಖರಪ್ಪ, ಜಯಮ್ಮ, ಬಸವಣ್ಣ, ನಿಂಗಮಣಿ, ಮಂಗಳ, ಸುಶೀಲಮ್ಮ, ಶಿವಮ್ಮ, ಶ್ರೀನಿವಾಸ, ಇದ್ರಮ್ಮ, ಮುಖಂಡರುಗಳಾದ ಬಿದರಗೂಡು ಕುಮಾರ್, ಸಿದ್ದರಾಜು, ಮಹದೇವಸ್ವಾಮಿ, ಚಂದ್ರ, ಸುರೇಶ್, ಕೆಂಬಾಲ್ ಮಹದೇವಸ್ವಾಮಿ ಸೇರಿದಂತೆ ಪ್ರಮುಖರು ಹಾಜರಿದ್ದರು.



ನಾಗವಾಲ ಗ್ರಾಪಂ ಅಧ್ಯಕ್ಷರಾಗಿ ಶ್ರೀಮತಿ ಕಾಮಾಕ್ಷಮ್ಮ ಬಸವನಾಯಕ ಆಯ್ಕೆ



ಮೈಸೂರು, ಜು.28– ನಿರ್ಗಮಿತ ಅಧ್ಯಕ್ಷರಾದ ಸಿ.ನರೇಂದ್ರರ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಮೈಸೂರು ತಾಲೂಕಿನ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಶ್ರೀಮತಿ ಕಾಮಾಕ್ಷಮ್ಮ ಬಸವನಾಯಕ, ಉಪಾಧ್ಯಕ್ಷರಾಗಿ ಶ್ರೀಮತಿ ಭಾಗ್ಯ ರಮೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭ ಗ್ರಾಪಂ ಅಭಿವೃದ್ಧಿ ಅಧಿಕಾರಿ ಡಾ.ಶೋಭಾರಾಣಿ, ಕಾರ್ಯದರ್ಶಿ ಎಂ.ಯಶ್ವಂತ, ಗ್ರಾಪಂ ಸದಸ್ಯರಾದ ಸೀಗಳ್ಳಿ ಕುಮಾರ್, ಆಶಾ ಸೋಮಣ್ಣ, ಬೊಮ್ಮೇನಹಳ್ಳಿ ಬಿ.ಕೆ. ಈಶ್ವರ್, ಗೀತಾ ಮಹದೇವ್, ಕೆಂಪೇಗೌಡ, ನಾಗವಾಲ ಮಹೇಶ್ವರಿ, ಯಶೋಧಮ್ಮ ಟಿ.ಕೆ. ಸವಿತ, ಹುಯಿಲಾಳು ಗೌರಮ್ಮ, ಮಮತ ಶಿವಕುಮಾರ್, ಬಿ.ಶ್ರೀಧರ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹೆಚ್.ಕೆ. ಚಂದ್ರಶೇಖರ್, ಮಾಜಿ ಗ್ರಾಪಂ ಸದಸ್ಯರಾದ ಹುಯಿಲಾಳು ರಾಮಸ್ವಾಮಿ, ಕೆ. ಮಹೇಶ್, ಕೋಡಿಪ್ರಕಾಶ್, ರೇವಣ್ಣ, ಕಮರಹಳ್ಳಿ ಸಂತೋಷ್, ಹಿನಕಲ್ ಮಂಜು, ಬಿಳಿಕೆರೆ ಸ್ವಾಮಿ, ನಾಗರಾಜ್, ಬಂಡಿಪಾಳ್ಯ ವಿಜಯ್ ಕುಮಾರ್, ಸಾಹುಕಾರಹುಂಡಿ ಶಿವಣ್ಣ, ಕೋಡಿ ಕುಮಾರ್, ಸಿದ್ದನಾಯಕ, ಜವರನಾಯಕ, ಪಾಪನಾಯಕ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ವಿವೇಕ್ ಚುನಾವಣಾಧಿಕಾರಿಯಾಗಿದ್ದರು. 2023–24ನೇ ಸಾಲಿನ 2ನೇ ಅವಧಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಮಾಡಲಾಯಿತು.

ಕಸುವಿನಹಳ್ಳಿ ಗ್ರಾಮ ಪಂಚಾಯಿತಿ ಬಿಜೆಪಿ ತೆಕ್ಕೆಗೆ



ಮಲ್ಕುಂಡಿ, ಜು.28– ನಂಜನಗೂಡು ತಾಲೂಕಿನ ಕಸುವಿನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಮಂಜುಳಾ ದೊರೆಸ್ವಾಮಿ, ಉಪಾಧ್ಯಕ್ಷರಾಗಿ ಮಂಗಳಮ್ಮ ಕುಮಾರ್ ಆಯ್ಕೆಯಾದರು.

20 ಜನ ಸದಸ್ಯ ಬಲದ ಕಸುವಿನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಶುಕ್ರವಾರ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆ, ಉಪಾಧ್ಯಕ್ಷ ಸ್ಥಾನ ಎಸ್.ಟಿ ಮಹಿಳೆಗೆ ನಿಗದಿಯಾಗಿತ್ತು. ಮಂಜುಳಾ ದೊರೆಸ್ವಾಮಿ ಅವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಮಂಗಳಮ್ಮ 11 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರೆ, ಪ್ರತಿಸ್ಪರ್ಧಿ ನಂಜಮ್ಮ 9 ಮತಗಳನ್ನು ಪಡೆದರು. ಚುನಾವಣಾಧಿಕಾರಿಯಾಗಿದ್ದ ಲೋಕೋಪಯೋಗಿ ಇಲಾಖೆಯ ಎಇಇ ಸತ್ಯನಾರಾಯಣ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆಯನ್ನು ಘೋಷಿಸಿದರು. ಇದೇ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷರಾದ ಸ್ವಾಮಿ, ವನಜಾಕ್ಷಮ್ಮ, ಗ್ರಾಪಂ ಸದಸ್ಯರಾದ ವಣಕಾರ, ಪುಟ್ಟಸ್ವಾಮಿ, ಚಿಕ್ಕನಾಯಕ, ಎಲ್.ಸಿ.ಮಹೇಶ, ಸುಧಾ, ಮುಖಂಡರಾದ ಕೆ.ಎಂ.ಶಿವಪ್ಪ, ಜಗದೀಶ್, ಮಹದೇವು, ಕುಮಾರ್, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಲಾಟರಿ ಮೂಲಕ ಒಲಿದ ಅಧ್ಯಕ್ಷ ಸ್ಥಾನ



ನಂಜನಗೂಡು, ಜು.28– ತಾಲೂಕಿನ ಹುಳಿಮಾವು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಶಿವರಾಮ ನಾಯಕ, ಲಾಟರಿ ಮೂಲಕ ಆಯ್ಕೆಯಾದರೆ ಉಪಾಧ್ಯಕ್ಷರಾಗಿ ನೀಲಮ್ಮ ಅವಿರೋಧ ಆಯ್ಕೆಯಾದರು.

16 ಸದಸ್ಯ ಬಲದ ಹುಳಿಮಾವು ಗ್ರಾಮ ಪಂಚಾಯಿತಿಯಲ್ಲಿ ಕಾಂಗ್ರೆಸ್ ಪಕ್ಷ 8 ಸ್ಥಾನ, ಬಿಜೆಪಿ 8 ಸ್ಥಾನಗಳನ್ನು ಪಡೆದಿತ್ತು ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿಯಾಗಿ ಶಿವರಾಮ ನಾಯಕ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಅಭಿ ನಾಮಪತ್ರ ಸಲ್ಲಿಸಿದರು. ಇಬ್ಬರಿಗೂ ತಲಾ 8 ಮತ ಲಭಿಸಿ ಸಮಬಲ ಕಾಯ್ದುಕೊಂಡ ಹಿನ್ನೆಲೆಯಲ್ಲಿ ಲಾಟರಿ ಮೂಲಕ ಅಧ್ಯಕ್ಷರನ್ನು ಆಯ್ಕೆಗೊಳಿಸಲಾಯಿತು. ಶಿವರಾಮ ನಾಯಕ ಲಾಟರಿ ಮೂಲಕ ಅದೃಷ್ಟ ಒಲಿದು ಅಧ್ಯಕ್ಷರಾಗಿ ಆಯ್ಕೆ ಯಾದರು. ಚುನಾವಣಾಧಿಕಾರಿಯಾಗಿ ಕೃಷಿ ಸಹಾಯಕ ನಿರ್ದೇಶಕ ದೀಪಕ್ ಕಾರ್ಯ ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷರಾದ ರಂಗಸ್ವಾಮಿ(ರಮೇಶ), ನೀಲಮ್ಮ, ಸದಸ್ಯರಾದ ಎಂ.ಮಹೇಶ್, ಸಾವಿತ್ರಿ, ಪದ್ಮ, ಭಾಗ್ಯ, ಬಸವರಾಜು ಸೇರಿದಂತೆ ಹುಳಿಮಾವು ಗ್ರಾಮದ ಗ್ರಾಮಸ್ಥರು ಇದ್ದರು.

ಜಿ.ಬಿ.ಸರಗೂರು ಗ್ರಾಪಂಗೆ ಶಿವರಾಜು ಅಧ್ಯಕ್ಷ, ವೆಂಕಟಮ್ಮ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ



ಹೆಚ್.ಡಿ.ಕೋಟೆ: ತಾಲೂಕಿನ ಜಿ.ಬಿ. ಸರಗೂರು ಗ್ರಾಪಂ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ನಡೆದು, ಅಧ್ಯಕ್ಷರಾಗಿ ಶಿವರಾಜು, ಉಪಾಧ್ಯಕ್ಷರಾಗಿ ವೆಂಕಟಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ನಾಗರಾಜು ಕಾರ್ಯ ನಿರ್ವಹಿಸಿದರು.

ಸದಸ್ಯರಾದ ಮಮತಾ, ಸುಧಾ, ವಿಜಯ, ಗೌರಿ, ಗಾರೆ ಈರೇಗೌಡ, ಕುಮಾರ, ವೆಂಕಟೇಶ್, ಮಾಜಿ ಉಪಾಧ್ಯಕ್ಷ ಕೃಷ್ಣೇಗೌಡ, ಹಾಲನಹಳ್ಳಿ, ಕ್ಯಾತನಹಳ್ಳಿ, ಜಿ.ಬಿ.ಸರಗೂರು, ಕಣಿಯನಹುಂಡಿ, ಬೆಟ್ಟದಬೀಡು, ಮುದ್ದಯ್ಯನಹುಂಡಿ, ಗೊಲ್ಲಂಬಿಡು, ಜೆಡಿಎಸ್ ಕಾರ್ಯಕರ್ತರು, ಗ್ರಾಮದ ಮುಖಂಡರು ಭಾಗವಹಿಸಿದ್ದರು.

ವ್ಹೀಲಿಂಗ್ ಮಾಡುತ್ತಿದ್ದ ಯುವಕ ಪೊಲೀಸರ ವಶಕ್ಕೆ

ನಂಜನಗೂಡು: ನಗರದ ಆಶೀರ್ವಾದ್ ಹೋಟೆಲ್ ಸಮೀಪದ ಮುಖ್ಯರಸ್ತೆಯಲ್ಲಿ ಗುರುವಾರ ಸಂಜೆ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ಯುವಕನನ್ನು ಸಂಚಾರ ವಿಭಾಗದ ಪೊಲೀಸರು ವಶಕ್ಕೆ ಪಡೆದಿದ್ದಾರೆ.


ನಗರದ ನಂಜನಗೂಡು–ಮೈಸೂರು ಚತುಷ್ಪಥ ರಸ್ತೆಯಲ್ಲಿ ಅಜಾಗರೂಕತೆಯಿಂದ ಸ್ಕೂಟರ್ ವ್ಹೀಲಿಂಗ್ ಮಾಡುತ್ತಿದ್ದ ಯುವಕನನ್ನು ಬಂಧಿಸಿ, ಸ್ಕೂಟರ್‌ನ್ನು ವಶಕ್ಕೆ ಪಡೆಯಲಾಗಿದೆ. ರಸ್ತೆಯಲ್ಲಿ ವ್ಹೀಲಿಂಗ್ ಮಾಡುವವರ ಮೇಲೆ ಕಠಿಣ ಕ್ರಮವಹಿಸಲಾಗುವುದು ಎಂದು ಸಂಚಾರ ವಿಭಾಗದ ಪಿಎಸ್‌ಐ ಯಾಸ್ಮಿನ್ ತಾಜ್ ಎಚ್ಚರಿಕೆ ನೀಡಿದ್ದಾರೆ. ಸಂಚಾರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಳ್ಳೂರುಹುಂಡಿಯಲ್ಲಿ ಹುಲಿ ದಾಳಿಗೆ ಹಸು ಬಲಿ

ಮಲ್ಕುಂಡಿ: ಹುಲಿಯೊಂದು ಹಾಡಹಾಗಲೇ ಹಸುವೊಂದರ ಮೇಲೆ ದಾಳಿ ನಡೆಸಿ ಕೊಂದುಹಾಕಿರುವ ಘಟನೆ ನಂಜನಗೂಡು ತಾಲೂಕಿನ ಬಳ್ಳೂರಹುಂಡಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರಕ್ಷಿತ್ ತಮ್ಮ ಜಮೀನಿನಲ್ಲಿ ಹಸುವನ್ನು ಕಟ್ಟಿಹಾಕಿ ಕೆಲಸ ಮಾಡುತ್ತಿದ್ದ ವೇಳೆ ಹುಲಿಯು ಏಕಾಏಕಿ ದಾಳಿ ಮಾಡಿ ಅರೆ ಬರೆ ತಿಂದು ಬಿಟ್ಟು ಹೋಗಿದೆ. ಇದನ್ನು ಕಂಡ ಅಕ್ಕ–ಪಕ್ಕದ ರೈತರು ಗಾಬರಿಗೊಂಡು ತಕ್ಷಣ ಅರಣ್ಯಾಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ.

ರೈತ ಶಿವನಾಗಪ್ಪ ಮಾತನಾಡಿ, ಕಾಡಂಚಿನ ಗ್ರಾಮವಾದ ಬಳ್ಳೂರಹುಂಡಿ ಗ್ರಾಮದಲ್ಲಿ ಹಗಲಿನಲ್ಲೇ ಹುಲಿಕಾಟ ಹೆಚ್ಚಾಗಿದೆ. ರೈತರು ತಮ್ಮ ಜಮೀನುಗಳಿಗೆ ಹೋಗಿ ಕೆಲಸ ಮಾಡಲು ಭಯಬೀತರಾಗಿದ್ದಾರೆ. ಒಂದೆಡೇ ರೈತರು ಬೆಳೆದ ಫಸಲುಗಳನ್ನು ಕಾಡಾನೆ ನಾಶ ಮಾಡಿದರೆ ಇನ್ನೊಂದಡೆ ಹುಲಿ, ಚಿರತೆಗಳ ಕಾಟ ಹೆಚ್ಚಾಗಿದೆ ಆದ್ದರಿಂದ ರೈಲ್ವೆ ಕಂಬಿಗಳನ್ನು ಅಳವಡಿಸಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಿ ಹುಲಿಯನ್ನು ಸೆರೆ ಹಿಡಿಯಬೇಕೆಂದು ಒತ್ತಾಯಿಸಿದ್ದಾರೆ.

ಚಾಮುಂಡಿಬೆಟ್ಟ ಗ್ರಾಪಂ ಕಾಂಗ್ರೆಸ್ ತೆಕ್ಕೆಗೆ



ಚಾಮುಂಡಿಬೆಟ್ಟ, ಜು.28– ಮೈಸೂರಿನ ಚಾಮುಂಡಿಬೆಟ್ಟದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳಾದ ಶ್ರೀಮತಿ ನಾಗಮ್ಮ, ಉಪಾಧ್ಯಕ್ಷರಾಗಿ ವೈ.ಎಸ್. ರವಿಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮ ಪಂಚಾಯ್ತಿ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಗಮ್ಮ, ಉಪಾಧ್ಯಕ್ಷ ಸ್ಥಾನಕ್ಕೆ ವೈ.ಎಸ್. ರವಿಕುಮಾರ್ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಮಮತಾ ಅವರು ಇವರಿಬ್ಬರ ಆಯ್ಕೆಯನ್ನು ಅವಿರೋಧ ಎಂದು ಘೋಷಿಸಿದರು.

ಗ್ರಾಮ ಪಂಚಾಯಿತಿಯಲ್ಲಿ ಒಟ್ಟು 8 ಸದಸ್ಯರ ಬಲವಿದ್ದು, ಕಾಂಗ್ರೆಸ್ ಐದು ಮತ್ತು ಜೆಡಿಎಸ್ ಮೂರು ಸದಸ್ಯರನ್ನು ಹೊಂದಿದೆ. ಇಂದು ನಡೆದ ಚುನಾವಣೆಯಲ್ಲಿ ಐವರು ಸದಸ್ಯರು ಮಾತ್ರ ಭಾಗವಹಿಸಿದ್ದರು. ಗ್ರಾಮಪಂ ಮಾಜಿ ಅಧ್ಯಕ್ಷ ಭರತ್ ಕಾಳಯ್ಯ, ಮಂಜುನಾಥ್, ಪಿಡಿಓ ರೂಪೇಶ್, ಗ್ರಾಮದ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಬಿ.ಸೀಹಳ್ಳಿ ಗ್ರಾಪಂಗೆ ಜಯಕುಮಾರ್ ಅಧ್ಯಕ್ಷ

ಹಿಂದೆ ಅಧ್ಯಕ್ಷರಾಗಿದ್ದ ಎಂ.ಜಯಲಕ್ಷ್ಮಿ ಈಗ ಉಪಾಧ್ಯಕ್ಷ



ಬನ್ನೂರು, ಜು.28–ತಾಲೂಕಿನ ಬಿ.ಸೀಹಳ್ಳಿ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾಗಿ ಎಸ್.ಜೆ.ಜಯಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಈ ಹಿಂದೆ ಅಧ್ಯಕ್ಷರಾಗಿದ್ದ ಎಂ.ಜಯಲಕ್ಷ್ಮಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮದ ಪಂಚಾಯ್ತಿ ಸಭಾಂಗಣದಲ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಸಂಬಂಧ ಕರೆಯಲಾಗಿದ್ದ ಚುನಾವಣಾ ಸಭೆಯಲ್ಲಿ ಜಯಕುಮಾರ್ ಹಾಗೂ ಜಯಲಕ್ಷ್ಮಿ ಇಬ್ಬರು ಮಾತ್ರವೇ ನಾಮಪತ್ರ ಸಲ್ಲಿಸಿದ್ದರಿಂದ ಇವರಿಬ್ಬರು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ಇರ್ಫಾನ್ ಪ್ರಕಟಿಸಿದರು. ಪಂಚಾಯ್ತಿಯ ಒಟ್ಟು 16 ಸದಸ್ಯರ ಪೈಕಿ ಎಂ.ಗೌರಮ್ಮ, ಕೆಂಪಮ್ಮ, ಹೊಂಬೇಗೌಡ, ದೇವಾಜಮ್ಮ, ಗೀತಾ, ಸೌಭಾಗ್ಯ, ಸಿ.ನಾಗರಾಜು, ಎ.ಸಿದ್ದರಾಜು, ಮನೋಹರ, ನಾಗರಾಜ ಶೆಟ್ಟಿ ಚುನಾವಣೆಗೆ ಹಾಜರಾಗಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರೆ, ಮುತ್ತುರಾಜು, ಸೌಂದರ್ಯ, ಜಾನಕಮ್ಮ ಹಾಗೂ ಬಿ.ಸಂಧ್ಯಾ ಸಭೆಗೆ ಗೈರಾಗಿದ್ದರು.

ಪಂಚಾಯ್ತಿ ವರಿಷ್ಠರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಪಂಚಾಯತಿ ಮುಂಭಾಗ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಶಾಸಕಿ ಸುನೀತಾ ವೀರಪ್ಪ ಗೌಡ ಪ್ರಸಕ್ತ ಚುನಾವಣೆಯಲ್ಲಿ ಅಧ್ಯಕ್ಷರ ಆಯ್ಕೆ ಸರ್ವಾನುಮತದಿಂದ ಆಗಿದ್ದು, ನೂತನವಾಗಿ ಆಯ್ಕೆಯಾಗಿರುವ ಅಧ್ಯಕ್ಷ–ಉಪಾಧ್ಯಕ್ಷರು ಪಂಚಾಯ್ತಿಗೆ ಸರ್ಕಾರದಿಂದ ದೊರಕುವ ಅನುದಾನವನ್ನು ಎಲ್ಲ ಗ್ರಾಮಗಳಿಗೆ ಸರಿಸಮಾನವಾಗಿ ಹಂಚಿಕೆ ಮಾಡಿ ಕೆಲಸ ಮಾಡಬೇಕು. ಈಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ಅಧ್ಯಕ್ಷರೂ ನಮ್ಮ ಪಕ್ಷದವರೇ ಆಗಿರುವುದರಿಂದ ಹೆಚ್ಚಿನ ಅಭಿವೃದ್ಧಿ ನಿರೀಕ್ಷಿಸಬಹುದಾಗಿದೆ ಎಂದರು.

ಅಧ್ಯಕ್ಷ ಜೈಕುಮಾರ್ ಮಾತನಾಡಿ, ಬಿ.ಸೀಹಳ್ಳಿ ಗ್ರಾಪಂ ತಾಲೂಕಿನಲ್ಲಿಯೇ ಮಾದರಿ ಪಂಚಾಯ್ತಿ ಮಾಡಬೇಕೆಂಬ ಅಭಿಲಾಷೆ ನನ್ನದಾಗಿದ್ದು, ಸರ್ವಸದಸ್ಯರು ಸಹಕರಿಸುವಂತೆ ಮನವಿ ಮಾಡಿದರು. ಈ ವೇಳೆ ಡಾ.ವೀರಪ್ಪಗೌಡ, ಧನಂಜಯ, ಪಿಡಿಓ ಟಿ.ಎಂ.ಮಹೇಶ್ ಸೇರಿ ದಂತೆ ಅನೇಕ ಮುಖಂಡರು ಹಾಜರಿದ್ದರು.

ಔಷಧಿ ಸಿಂಪಡಿಸುವಾಗ ವಿದ್ಯುತ್ ಸ್ಪರ್ಶದಿಂದ ಯುವ ರೈತ ಸಾವು



ಹೆಚ್.ಡಿ.ಕೋಟೆ: ವಿದ್ಯುತ್ ತಗುಲಿ ಯುವ ರೈತ ಮೃತ ಪಟ್ಟಿರುವ ಘಟನೆ ಶುಕ್ರವಾರ ನಡೆದಿದೆ. ತಾಲೂಕಿನ ಭಾರತಿಪುರ ಗ್ರಾಮದ ಶ್ರೀಕಂಠೇಗೌಡ ಅವರ ಪುತ್ರ ನಾಗರಾಜು (37) ಮೃತಪಟ್ಟ ರೈತ.

ಶುಕ್ರವಾರ ರೈತ ನಾಗರಾಜು ತಮ್ಮ ಜಮೀನಿನಲ್ಲಿ ಬೆಳದಿದ್ದ ಹರಿಶಿಣ ಬೆಳೆಗೆ ಔಷಧಿ ಸಿಂಪಡಿಸುತ್ತಿದ್ದಾಗ ತಮ್ಮ ಜಮೀನಿನಲ್ಲಿ ಹಾದು ಹೋಗಿದ್ದ ವಿದ್ಯುತ್ ಕಂಬದ ತಂತಿಗೆ ತಾಗಿ ಸ್ಥಳದಲ್ಲಿ ರೈತ ಮೃತಪಟ್ಟಿದ್ದಾನೆ.

ಅಕ್ಕಪಕ್ಕದ ರೈತರು ಇದನ್ನು ಗಮನಿಸಿ ಮೃತ ರೈತನ ಕುಟುಂಬಕ್ಕೆ ಮಾಹಿತಿ ನೀಡಿದ್ದಾರೆ. ನಂತರ ಸ್ಥಳಕ್ಕೆ ಬಂದಾಗ ವಿದ್ಯುತ್ ಸಂಪರ್ಕಿಸಿ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ನಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಮರಣೋತ್ತರ ಪರೀಕ್ಷೆ ನಡೆಸಲು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರು. ಯುವ ರೈತ ನಾಗರಾಜು ವಿದ್ಯುತ್ ಸ್ಪರ್ಶದಿಂದ ಮೃತ ಪಡಲು ಕೆಇಬಿ ಅಧಿಕಾರಿಗಳ ನಿರ್ಲಕ್ಷ್ಯ ಕಾರಣ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ಹಲವಾರು ಬಾರಿ ನೆಲಕ್ಕೆ ಬಾಗಿರುವ ವಿದ್ಯುತ್ ಕಂಬ ತಂತಿ ಸರಿಪಡಿಸುವಂತೆ ಮನವಿ ಮಾಡಿದರು. ನಾಳೆ ಮಾಡುವುದಾಗಿ ತಿಳಿಸಿ ನಿರ್ಲಕ್ಷ್ಯ ಮಾಡಿದರು. ಹಾಗಾಗಿ ಚೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿ ಮೃತ ರೈತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತರು ಒತ್ತಾಯಿಸಿದರು. ಮೃತ ರೈತ ಹೆಂಡತಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.


ತುಮ್ಮನೇರಳೆ ಗ್ರಾಪಂ ಕಾಂಗ್ರೆಸ್ ವಶ

ಸುತ್ತೂರು, ಜು.28– ವರುಣ ಕ್ಷೇತ್ರಕ್ಕೆ ಸೇರಿರುವ ತುಮ್ಮನೇರಳೆ ಗ್ರಾಮ ಪಂಚಾಯತಿಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಂದೀಶ್ ಅಧ್ಯಕ್ಷರಾಗಿ, ರೇಣುಕ ಮಹೇಶ್ ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ನಂದೀಶ್ ಮಾತನಾಡಿ, ಈ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಮಂತ್ರಿ ಮಹದೇವಪ್ಪ ಹಾಗೂ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯನವರ ಅಭಿವೃದ್ಧಿ ಕೆಲಸಗಳನ್ನು ನೋಡಿ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತಂದಿದ್ದಾರೆ.

ಪಂಚಾಯತಿ ಸದಸ್ಯರಾದ ಪದ್ಮ ರಾಜಣ್ಣ, ದೀಪು, ಜಗದೀಶ್, ಮಹೇಶ್, ಭಾಗ್ಯಲಕ್ಷ್ಮಿ, ಮಂಗಳಮ್ಮ ಗ್ರಾಮದ ಮುಖಂಡರಾದ ಮಂಡಲ ಪಂಚಾಯಿತಿ ಮಾಜಿ ಅಧ್ಯಕ್ಷ ನಾಗರಾಜು, ಶಿವಣ್ಣ, ಶರತ್ ಕುಮಾರ್, ಸೋಮಶೇಖರ್, ರಾಜಣ್ಣ, ನಂದೀಶ್, ಪಟೇಲ್, ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಚಿಕ್ಕಮಾದಪ್ಪ, ಗುರುಸ್ವಾಮಿ, ಟಿಟಿ ಮಹೇಶ್, ಬಸವಣ್ಣ, ನಂಜುಂಡಸ್ವಾಮಿ, ಜಯರಾವ್, ಗ್ರಾಮಗಳ ಮುಖಂಡರು ಹಾಜರಿದ್ದರು.

ಕೊಡಗಿನಲ್ಲಿ ಧಾರಾಕಾರ ಮಳೆ: ಕೆಆರ್‌ಎಸ್ ಭರ್ತಿಗೆ 13 ಅಡಿ ಬಾಕಿ



ಮೈಸೂರು, ಜು.28(ಬಿಎಲ್‌ಯು)– ಕೊಡಗಿನಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವ ಕಾರಣ ಜೀವ ನದಿ ಕಾವೇರಿ ಉಕ್ಕಿ ಹರಿಯುತ್ತಿದೆ. ಇದರಿಂದ ಕೆಆರ್‌ಎಸ್‌ಗೆ ಬರುತ್ತಿರುವ ನೀರಿನ ಪ್ರಮಾಣ ಹೆಚ್ಚಾಗಿದ್ದು, ಕೃಷ್ಣರಾಜಸಾಗರ ಜಲಾಶಯದ ಮಟ್ಟ 111.54 ಅಡಿಗೆ ಏರಿಕೆಯಾಗಿದೆ.

ಕಾವೇರಿ ಜಲಾಯನ ಪ್ರದೇಶದಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿದೆ. ಇದರಿಂದ ಕೃಷ್ಣರಾಜಸಾಗರದ ನೀರಿನ ಮಟ್ಟ ದಿನ ಕಳೆದಂತೆ ಹೆಚ್ಚಾಗುತ್ತಿದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 111.54 ಅಡಿಗಳಾಗಿದೆ. ಜಲಾಶಯಕ್ಕೆ 26,135 ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ. ಜಲಾಶಯ ಇನ್ನು ಭರ್ತಿಯಾಗದ ಕಾರಣ ಕೇವಲ 3137 ಕ್ಯೂಸೆಕ್ ನೀರನ್ನು ಮಾತ್ರ ಹೊರಗೆ ಬಿಡಲಾಗುತ್ತಿದೆ.

ಕೆಆರ್‌ಎಸ್ ಭರ್ತಿಯಾಗಲು ಇನ್ನು 13 ಅಡಿ ಮಾತ್ರ ಬಾಕಿ ಇದೆ. ಕೊಡಗಿನಲ್ಲಿ ಹೀಗೆ ಉತ್ತಮ ಮಳೆಯಾದರೆ ಮುಂದಿನ ವಾರದ ವೇಳೆಗೆ ಕೆಆರ್‌ಎಸ್ ಭರ್ತಿ ಆಗುವುದರಲ್ಲಿ ಸಂಶಯವಿಲ್ಲ.

ಕೆಆರ್‌ಎಸ್ ಜಲಾಶಯವು 49.452 ಟಿಎಂಸಿ ನೀರಿನ ಸಾಂದ್ರತೆ ಹೊಂದಿದೆ. ಪ್ರಸ್ತುತ ಜಲಾಶಯದಲ್ಲಿ 33.299 ಕ್ಯೂಸೆಕ್ ನೀರು ಶೇಖರಣೆಯಾಗಿದೆ.

ಕ್ಲಿನಿಕ್‌ಗಳಲ್ಲಿ ತ್ಯಾಜ್ಯ ವಿಂಗಡಣೆ ಮಾಡದಿದ್ದರೆ ಕ್ರಮ ಕೈಗೊಳ್ಳಿ

ಮೈಸೂರು, ಜು.28– ಕ್ಲಿನಿಕ್‌ಗಳಲ್ಲಿ ತ್ಯಾಜ್ಯ ವಿಂಗಡಣೆ ಮಾಡದೆ ವಿಲೇವಾರಿ ಮಾಡುತ್ತಿರುವ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪರಿಸರ ಮಾಲಿನ್ಯ ನಿಯಂತ್ರಣಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ, ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ಮೇಲ್ವಿಚಾರಣೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿರುವ ಸರ್ಕಾರಿ, ಖಾಸಗಿ ಮತ್ತು ಕ್ಲಿನಿಕ್‌ಗಳಲ್ಲಿ ತ್ಯಾಜ್ಯ ಸಂಗ್ರಹಣೆ ವಿಂಗಡಣೆ ಹಾಗೂ ವಿಲೇವಾರಿಯ ಬಗ್ಗೆ ಸಂಬಂಧಿಸಿದ ಆಸ್ಪತ್ರೆಗಳ ವರದಿಗಳನ್ನು ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು. 2023–24ನೇ ಸಾಲಿನ ಆಸ್ಪತ್ರೆಗಳಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಆರ್ಥಿಕ ನೆರವು ನೀಡುವುದಾಗಿ ತಿಳಿಸಿದರು.



ರಾಜ್ಯ ಮಟ್ಟದ ಅತ್ಯುತ್ತಮ ಸಿ.ಹೆಚ್.ಸಿ ಜಯನಗರ(ನಗರ), ಗ್ರಾಮಾಂತರ ಸಿ.ಹೆಚ್.ಸಿ ಮೂಗೂರು (ತಿ.ನರಸೀಪುರ), ಅತ್ಯುತ್ತಮ 24X7 ಜಿಲ್ಲಾ ಮಟ್ಟದಲ್ಲಿ ಪಿ.ಹೆಚ್.ಸಿ ಮುಳ್ಳೂರು ಆಸ್ಪತ್ರೆಗಳ ವೈದ್ಯಕೀಯ ಅಧಿಕಾರಿಗಳಿಗೆ ಅಭಿನಂದಿಸಿ, ಪ್ರಸ್ತುತ ಜಿಲ್ಲೆಯಲ್ಲಿ 07 ಆಸ್ಪತ್ರೆಗಳಾದ ಸಮುದಾಯ ಆರೋಗ್ಯ ಕೇಂದ್ರ ಜಯನಗರ, ವಿ.ವಿ.ಪುರಂ, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕೆ.ಆರ್. ನಗರ, ನಂಜನಗೂಡು, ಹೆಚ್.ಡಿ. ಕೋಟೆ ಮತ್ತು ಟಿ.ನರಸೀಪುರ, ಹಾಗೂ ಚೆಲು ವಾಂಬ ಆಸ್ಪತ್ರೆಗಳು ಲಕ್ಷ್ಯ ಮಾನದಂಡದಲ್ಲಿ ರಾಷ್ಟ್ರೀಯ ಪ್ರಮಾಣೀಕೃತವಾಗಿರುವುದನ್ನು ಅಭಿನಂದಿಸಿದರು. ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಬನ್ನಿಮಂಟಪ NQASನಲ್ಲಿ ಪ್ರಮಾಣೀಕೃತವಾಗಿರುವುದನ್ನು ಅಭಿನಂದಿಸಿದರು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಆರೋಗ್ಯ ಕೇಂದ್ರಗಳನ್ನು ಪ್ರಮಾಣೀಕರಿಸಲು ಸಲಹೆ ಸೂಚನೆಗಳನ್ನು ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳನ್ನೊಳಗೊಂಡಂತೆ ಇತರರು ಉಪಸ್ಥಿತರಿದ್ದರು.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 05-SNT-MYS-2023
ದಿನಾಂಕ: 24.07.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಮೈಸೂರು ವಿಭಾಗದ ಕರಜಗಿ–ಸಂಪಿಗೆ ರಸ್ತೆಯ ವಿಭಾಗದಲ್ಲಿರುವ ಆರ್‌ಇ/ಬೆಂಗಳೂರು ಯೋಜನಾ ಘಟಕದಲ್ಲಿ ಚಾಲನೆಯಾಗಿರುವ ವಿದ್ಯುದೀಕರಣ ಕೆಲಸಗಳ ವಿವಿಧ ಸಿಗ್ನಲಿಂಗ್ ಕಾಮಗಾರಿಗಳ ಕಾರ್ಯಾರಂಭ.	ರೂ. 2,83,04,771.60
2	ಮೈಸೂರು ವಿಭಾಗದಲ್ಲಿ (ಹೆಚ್‌ಎಂಆರ್‌ಡಿಸಿ ವಿಭಾಗ ಹೊರತುಪಡಿಸಿ) ದೋಷಪೂರಿತ ಸಿಗ್ನಲ್ ಕೇಬಲ್‌ಗಳ ಮಾರ್ಪಡಿಸುವಿಕೆ.	ರೂ. 1,28,18,078.05
3	ಮೈಸೂರು ವಿಭಾಗದ ಮೈಸೂರು–ಹಾಸನ ನಡುವೆ ಆರ್‌ವಿಟಿಇಎಸ್ ಲಿಮಿಟೆಡ್‌ರವರಿಂದ ಕಾರ್ಯಾರಂಭವಾದ ಆರ್‌ಇ ಕೆಲಸಗಳಿಗೆ ಸಂಬಂಧಿಸಿದಂತೆ ದೋಷಪೂರಿತ ಟೆಲಿಕಾಂ ಕೇಬಲ್‌ಗಳ ಮರು ಸ್ಥಾಪನೆ.	ರೂ. 35,51,996.20
4	ಮೈಸೂರು ವಿಭಾಗದ ಹಾಸನ–ಅರಸೀಕೆರೆ ನಡುವೆ ಆರ್‌ವಿಟಿಇಎಸ್ ಲಿಮಿಟೆಡ್‌ರವರಿಂದ ಕಾರ್ಯಾರಂಭವಾದ ಆರ್‌ಇ ಕೆಲಸಗಳಿಗೆ ಸಂಬಂಧಿಸಿದಂತೆ ದೋಷಪೂರಿತ ಟೆಲಿಕಾಂ ಕೇಬಲ್‌ಗಳ ಮರು ಸ್ಥಾಪನೆ.	ರೂ. 26,64,320.53
5	ಮೈಸೂರು ವಿಭಾಗದ ಕಡೂರು–ಚಿಕ್ಕಮಗಳೂರು ನಡುವೆ ಆರ್‌ವಿಟಿಇಎಸ್ ಲಿಮಿಟೆಡ್‌ರವರಿಂದ ಕಾರ್ಯಾರಂಭವಾದ ಆರ್‌ಇ ಕೆಲಸಗಳಿಗೆ ಸಂಬಂಧಿಸಿದಂತೆ ದೋಷಪೂರಿತ ಟೆಲಿಕಾಂ ಕೇಬಲ್‌ಗಳ ಮರು ಸ್ಥಾಪನೆ.	ರೂ. 13,34,089.11

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.08.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಮೈಸೂರು

PUB/266/AAD/PRB/SWR/2023-24

S.W.Railways SWRRLY SWRRLY

Sri Vasavi Shanthidhama Public Charitable Trust (R)

Alanahalli Extension, T.Narasipura Road, Mysore-570 028.
Ph: (0821) 2902326. Mob: 9740032346
Office: No. 3, 2nd Floor, Vishweshwariah Building, K.R. Circle, Mysore-570 001. Ph: 0821-2424577

ಪ್ರಕಟಣೆ

27-7-2023

ನಮ್ಮ ಮೇಲ್ಕಂಡ ಆಶ್ರಮದಲ್ಲಿ ವಾಸಿಸಲು ಬಂದಿದ್ದ ಕು॥ ವೀಣಾ ಸುಬ್ರಮಣ್ಯಂ ಬಿನ್ ಸುಬ್ರಮಣ್ಯಂರವರು ನಮ್ಮ ಆಶ್ರಮದಿಂದ 2022ನೇ ಡಿಸೆಂಬರ್ 2ನೇ ವಾರ ತಮಗೆ ಕೊಟ್ಟಿದ್ದ ರೂಂ ನಂ. ಎಫ್.ಎಂ.ಸಿ. 5ಬಿ ಯ ರೂಂ ಅನ್ನು, ಲಾಕ್ ಮಾಡಿ ಸಂಬಂಧಿಕರ ಮನೆಗೆ ಹೋಗಿ ಬರುತ್ತೇವೆಂದು ಹೋದವರು ಇದುವರೆಗೂ ಬಂದಿರುವುದಿಲ್ಲ. ಆದ್ದರಿಂದ ನಾವು ಆಶ್ರಮದ ವತಿಯಿಂದ ಮುಂದಿನ ಕ್ರಮವನ್ನು ಜರುಗಿಸಬೇಕಾಗಿರುವುದರಿಂದ ಈ ಪ್ರಕಟಣೆಯನ್ನು ನೀಡಲಾಗಿರುವ ದಿನಾಂಕದಿಂದ 10 ದಿನಗಳ ಒಳಗೆ ಸಂಬಂಧಪಟ್ಟವರು ಸಂಪರ್ಕಿಸಬೇಕೆಂದು ಕೋರಲಾಗಿದೆ.

ಸಹಿ/– ಮ್ಯಾನೇಜರ್

ಕರ್ನಾಟಕ ಸರ್ಕಾರ

ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಹಾಸನ

ದೂರವಾಣಿ ಸಂಖ್ಯೆ:08172–256013 mail ID:ddszphsn@gmail.com

ಸಂ:ರೇಉನಿ/ಹಾಜಿಪಂ/ಅಭಿ/ಹೊಗು/ಟೆ/53/2023–24 ದಿನಾಂಕ:28/07/2023.

ಇ.ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಇ–ಟೆಂಡರ್ ಮರು ಪ್ರಕಟಣೆ

2023–24ನೇ ಸಾಲಿಗೆ ರೇಷ್ಮೆ ಇಲಾಖೆಯ ಹಾಸನ ವ್ಯಾಪ್ತಿಯ ಅಧೀನ ಸಂಸ್ಥೆಗಳ ಕಾರ್ಯಾಧಾರಿತ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಇ–ಟೆಂಡರ್ ಕರೆಯುವ ಬಗ್ಗೆ ಇ.ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಇ–ಟೆಂಡರ್ ಮರು ಪ್ರಕಟಣೆ 1)ಟೆಂಡರ್ ಪ್ರಕಟಣೆ ದಿನಾಂಕ:28/07/2023 2)ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: ರೂ 23,00,000/– 3)ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : ದಿನಾಂಕ: 07/08/2023 E procurement ಸಂಜೆ 3:00 ರವರೆಗೆ 4)ತಾಂತ್ರಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ: ದಿನಾಂಕ : 08/08/2023 ಸಂಜೆ: 04:00ಗಂಟೆಗೆ ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಡಿ.ಎಂ ಹಳ್ಳಿ ಬಿ.ಎಂ ರಸ್ತೆ, ಹಾಸನ 5)ಆರ್ಥಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ: 14/08/2023 ಸಂಜೆ: 04:00ಗಂಟೆಗೆ ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಡಿ.ಎಂ ಹಳ್ಳಿ ಬಿ.ಎಂ ರಸ್ತೆ, ಹಾಸನ 6)ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: ರೂ.23,000/– 7)ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ರೇಷ್ಮೆ ಉಪನಿರ್ದೇಶಕರು,ಜಿಲ್ಲಾ ಪಂಚಾಯತ್, ಹಾಸನ ದೂರವಾಣಿ ಸಂಖ್ಯೆ: 08172–256013 ಟೆಂಡನರ್‌ನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು ಇ–ಪೋರ್ಟಲ್ ನಲ್ಲಿ ಪಡೆಯಬಹುದು.

ಸಹಿ/– ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್,ಹಾಸನ

ವಾಸಾಸಂಇ/ಹಿಸನಿ/ಹಾಸನ/166/ಕೆಎಸ್‌ಎಂಸಿಎ/170/2023–24

ಪುರಸಭೆ ಕಾರ್ಯಾಲಯ, ಕುಶಾಲನಗರ

(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ನಂ: ಪುರಸಭೆ.ಕು./ಜೆ.ಇ/ಟಿ.ಪ್ರ/02/2023-24 ದಿನಾಂಕ: 27-07-2023

ಈ ಮೂಲಕ ಪ್ರಕಟಿಸುವುದೇನೆಂದರೆ, ಸ್ವಚ್ಛ ಭಾರತ್ ಮಿಷನ್-2 ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000ರಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (KW/4) ನಿಯಮಾವಳಿಯಂತೆ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರ್ ವಿವರಗಳನ್ನು http://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ, ಕಾಮಗಾರಿ ವಿವರಣೆ, ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಟೆಂಡರ್ ಸಲ್ಲಿಸುವ ವಿವರ

1.ಪೂರ್ವಭಾವಿ ಸಭೆ ದಿನಾಂಕ ಮತ್ತು ಸ್ಥಳ : 08-08-2023ರಂದು ಸಮಯ 03:00 ಗಂಟೆಗೆ, ಪುರಸಭೆ ಕಾರ್ಯಾಲಯ ಕುಶಾಲನಗರ.
2.ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 28-08-2023 ಅಪರಾಹ್ನ 05.30 ಗಂಟೆ
3.ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30-08-2023ರ ಅಪರಾಹ್ನ 11.00 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನದಂದು
4.ಆರ್ಥಿಕ ಬಿಡ್ ತೆರೆಯುವ ದಿನಾಂಕ : 04-09-2023ರ ಅಪರಾಹ್ನ 11.00 ಗಂಟೆಗೆ

ಕ್ರ.ಸಂ.	ಕಾಮಗಾರಿಯ ಹಸರು	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ. ಮೊತ್ತ	ಅವಧಿ
1.	Bioremediation of Historic Waste in Bhuvanagiri Landfill Site comes under Kushalnagar TMC limits	3,17,70,000.00	4,76,550.00	6.58 months. Excluding 15 days of mobilization period and 1 month Windrow formation an stabilization and 1 month monsoon
INDENT NO: DMA/2023-24/OW/WORK_INDENT973				

ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಕುಶಾಲನಗರ

ಸಹಿ/– ಶ್ರೀ ಕೃಷ್ಣ ಪ್ರಸಾದ್, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ